ಎನ್. ಪ್ರಭುಸ್ವಾಮಿ

ಅಮೆರಿಕಾದಲ್ಲಿ ಭಾರತೀಯ ವಿದ್ಯಾರ್ಥಿಗಳು

ಪ್ರಚಾರ ಪುಸ್ತಕಮಾಲೆ ೧೯೫–೧೯೬

ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

೧೯೭೨

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ ೧೯೫–೧೯೬

ಅಮೆರಿಕಾದಲ್ಲಿ ಭಾರತೀಯ ವಿದ್ಯಾರ್ಥಿಗಳು

ಎನ್. ಪ್ರಭುಸ್ವಾಮಿ

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೬

ಮೊದಲನೆಯ ಮುದ್ರಣ ೧೯೭೨

೫೦೦೦ ಪ್ರತಿಗಳು

ಬೆಲೆ : 00–50 ಪೈಸೆ

ಪ್ರಕಾಶಕರು :

ಡೈರೆಕ್ಟರ್

ಪ್ರಸಾರಾಂಗ

ಮಾನಸಗಂಗೋತ್ರಿ, ಮೈಸೂರು–೬.

ಮುದ್ರಣ : ಶ್ರೀ ವೀರಾ ಪ್ರಿಂಟರ್ಸ್, ಮೈಸೂರು–1

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವ ಸಮಯದಲ್ಲಿಯೂ ಮೊದಲನೆಯ 'ಕಾನ್ವೋಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚ ಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ ಸಮಷ್ಟಿ ಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ ನಾಡಿನ ಮೂಲೆ ಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸಿದ ವಿಷಯಗಳನ್ನು ಕುರಿತು ಸರಳವೂ ಸುಲಭ ಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳಿವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ.

ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನಗಳು ನೆಲಸಿ, ಸಾಮಾನ್ಯ ಜನರಂತೆಯೇ ಇದ್ದುಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾರೆ ಮತ್ತು ಇತರರಿಗೂ ಆನಂದ ವನ್ನುಂಟುಮಾಡುತ್ತಾರೆ. ಈ ಉಪನ್ಯಾಸಗಳು ವಿಶ್ವವಿದ್ಯಾ ನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲದವರಿಗೆ ವಿಶ್ವವಿದ್ಯಾ ನಿಲಯದ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ; ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ; ನಮ್ಮ ಸಮಾಜದಲ್ಲಿನ ಭೇದಭಾವ ಗಳನ್ನು ಹೋಗಲಾಡಿಸಿ ಸಮಾನತೆಯನ್ನು ಸ್ಥಾಪಿಸಲು ಸಹಾಯಕ ವಾಗುತ್ತವೆ; ವಿಶ್ವವಿದ್ಯಾನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ದುಃಖಕ್ಕೆ ಮೂಲ ಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆ ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳಿವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆ

ಯಲ್ಲಿ ಈಗಾಗಲೆ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ, ಸಮಾಜ ವಿಜ್ಞಾನ, ಅರ್ಥಶಾಸ್ತ್ರ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ, ಮುಂತಾದ ವಿಷಯಗಳನ್ನು ಕುರಿತ ನೂರತೊಂಬತ್ತನಾಲ್ಕು ಪುಸ್ತಕಗಳು ಪ್ರಕಟವಾಗಿವೆ. ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗುತ್ತದೆ. ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಎನ್. ಪ್ರಭುಸ್ವಾಮಿ ಅವರ 'ಅಮೆರಿಕಾದಲ್ಲಿ ಭಾರತೀಯ ವಿದ್ಯಾರ್ಥಿಗಳು' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ದೇ. ಜವರೇಗೌಡ.

ಕುಲಪತಿ

ಅರಿಕೆ

ಇದೊಂದು ಪುಸ್ತಕವಾಗಲು ಸರ್ವ ವಿಧಗಳಲ್ಲೂ ಕಾರಣರಾದ ನನ್ನ ಪೂಜ್ಯ ಸ್ನೇಹಿತರುಗಳನ್ನು ಮತ್ತು ಗುರುಗಳನ್ನು ನೆನಪು ಮಾಡಿಕೊಳ್ಳುವುದು ನನ್ನ ಆದ್ಯ ಕರ್ತವ್ಯವಾಗಿದೆ. ಈ ಪುಸ್ತಕವನ್ನು ಬರೆಯಬೇಕೆಂದು ಆಲೋಚಿಸಿದಾಗ ನನಗೆ ತಮ್ಮ ಅನುಭವಗಳನ್ನು ತಿಳಿಸಿದ್ದಕ್ಕಾಗಿ ನನ್ನ ಸ್ನೇಹಿತರಾದ ಡಾ. ಮಾದಯ್ಯ, ಅರ್ಥಶಾಸ್ತ್ರದ ರೀಡರ್, ಮಾನಸಗಂಗೋತ್ರಿ ; ಶ್ರೀ ಪುಟ್ಟ ಮಾದಯ್ಯ, ಗಣಿತಶಾಸ್ತ್ರದ ರೀಡರ್, ಮಾನಸಗಂಗೋತ್ರಿ ; ಡಾ. ಮಾದಯ್ಯ, ರಸಾಯನಶಾಸ್ತ್ರದ ರೀಡರ್, ಕರ್ಣಾಟಕ ವಿಶ್ವವಿದ್ಯಾನಿಲಯ, ಧಾರವಾಡ ; ಡಾ. ಎಫ್. ಪಾಟೀಲ್, ರಸಾಯನಶಾಸ್ತ್ರದ ರೀಡರ್, ಬೆಂಗಳೂರು ವಿಶ್ವವಿದ್ಯಾನಿಲಯ; ಡಾ. ರಹಮಾನ್, ವಾಣಿಜ್ಯಶಾಸ್ತ್ರದ ರೀಡರ್, ಆಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯ; ಡಾ. ಶ್ರೀನಿವಾಸನ್, ರಸಾಯನಶಾಸ್ತ್ರದ ಅಸೋಸಿಯೇಟ್ ಪ್ರೊಫೆಸರ್, ಆಲ್ಬರ್ಟ ವಿಶ್ವವಿದ್ಯಾನಿಲಯ, ಕೆನಡಾ ; ಮತ್ತು ಶ್ರೀ ನಂಜಪ್ಪ, ಗಣಿತಶಾಸ್ತ್ರದ ಅಧ್ಯಾಪಕ, ಕೆನಡಾ ; ಇವರುಗಳಿಗೆ ನಾನು ಚಿರಋಣಿ.

ಈ ಪುಸ್ತಕವನ್ನು ಬರೆಯಲು ನನಗೆ ಪ್ರೋತ್ಸಾಹವಿತ್ತ ಡಾ. ಪ್ರಭುಶಂಕರ, ಡೈರೆಕ್ಟರ್, ಪ್ರಸಾರಾಂಗ, ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಪಿ. ಯು. ಸಿ. ಶಿಕ್ಷಣ ವಿಭಾಗದ ಡೈರೆಕ್ಟರ್ ; ಡಾ. ಜಿ. ಟಿ. ಹುಚ್ಚಪ್ಪ, ಅರ್ಥಶಾಸ್ತ್ರದ ಪ್ರೊಫೆಸರ್, ಮೈಸೂರು ವಿಶ್ವವಿದ್ಯಾನಿಲಯ ; ಶ್ರೀ ರುದ್ರೇಗೌಡ, ರಾಜನೀತಿಶಾಸ್ತ್ರದ

ರೀಡರ್, ಮಹಾರಾಜಾ ಕಾಲೇಜು; ಶ್ರೀ ಚೆನ್ನಬಸಪ್ಪ ಅರ್ಥ ಶಾಸ್ತ್ರದ ರೀಡರ್, ಮಹಾರಾಜಾ ಕಾಲೇಜು; ಮತ್ತು ಶ್ರೀ ನಾರಾಯಣಶೆಟ್ಟರು, ಕನ್ನಡ ರೀಡರ್, ಮಹಾರಾಜಾ ಕಾಲೇಜು ಇವರುಗಳಿಗೆ ನನ್ನ ಕೃತಜ್ಞತೆಗಳು. ನನ್ನ ಮೊದಲನೆ ಲೇಖನ, "ಅಮೆರಿಕಾ ವಿಶ್ವವಿದ್ಯಾನಿಲಯಗಳಲ್ಲಿ ಪದವಿಪೂರ್ವ ವಿದ್ಯಾಭ್ಯಾಸ" ಕನ್ನಡ ಪ್ರಭಾ ಪತ್ರಿಕೆಯ ಡಿಸೆಂಬರ್ 11 ಮತ್ತು 12, 1969ರ ಸಂಚಿಕೆಯಲ್ಲಿ ಪ್ರಕಟವಾದ ಮೇಲೆ, ಈ ಪುಸ್ತಕವನ್ನು ಬರೆಯಲು ಮೇಲ್ಕಂಡ ಮಹನೀಯರುಗಳು ನನಗೆ ತುಂಬಾ ಪ್ರೋತ್ಸಾಹಿಸಿ ದರು. ಅವರ ಪ್ರೋತ್ಸಾಹದ ಪರಿಣಾಮವಾಗಿ ಈ ಪುಸ್ತಕ ಬೆಳ ಕಿಗೆ ಬಂದಿತು.

ಹಸ್ತಪ್ರತಿಯನ್ನು ಪರಿಶೀಲಿಸಿ ಸೂಕ್ತ ಸಲಹೆಗಳನ್ನು ಕೊಟ್ಟ ಡಾ. ಹೆಚ್.ಎಸ್. ಬಿಳಿಗಿರಿ, ರೀಡರ್, ಡೆಕ್ಕನ್ ಕಾಲೇಜು, ಪೂನಾ; ಮತ್ತು ನನ್ನ ಸಹೋದ್ಯೋಗಿ ಶ್ರೀ ರೇಣುಕಾರ್ಯರವ ರಿಗೂ ನನ್ನ ವಂದನೆಗಳು. ಆದರೆ ಈ ಪುಸ್ತಕದಲ್ಲಿ ಬರೆದಿರುವ ಅಭಿಪ್ರಾಯಗಳಿಗೆ ಮೇಲ್ಕಂಡ ಮಹನೀಯರಾರೂ ಕಾರಣರಲ್ಲ. ಅದರ ಸಂಪೂರ್ಣ ಜವಾಬ್ದಾರಿ ನನ್ನದಾಗಿದೆ.

ಈ ವಿಷಯವನ್ನು ಕುರಿತು ಭಾಷಣ ಮಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಂಗಳೂರಿನ ಕಾಲೇಜ್ ಆಫ್ ಎಜು ಕೇಷನ್, ಪ್ರಿನ್ಸಿಪಾಲರವರಿಗೂ ಮತ್ತು ಬೀರೂರಿನ ಬೇಸಿಕ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನ ಪ್ರಿನ್ಸಿಪಾಲರಿಗೂ ನನ್ನ ವಂದನೆ ಗಳು.

ಪುಸ್ತಕದ ಪ್ರಕಟಣೆಗೆ ಕಾರಣರಾದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಅಧಿಕಾರಿಗಳಿಗೆ ನನ್ನ ನಮಸ್ಕಾರಗಳು.

ಅರ್ಥಶಾಸ್ತ್ರ ವಿಭಾಗ ಎನ್. ಪ್ರಭುಸ್ವಾಮಿ
ಮಾನಸಗಂಗೋತ್ರಿ, ಮೈಸೂರು.

ಪೀಠಿಕೆ

ನಮ್ಮ ಮತ್ತು ಬ್ರಿಟಿಷ್ ವಿಶ್ವವಿದ್ಯಾನಿಲಯಗಳಲ್ಲಿ ಎಂ.ಎ ; ಎಂ.ಎಸ್‌ಸಿ; ಎಂ.ಕಾಂ ; ಎಂ.ಇಡಿ ಮತ್ತು ಪಿಎಚ್.ಡಿ. ಬೋಧನ ಕ್ರಮಗಳನ್ನು ಸ್ನಾತಕೋತ್ತರ ಬೋಧನ ಕ್ರಮಗಳೆಂದು ಕರೆಯುತ್ತೇವೆ. (Post–graduate Courses). ಆದರೆ ಅಮೆರಿಕಾದ ಸಂಯುಕ್ತ ಸಂಸ್ಥಾನಗಳು (U.S.A.) ಮತ್ತು ಕೆನಡಾದ ವಿಶ್ವ ವಿದ್ಯಾನಿಲಯಗಳಲ್ಲಿ ಇವನ್ನು ಪದವೀಧರ ಬೋಧನ ಕ್ರಮಗಳೆಂದು (Graduate Courses) ಕರೆಯುತ್ತಾರೆ. ನಮ್ಮ ದೇಶದಿಂದ ಅನೇಕ ವಿಶ್ವವಿದ್ಯಾನಿಲಯಗಳ ಉಪಾಧ್ಯಾಯರುಗಳು ಮತ್ತುಎಂ.ಎ; ಎಂ.ಎಸ್‌ಸಿ ; ಎಂ.ಕಾಂ ; ಮತ್ತು ಎಂ. ಇಡಿ ; ಪದವಿಗಳನ್ನು ಪಡೆದಿರುವ ವಿದ್ಯಾರ್ಥಿಗಳು, ಅಮೆರಿಕಾದ ಮತ್ತು ಕೆನಡಾದ ವಿಶ್ವವಿದ್ಯಾನಿಲಯಗಳಿಗೆ, ಪಿಎಚ್.ಡಿ. ಪದವಿಯನ್ನು ಪಡೆಯುವುದಕ್ಕೋಸ್ಕರ ಓದಲು ಹೋಗುತ್ತಾರೆ. ಆದರೆ ಈಗ ಕೆಲವು ವರ್ಷಗಳಿಂದ ಓದಲು ಹೋದವರ ಪೈಕಿ ಅನೇಕರು ಪಿಎಚ್.ಡಿ ಡಿಗ್ರಿ ಪಡೆಯದೆ ನಿರಾಶೆಯಿಂದ ವಾಪಸ್ಸು ಬರುತ್ತಿದ್ದಾರೆ. ಕೆಲವರು ಕೇವಲ 9 ತಿಂಗಳುಗಳ ಕಾಲ ಇದ್ದು ವಾಪಸ್ಸು ಬರುತ್ತಾರೆ. ಇನ್ನೂ ಕೆಲವರು 2ರಿಂದ 7 ವರ್ಷಗಳವರೆಗೆ ಇದ್ದು ಪದವಿ ಪಡೆಯದೆ ನಿರಾಶೆಯಿಂದ ಹಿಂತಿರುಗುತ್ತಾರೆ. ಮತ್ತೆ ಕೆಲವರು 3 ಅಥವಾ 4 ವರ್ಷಗಳ ಕಾಲ ಓದಿದ ಮೇಲೆ ಪಿಎಚ್.ಡಿ ಪದವಿ ಪಡೆಯದೆ ಎಂ.ಎ ಅಥವಾ ಎಂ.ಎಸ್. (ಮಾಸ್ಟರ್ ಆಫ್ ಸೈನ್ಸ್ ಪದವಿಗೆ ಅಮೆರಿಕಾದ

ವಿಶ್ವವಿದ್ಯಾನಿಲಯಗಳಲ್ಲಿ ಎಂ. ಎಸ್. ಎಂದು ಮಾತ್ರ ಕರೆಯುತ್ತಾರೆ.) ಪದವಿ ಪಡೆದು ವಾಪಸ್ಸು ಬರುತ್ತಾರೆ. ಹೀಗೆ ವಾಪಸ್ಸು ಬಂದವರನ್ನು ಏಕೆ ಪಿಎಚ್.ಡಿ ಪದವಿ ಪಡೆಯಲಿಲ್ಲ ಎಂದು ಕೇಳಿದರೆ ಅವರು ಒಂದು ಮಾಮೂಲು ಉತ್ತರ ಕೊಡುತ್ತಿದ್ದರು. ಪಿಎಚ್.ಡಿ ಪ್ರಬಂಧನನ್ನು ಬರೆದುಕೊಟ್ಟು ಬಂದಿದ್ದೇವೆ, ಅದಕ್ಕೆ ಅಲ್ಲಿಯ ವಿಶ್ವವಿದ್ಯಾನಿಲಯದ ಒಪ್ಪಿಗೆ ದೊರೆತ ಕೂಡಲೇ ಪದವಿ ಬರುತ್ತದೆ ಎಂದು ಹೇಳುತ್ತಿದ್ದರು. ವಿದೇಶಗಳಿಗೆ ಹೋಗಿ ಬರದೆ ಇದ್ದ ನನ್ನ ಅಧ್ಯಾಪಕ ಮಿತ್ರರು ಇದನ್ನು ನಂಬಿಕೊಂಡು ಇರುತ್ತಿದ್ದರು. ಆದರೆ ಅವರುಗಳು ನಮ್ಮ ದೇಶಕ್ಕೆ ವಾಪಸ್ಸು ಬಂದ ಮೇಲೆ 3 ಅಥವಾ 4 ವರ್ಷಗಳಾದರೂ ಪದವಿ ಪಡೆದ ಸೂಚನೆಯೆ ಕಾಣುತ್ತಿರಲಿಲ್ಲ. ಇಂತಹ ಪರಿಸ್ಥಿತಿಯನ್ನು ನಾನು ಮತ್ತು ನನ್ನ ಕೆಲವು ಸ್ನೇಹಿತರು ಅಮೆರಿಕಾದ ಸಂಯುಕ್ತ ಸಂಸ್ಥಾನಗಳಿಗೆ ಮತ್ತು ಕೆನಡಾಕ್ಕೆ ಹೋಗುವತನಕ ಅರ್ಥಮಾಡಿಕೊಳ್ಳಲಾಗಲಿಲ್ಲ. 1956ನೆ ಇಸವಿ ಆದಮೇಲೆ ವಿದೇಶಗಳಿಗೆ ಹೋಗಿದ್ದು ನಿರಾಶರಾಗಿ ಬರುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಆದುದರಿಂದ ನಮ್ಮ ಸಮಾಜಕ್ಕೆ ಅದರಲ್ಲಿಯೂ ನಮ್ಮ ಅಧ್ಯಾಪಕ ವರ್ಗದವರಿಗೆ ಮತ್ತು ವಿದ್ಯಾರ್ಥಿಗಳಿಗೆ ನಿಜ ಸ್ಥಿತಿಯನ್ನು ತಿಳಿಸಬೇಕೆನ್ನುವ ಉದ್ದೇಶದಿಂದ ಈ ಸಣ್ಣ ಪುಸ್ತಕವನ್ನು ಬರೆಯಲಾಗಿದೆ.

ಈ ಪುಸ್ತಕದಲ್ಲಿ ಅಮೆರಿಕಾದ ವಿಶ್ವವಿದ್ಯಾನಿಲಯಗಳು ಎಂದು ಬರೆದಾಗಲೆಲ್ಲಾ ಅದು ಕೆನಡಾ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳೆರಡಕ್ಕೂ ಅನ್ವಯಿಸುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ವಾಚಕರನ್ನು ಕೋರುತ್ತೇನೆ. ಅಮೆರಿಕಾ ಮತ್ತು

ಕೆನಡಾ ವಿಶ್ವವಿದ್ಯಾನಿಲಯಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಾದ ಪದವೀಧರ ವಿದ್ಯಾಭ್ಯಾಸ ಪದ್ಧತಿಯನ್ನು ಬೆಳೆಯಿಸಿಕೊಂಡು ಬಂದಿರುವುದರಿಂದ ಈ ಪುಸ್ತಕದಲ್ಲಿ ನಮೂದಿಸಲಾಗಿರುವ ವಿಷಯಗಳೆಲ್ಲವೂ ಎರಡು ದೇಶಗಳಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಕಂಡುಬರುತ್ತವೆ.

ನಾನು ಮತ್ತು ನನ್ನ ಸ್ನೇಹಿತರು ಕೆನಡಾ ಮತ್ತು ಅಮೇರಿಕಾಕ್ಕೆ ಹೋಗುವುದಕ್ಕೆ ಮುನ್ನ ನಮಗಿಂತ ಮೊದಲು ಹೋಗಿ ಬಂದಿದ್ದ ಕೆಲವು ಸ್ನೇಹಿತರನ್ನು ಅಲ್ಲಿಯ ಪರಿಸ್ಥಿತಿ, ವಿದ್ಯಾಭ್ಯಾಸ ಕ್ರಮ ಮತ್ತು ನಮ್ಮ ತರಬೇತಿಯ ಬಗ್ಗೆ ಕೇಳಿದೆವು. ಆದರೆ ನಾವುಗಳು ಯಾರನ್ನು ವಿಚಾರಿಸಿದೆವೋ ಅವರೊಬ್ಬರೂ ನಮಗೆ ಸರಿಯಾದ ತಿಳುವಳಿಕೆ ಕೊಡಲಿಲ್ಲ. (ಇವರಲ್ಲಿ ಕೆಲವರು ಪದವಿ ಪಡೆದು ಬಂದಿದ್ದರು. ಇನ್ನು ಕೆಲವರು ಪದವಿ ಪಡೆಯದೆ ಬಂದಿದ್ದರು. ಈ ದಿನ ಇವರುಗಳು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಅಧಿಕಾರಿಗಳಾಗಿದ್ದಾರೆ) ಆ ದೇಶಗಳಿಗೆ ಹೋದ ಮೇಲೆ ನಾವು ಅನುಭವಿಸಬಾರದಂತಹ ಅವಮಾನವನ್ನು ಅನುಭವಿಸಬೇಕಾಯಿತು. ಕೆನಡಾ ಮತ್ತು ಅಮೆರಿಕಾ ದೇಶದಲ್ಲಿ $2\frac{1}{4}$ ವರ್ಷಗಳ ಕಾಲ ಇದ್ದಾಗ, ನನ್ನ ಸ್ವಂತ ಅನುಭವದಿಂದ ಅನೇಕ ವಿಷಯಗಳನ್ನು ಅರಿತುಕೊಂಡೆ. ಜೊತೆಗೆ ಆ ದೇಶಗಳಲ್ಲಿ ನಮ್ಮೊಡನೆ ಇದ್ದ ಇಂಡಿಯಾ ದೇಶದ ಅನೇಕ ವಿದ್ಯಾರ್ಥಿಗಳೊಡನೆ ಮಾತನಾಡಿ ಅವರುಗಳ ಕಷ್ಟವನ್ನು ತಿಳಿದುಕೊಂಡೆ. ಅದರ ಪರಿಣಾಮವಾಗಿ ಸತ್ಯಾಂಶಗಳನ್ನು ನಮ್ಮ ಜನರಿಗೆ ತಿಳಿಸುವುದಕ್ಕಾಗಿ ಈ ಪುಸ್ತಕದಲ್ಲಿ ಯತ್ನ ಮಾಡಲಾಗಿದೆ. ಅಮೆರಿಕಾ ಮತ್ತು ಕೆನಡಾ

ದೇಶಗಳಲ್ಲಿ ಇದುವರೆಗೆ ಬೆಳೆಸಿಕೊಂಡು ಬಂದಿರುವ ಉನ್ನತ ಮಟ್ಟ
ವಿದ್ಯಾಭ್ಯಾಸದ ಸಮಸ್ಯೆಗಳನ್ನು ಕುರಿತು ಮುಂದಿನ ಅಧ್ಯಾಯಗ
ಚರ್ಚಿಸಲಾಗಿದೆ.

ಈ ಪುಸ್ತಕವನ್ನು ಬರೆಯುವಾಗ ಈ ಕೆಳಗೆ ಕಂಡ ಮು
ವಿಷಯಗಳಿಗೆ ಗಮನ ಕೊಡಲಾಗಿದೆ—

1. ಇಂಡಿಯಾ ದೇಶದಿಂದ ಎಂ.ಎ ; ಎಂ.ಎಸ್‌ಸಿ; ಎಂ.ಕ
ಮತ್ತು ಎಂ.ಇಡಿ. ಪದವಿಗಳನ್ನು ಪಡೆದುಕೊಂಡು ಅಮೆರಿಕಾ
ಹೋದಮೇಲೆ ನಮ್ಮ ವಿದ್ಯಾರ್ಥಿಗಳು ಅಲ್ಲಿಯ ವಿಶ್ವವಿದ್ಯಾನಿಲ
ಗಳಲ್ಲಿ ಎದುರಿಸಬೇಕಾಗುವ ಸಮಸ್ಯೆಗಳು.

2. ಇಂಡಿಯಾ ದೇಶವನ್ನು ಬಿಟ್ಟು ಹೊರಡುವುದಕ್ಕೆ ಮ
ವಿದ್ಯಾರ್ಥಿಗಳು ಸಾಕಷ್ಟು ಕಲಿತುಕೊಂಡು ಅಮೆರಿಕಾದ ವಿ
ಭ್ಯಾಸ ಕ್ರಮಕ್ಕೆ ಸರಿದೂಗುವಂತೆ ಸಿದ್ಧವಾಗಿ ಹೋಗುವುದು.

3. ಅಮೆರಿಕಾದ ವಿಶ್ವವಿದ್ಯಾನಿಲಯಗಳಿಗೆ ಹೋದಮೆ
ವಿದ್ಯಾರ್ಥಿಗಳು ಅನುಭವಿಸುವ ಕಷ್ಟ ಮತ್ತು ಅವಮಾನವ
ಹೋಗಲಾಡಿಸುವುದು.

4. ಅಧ್ಯಾಪಕರಾಗಿ ಕೆಲವು ವರ್ಷ ಇಂಡಿಯಾದ ಯಾವು
ದರೂ ವಿಶ್ವವಿದ್ಯಾನಿಲಯ ಅಥವಾ ಕಾಲೇಜಿನಲ್ಲಿ ಕೆಲಸ ಮಾ
ಮೇಲೆ ಪಿ.ಎಚ್‌ಡಿ. ಪದವಿಗಾಗಿ ಅಮೆರಿಕಾ ವಿಶ್ವವಿದ್ಯಾನಿಲ
ಗಳಿಗೆ ಹೋದಾಗ ನಮ್ಮ ಅಧ್ಯಾಪಕರುಗಳು ಎದುರಿಸಬೇಕ
ಸಮಸ್ಯೆಗಳು.

5. ಅಧ್ಯಾಪಕರಾಗಿದ್ದು, ಸ್ವಲ್ಪ ವರ್ಷಗಳಾದ ಮೇಲೆ ಇಂಡಿ
ದಲ್ಲೇ ಪಿ.ಎಚ್‌ಡಿ. ಪದವಿ ಪಡೆದು ಅನಂತರ Post Docto

Research fellowship (ಪಂಡಿತ ಪದವಿ ಪಡೆದಮೇಲೆ ಕೊಡುವ ಸಂಶೋಧನಾ ವಿದ್ಯಾರ್ಥಿ ವೇತನ) ತೆಗೆದುಕೊಂಡು ಅಮೆರಿಕಾ ವಿಶ್ವವಿದ್ಯಾನಿಲಯಗಳಿಗೆ ಹೋಗಿ ಅನುಭವಿಸುವ ಕಷ್ಟಗಳು

6. ಅಮೆರಿಕಾದ ಹೈಸ್ಕೂಲುಗಳಿಗೆ ಮತ್ತು ವಿಶ್ವವಿದ್ಯಾನಿಲಯಗಳಿಗೆ ಅಧ್ಯಾಪಕರಾಗಿ ಹೋಗುವವರಿಗೆ ದೊರೆಯುವ ಮನ್ನಣೆ ; ಮತ್ತು

7. ಇಂಡಿಯಾ ದೇಶದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ಉಂಟಾಗುವ ಸಾಮಾಜಿಕ ಪರಿಣಾಮಗಳು—ಇವುಗಳೆಲ್ಲ ವನ್ನೂ ಕುರಿತು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೧

ಅಮೇರಿಕಾದ ವಿಶ್ವವಿದ್ಯಾನಿಲಯಗಳಿಗೆ ಹೋಗಲು ಅನುಸರಿಸುವ ಮಾರ್ಗಗಳು

ನಮ್ಮ ದೇಶದಿಂದ ಅಮೇರಿಕಾ ವಿಶ್ವವಿದ್ಯಾನಿಲಯಗಳಿಗೆ ಹೋಗಲು ನಮ್ಮ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳು ವಿವಿಧ ರೀತಿಯ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಅಮೇರಿಕಾಕ್ಕೆ ಹೋಗುವವರು ಬಹಳ ಅಪರೂಪ. ಪ್ರಯಾಣದ ಖರ್ಚು (ಹೋಗಿಬರಲು) ನಮ್ಮ ರೂಪಾಯಿ ಮೌಲ್ಯದಲ್ಲಿ ಒಬ್ಬರಿಗೆ ಹತ್ತುಸಾವಿರ ರೂಪಾಯಿಗಳು ಬೇಕಾಗುತ್ತವೆ. ಅಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳಾಗಿ ಸೇರಿದರೆ ಒಂದು ವರ್ಷಕ್ಕೆ 600 ಡಾಲರುಗಳಿಂದ (4500 ರೂಪಾಯಿಗಳು) 2000 ಡಾಲರುಗಳವರೆಗೆ (15,000 ರೂಪಾಯಿಗಳು) ಫೀಜು ಕಟ್ಟಬೇಕಾಗುತ್ತದೆ. (ಕೆನಡಾದ ವಿಶ್ವವಿದ್ಯಾನಿಲಯಗಳಲ್ಲಿ ಫೀಜಿನ ದರ 400 ಡಾಲರುಗಳಿಂದ 1200 ಡಾಲರುಗಳವರೆಗೆ ಇದೆ) ಇದಲ್ಲದೆ ವಿದ್ಯಾರ್ಥಿಯು ಊಟ, ವಸತಿ ಮತ್ತು ಇತರ ದಿನವಹಿ ಖರ್ಚಿಗಾಗಿ ವರ್ಷ ಒಂದಕ್ಕೆ ಕನಿಷ್ಟ ಅಂದರೆ 1000 ಡಾಲರುಗಳನ್ನು (7500 ರೂಪಾಯಿ) ಖರ್ಚು ಮಾಡಬೇಕಾಗುತ್ತದೆ. (ಇಷ್ಟರೊಳಗೆ ತನ್ನ ವೆಚ್ಚವನ್ನು ಸರಿದೂಗಿಸಿಕೊಳ್ಳುವವನು ಬಡ ವಿದ್ಯಾರ್ಥಿ) ನಮ್ಮ ದೇಶದ ಅನೇಕ ವಿದ್ಯಾರ್ಥಿಗಳಿಗಾಗಲೀ ಅಥವಾ ಅಧ್ಯಾಪಕರಿಗಾಗಲೀ ಇಷ್ಟು ಹಣ ವೆಚ್ಚ ಮಾಡುವ ಶಕ್ತಿ ಇಲ್ಲ.

ಆದುದರಿಂದ ನಾವುಗಳೆಲ್ಲರೂ ವಿದ್ಯಾರ್ಥಿವೇತನಗಳನ್ನು ಅಮೆರಿಕಾ ವಿಶ್ವವಿದ್ಯಾನಿಲಯಗಳಿಂದ ಪಡೆದು ಹೋಗುತ್ತೇವೆ. ಅಮೆರಿಕಾದ ವಿಶ್ವವಿದ್ಯಾನಿಲಯಗಳವರು ವಿದ್ಯಾರ್ಥಿಗಳಿಗೆ ಎರಡು ರೀತಿಯ ವೇತನಗಳನ್ನು ಕೊಡುತ್ತಾರೆ: (1) Fellowship (ವಿದ್ಯಾರ್ಥಿ ವೇತನ) ಮತ್ತು (2) Teaching Assistant ship (ಇದು ಇನ್ನೊಂದು ರೀತಿಯ ವಿದ್ಯಾರ್ಥಿವೇತನ) ನೇರವಾಗಿ ನಾವು ಅಮೆರಿಕಾದ ವಿಶ್ವವಿದ್ಯಾನಿಲಯಗಳಿಗೆ ಅರ್ಜಿ ಹಾಕಿಕೊಂಡು ಇವನ್ನು ಪಡೆಯುತ್ತೇವೆ. ಇದಲ್ಲದೆ ಇಂಡಿಯಾದಲ್ಲಿರುವ ಅಮೆರಿಕಾ ವಿದ್ಯಾಭ್ಯಾಸ ಪ್ರತಿಷ್ಠಾನ (U S. Educational Foundation)ದವರು ವರ್ಷಕ್ಕೊಂದು ಬಾರಿ ಪ್ರಕಟಣೆ ಹೊರಡಿಸುತ್ತಾರೆ. ಆಗ ಇಂಡಿಯಾದ ವಿದ್ಯಾರ್ಥಿಗಳು ಅಥವಾ ಅಧ್ಯಾಪಕರು ಅಮೆರಿಕಾ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಹೋಗ ಬಯಸುವವರು ಅರ್ಜಿ ಹಾಕಿಕೊಳ್ಳಬಹುದು. ಅಮೆರಿಕಾದ ಅಧಿಕಾರಿಗಳು ಅರ್ಜಿದಾರರ ಪೈಕಿ ಅನೇಕರನ್ನು ಪರೀಕ್ಷೆ ನಡೆಸು ವುದರ ಮೂಲಕ ಚುನಾಯಿಸುತ್ತಾರೆ. ಹೀಗೆ ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಎರಡು ರೀತಿಯ ವಿದ್ಯಾರ್ಥಿವೇತನಗಳನ್ನು ಕೊಡುತ್ತಾರೆ. ಒಂದು ವಿದ್ಯಾರ್ಥಿವೇತನದಲ್ಲಿ ಅಮೆರಿಕಾಕ್ಕೆ ಹೋಗಿಬರುವ ಖರ್ಚು ಮತ್ತು ಅಮೆರಿಕಾದಲ್ಲಿ ಇರುವಾಗ ವಿ ದ್ಯಾರ್ಥಿಗೆ ತಗಲುವ ವೆಚ್ಚವನ್ನು ಪೂರ್ತಿಯಾಗಿ ಕೊಡುತ್ತಾರೆ. ಇ ದನ್ನು ಮೊದಲಬಾರಿಗೆ ಕೊಡುವಾಗ 1 ವರ್ಷದ ಅವಧಿಗೆ ಮಾತ್ರ ಕೊಟ್ಟಿರುತ್ತಾರೆ. ವಿದ್ಯಾರ್ಥಿಯಾದವನು ಅಮೆರಿಕಾಕ್ಕೆ ಹೋದಮೇಲೆ ತಾನು ಓದುವ ವಿಶ್ವವಿದ್ಯಾನಿಲಯದಲ್ಲಿ ಒಳ್ಳೆ

ಪರಿಶ್ರಮ ತೋರಿಸಿದರೆ, ಅವನಿಗೆ ಕೊಡುವವಿದ್ಯಾರ್ಥಿ ವೇತನವನ್ನು ಪ್ರತಿವರ್ಷವು ಮುಂದುವರಿಸಿಕೊಂಡು ಹೋಗುತ್ತಾರೆ. ವಿದ್ಯಾರ್ಥಿಗೆ ಮಾಸ್ಟರ್ ಅಥವಾ ಪಿ.ಎಚ್‌ಡಿ; ಪದವಿ ಬರುವವರೆಗೆ ಮುಂದುವರಿಸುತ್ತಾರೆ (ಆದರೆ ಒಟ್ಟಿನಲ್ಲಿ ನಾಲ್ಕು ವರ್ಷಗಳ ಮೇಲೆ ಕೊಡುವುದು ಅಪರೂಪ) ಈ ವಿಷಯದಲ್ಲಿ ವಿದ್ಯಾರ್ಥಿಗೆ ಯಾವ ತೊಂದರೆಯೂ ಆಗುವುದಿಲ್ಲ. ನಾವು ಓದುತ್ತಿರುವ ವಿಶ್ವವಿದ್ಯಾನಿಲಯದಿಂದ ನಮ್ಮ ಪರಿಶ್ರಮದ ವಿಷಯವಾಗಿ ವರ್ಷಕ್ಕೊಂದು ಬಾರಿ ವರದಿ ಸಲ್ಲಿಸುತ್ತಿರುತ್ತಾರೆ. ಆ ವರದಿಯಲ್ಲಿ ನಮ್ಮಗಳ ವಿಷಯದಲ್ಲಿ ಒಳ್ಳೆ ಅಭಿಪ್ರಾಯ ಸೂಚಿಸಿದರೆ, ತಾನಾಗಿಯೇ ವಿದ್ಯಾರ್ಥಿ ವೇತನ ಬರುತ್ತಿರುತ್ತದೆ. ವಿದ್ಯಾರ್ಥಿ, ನಮ್ಮಲ್ಲಿರುವ ಹಾಗೆ ಪದೇ ಪದೇ ಹೋಗಿ ಅಧಿಕಾರಿಗಳ ಹತ್ತಿರ ಬೇಡಬೇಕಾಗಿಲ್ಲ. ಹಾಗಿಲ್ಲದೆ ನಮ್ಮ ವಿದ್ಯಾರ್ಹತೆ ವಿಷಯದಲ್ಲಿ ಅಮೇರಿಕಾ ವಿಶ್ವವಿದ್ಯಾನಿಲಯದವರು ಒಳ್ಳೆ ಅಭಿಪ್ರಾಯ ಕೊಡದೆಹೋದರೆ ವಿದ್ಯಾರ್ಥಿವೇತನ ನಿಂತುಹೋಗುತ್ತದೆ. ವಿದ್ಯಾರ್ಥಿ ಅನೇಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. (ಮುಂದೆ ವಿದ್ಯಾರ್ಥಿ ಎದುರಿಸುವ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗುತ್ತದೆ).

ಎರಡನೆ ತರಹದ ವಿದ್ಯಾರ್ಥಿ-ವೇತನ ಕೇವಲ ಪ್ರಯಾಣದ ಖರ್ಚಿಗೆ ಮಾತ್ರ ಸೀಮಿತವಾಗಿರುತ್ತದೆ (Travelling Grant) ಅಂದರೆ ಅಮೇರಿಕಾದ ವಿಶ್ವವಿದ್ಯಾನಿಲಯದಲ್ಲಿ ಓದಲು ಅಪ್ಪಣೆ ಪಡೆದಿರುವ ಮತ್ತು ಯಾವುದಾದರೂ ಒಂದುರೀತಿಯ ವಿದ್ಯಾರ್ಥಿ ವೇತನವನ್ನು ನೇರವಾಗಿ ಅಮೆರಿಕಾ ವಿಶ್ವವಿದ್ಯಾನಿಲಯಗಳಿಂದ ಪಡೆದಿರುವ ವಿದ್ಯಾರ್ಥಿಗಳಿಗೆ ಅಮೆರಿಕಾಕ್ಕೆ ಹೋಗಿ ಬರುವ ಖರ್ಚನ್ನು ಸಂಪೂರ್ಣವಾಗಿ ಅಮೆರಿಕಾ ವಿದ್ಯಾಭ್ಯಾಸ ಪ್ರತಿಷ್ಠಾನ

ದವರು ಕೊಡುತ್ತಾರೆ.

ಅಮೆರಿಕಾದ ವಿಶ್ವವಿದ್ಯಾನಿಲಯಗಳು ನೇರವಾಗಿ ನಮಗೆ ಕೊಡುವ ವಿದ್ಯಾರ್ಥಿವೇತನಗಳ ವಿಷಯದಲ್ಲೂ ಕೆಲವು ನಿಬಂಧನೆ ಗಳಿವೆ. ಫೇಲೋಷಿಪ್ ಎಂಬ ವಿದ್ಯಾರ್ಥಿವೇತನವನ್ನು ಪ್ರಾರಂಭ ದಲ್ಲಿ ಒಂದು ಅವಧಿಗೆ ಮಾತ್ರ ಕೊಟ್ಟಿರುತ್ತಾರೆ. (9 ತಿಂಗಳಿಗೆ ಮಾತ್ರ ಇದು ಕೊಡಲ್ಪಡುತ್ತದೆ. ಏಕೆಂದರೆ ವಿಶ್ವವಿದ್ಯಾನಿಲಯ ಗಳಲ್ಲಿ ಪಾಠ ಹೇಳುವ ಅವಧಿ 9 ತಿಂಗಳುಗಳಾಗಿದ್ದು, 3 ತಿಂಗಳ ಬೇಸಿಗೆ ರಜವಿರುತ್ತದೆ) ಮೊದಲನೆ ವರ್ಷ ವಿದ್ಯಾರ್ಥಿ ಒಳ್ಳೆ ಪರಿ ಶ್ರಮ ತೋರಿಸಿದರೆ ಮುಂದಿನ ವರ್ಷಗಳಿಗೂ ಅದೇ ವಿಶ್ವವಿದ್ಯಾ ನಿಲಯದವರು ವಿದ್ಯಾರ್ಥಿವೇತನ ಕೊಡುತ್ತಾರೆ ಅಥವಾ ಬೇರೆ ಯಾವುದಾದರೂ ಸಂಸ್ಥೆಯಿಂದ ಹಣಸಹಾಯ ಒದಗಿಸುತ್ತಾರೆ. ಒಟ್ಟಿನಲ್ಲಿ ವಿದ್ಯಾರ್ಥಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ.

Teaching Assistant ship ಎಂಬ ವಿದ್ಯಾರ್ಥಿವೇತನವು ಕೂಡ 9 ತಿಂಗಳ ಅವಧಿಗೆ ಕೊಡಲ್ಪಟ್ಟಿರುತ್ತದೆ. ಈ ರೀತಿಯ ವೇತನ ಸಾಮಾನ್ಯವಾಗಿ ಇಂಡಿಯಾದಲ್ಲಿ ಅಧ್ಯಾಪಕರಾಗಿದ್ದ ಅನಂತರ ಅಮೆರಿಕಾದ ವಿಶ್ವವಿದ್ಯಾನಿಲಯಗಳಿಗೆ ವಿದ್ಯಾರ್ಥಿಗಳಾಗಿ ದೊರೆಯುತ್ತದೆ. ಮೊದಲನೆ ಅವಧಿಯಲ್ಲಿ ಈ ವೇತನ ಪಡೆದವರು ಸಾಕಷ್ಟು ಪರಿಶ್ರಮ ತೋರಿಸಿದರೆ ಮುಂದಿನ ವರ್ಷಗಳಲ್ಲಿಯೂ ಕೊಡಲ್ಪಡುತ್ತದೆ.

ಮೇಲ್ಕಂಡ ವಿದ್ಯಾರ್ಥಿವೇತನಗಳಲ್ಲಿ ಯಾವುದಾದರೂ ಒಂದನ್ನು ಪಡೆದ ಮೇಲೆ ವಿದ್ಯಾರ್ಥಿ ಅಮೆರಿಕಾಕ್ಕೆ ಪ್ರಯಾಣ ಮಾಡಿ ತಾನು ಪ್ರವೇಶ ದೊರಕಿಸಿಕೊಂಡಿರುವ ವಿಶ್ವವಿದ್ಯಾನಿಲಯಕ್ಕೆ ಸೇರುತ್ತಾನೆ

ಅಧ್ಯಾಯ ೨

ಅಮೆರಿಕಾ ದೇಶದ ವಿಶ್ವವಿದ್ಯಾನಿಲಯಗಳನ್ನು ಪ್ರವೇಶಿಸಿದೊಡನೆ ವಿದ್ಯಾರ್ಥಿ ಎದುರಿಸುವ ಸಮಸ್ಯೆಗಳು

ವಿದ್ಯಾರ್ಥಿವೇತನ ಪಡೆದು ಹೋದ ವಿದ್ಯಾರ್ಥಿಗೆ ಅಥವಾ ಉಪಾಧ್ಯಾಯನಿಗೆ ಜೀವನ ನಡೆಸಲು ಮತ್ತು ಒಂದು ವರ್ಷದ ವಿದ್ಯಾಭ್ಯಾಸದ ಶುಲ್ಕವನ್ನು ಕಟ್ಟಲು ಸಾಕಷ್ಟು ಹಣ ಮೊದಲನೆ ವರ್ಷ ದೊರೆಯುತ್ತದೆ. ಆದುದರಿಂದ ಯಾವನೇ ವಿದ್ಯಾರ್ಥಿ ಅಥವಾ ಉಪಾಧ್ಯಾಯ ಮೊದಲನೆ ವರ್ಷ ಹಣದ ಮುಗ್ಗಟ್ಟನ್ನು ಎದುರಿಸುವುದಿಲ್ಲ. ಮಾಮೂಲು ಜೀವನ ನಡೆಸುವುದನ್ನು ಬಿಟ್ಟು ಅಲ್ಲಿಯ ಸಮಾಜದಲ್ಲಿ ಕಂಡುಬರುವ ದುಶ್ಚಟಗಳಿಗೆ ಮಾರು ಹೋದರೆ ಮಾತ್ರ ಹಣದ ಮುಗ್ಗಟ್ಟನ್ನು ಎದುರಿಸಬೇಕಾಗುತ್ತದೆ.

ವಿದ್ಯಾರ್ಥಿ, ಅಮೆರಿಕಾದೇಶ ಪ್ರವೇಶಿಸಿದೊಡನೆ ಎದುರಿಸಬೇಕಾದ ಮೊದಲನೆ ಸಮಸ್ಯೆ ಆಹಾರದ ಸಮಸ್ಯೆ. ವಿದ್ಯಾರ್ಥಿನಿಲಯಗಳೇನೋ ಸಾಕಷ್ಟು ಸಂಖ್ಯೆಯಲ್ಲಿವೆ. ವಿದ್ಯಾರ್ಥಿನಿಲಯಗಳಲ್ಲಿ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಿರುತ್ತಾರೆ. ಅಲ್ಲಿಯ ವಿದ್ಯಾರ್ಥಿನಿಲಯಗಳಲ್ಲಿ ಒದಗಿಸಿರುವ ಸೌಕರ್ಯಗಳನ್ನು ನಮ್ಮಂತಹ ಬಡದೇಶದಲ್ಲಿ ಒದಗಿಸಬೇಕಾದರೆ ಇನ್ನೂ ಅನೇಕ ವರ್ಷಗಳು ಕಳೆಯಬೇಕು. ಆದುದರಿಂದ ವಿದ್ಯಾರ್ಥಿನಿಲಯಗಳನು

ಸೇರಿದರೆ ಯಾವ ತೊಂದರೆಯೂ ಇಲ್ಲದೆ ವಿದ್ಯಾರ್ಥಿ ಓದಿನ ಕ
ಗಮನ ಕೊಡಬಹುದು. ಆದರೆ ಅಪ್ಪಟ ಸಸ್ಯಾಹಾರಿಗಳಾಗಿ
ಬೇಕೆನ್ನುವವರು ವಿದ್ಯಾರ್ಥಿನಿಲಯಗಳಲ್ಲಿ ಇರಲು ಆಗುವುದಿ
ಏಕೆಂದರೆ ಆ ವಿದ್ಯಾರ್ಥಿನಿಲಯಗಳಲ್ಲಿ ಆ ದೇಶದ ಸಂಸ್ಕೃತಿಗೆ ತ
ಹಾಗೆ ಮಾಂಸಾಹಾರವನ್ನು ಒದಗಿಸುತ್ತಾರೆ. ದನದ ಮಾ
ಮತ್ತು ಹಂದಿಯ ಮಾಂಸ ಪ್ರತಿನಿತ್ಯದ ಆಹಾರವಾಗಿರುತ್ತ
ಆದುದರಿಂದ ಇಂಡಿಯಾದ ಅನೇಕ ವಿದ್ಯಾರ್ಥಿಗಳು ವಿದ್ಯಾ
ನಿಲಯಗಳಲ್ಲಿರುವುದಿಲ್ಲ.

ವಿಶ್ವವಿದ್ಯಾನಿಲಯದ ಅಧಿಕಾರಿಗಳು ಅಪ್ಪಟ ಸಸ್ಯಾಹಾರಿಗ
ಪ್ರತ್ಯೇಕ ಏರ್ಪಾಡು ಮಾಡಿಕೊಡುತ್ತಾರೆ. ಖಾಸಗೀ ಮನೆಗ
ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೋಣೆಗಳನ್ನು ಬಾಡಿಗೆಗೆ ಕೊಡ
ತ್ತಾರೆ. ಆ ಕೋಣೆಗಳಲ್ಲಿ ಎಲ್ಲಾ ಸೌಕರ್ಯಗಳನ್ನು ಒದಗಿಸ
ಗಿರುತ್ತದೆ. ವಿದ್ಯಾರ್ಥಿಗಳು ತಾವೇ ಅಡಿಗೆ ಮಾಡಿಕೊಂಡು ಸ
ವಾಗಿ ಜೀವನ ನಡೆಸಬಹುದು. ಅವರು ಕೊಡತಕ್ಕ ಬಾಡಿಗೆಯ
ಅತ್ಯಲ್ಪ (ತಿಂಗಳಿಗೆ 40ರಿಂದ 50 ಡಾಲರುಗಳು ಮಾತ್ರ). ಹ
ವಾಸ ಮಾಡುವವರಿಗೆ ವಿದ್ಯಾರ್ಥಿನಿಲಯಗಳಲ್ಲಿ ವಾಸ ಮಾ
ವವರಿಗಿಂತಕಡಮೆ ವೆಚ್ಚವಾಗುತ್ತದೆ. ಆದುದರಿಂದ ಹಣವ
ಕೂಡ ಉಳಿಸಬಹುದು.

ಈ ರೀತಿ ವಿಶ್ವವಿದ್ಯಾನಿಲಯದವರು ಅಪ್ಪಟ ಸಸ್ಯಾಹಾರಿ
ಪ್ರತ್ಯೇಕ ಏರ್ಪಾಡು ಮಾಡಿಕೊಡುವುದನ್ನು ನೋಡಿದವರಿಗೆ ಆ
ಯಾಗುತ್ತದೆ. ಇಂಡಿಯಾದಿಂದ ಬರುವ ಅನೇಕ ವಿದ್ಯಾ
ಗಳು ದನದ ಮಾಂಸ ಮತ್ತು ಹಂದಿ ಮಾಂಸ ತಿನ್ನುವುದಿಲ್ಲವೆಂಬ

ಅಲ್ಲಿಯವರಿಗೆ ಗೊತ್ತಿದೆ. ಆದುದರಿಂದ ಇಂಡಿಯಾದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳಲು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಮೊದಲು ನಮಗೆ ಪ್ರತ್ಯೇಕ ವಸತಿಸೌಕರ್ಯ ಮಾಡಿಕೊಡುತ್ತಾರೆ. ಆದುದರಿಂದ ಯಾವ ವಿದ್ಯಾರ್ಥಿಗೂ ವಸತಿ ಸೌಕರ್ಯದಲ್ಲಿ ಸ್ವಲ್ಪವೂ ತೊಂದರೆ ಇರುವುದಿಲ್ಲ. ಇಂತಹ ಪರಿಸ್ಥಿತಿಯನ್ನು ನಮ್ಮ ಸ್ನೇಹಿತರನೇಕರು ಕಂಡಾಗ ಆಶ್ಚರ್ಯಪಟ್ಟಿವು. ಏಕೆಂದರೆ ವಿದೇಶಗಳಿಂದ ವಾಪಸ್ಸು ಬಂದಿರುವ ನಮ್ಮ ಸ್ನೇಹಿತರಲ್ಲಿ ಅನೇಕರು ಇಂಡಿಯಾದಲ್ಲಿ ಸುಳ್ಳು ಹೇಳುತ್ತಿದ್ದರು ಎಂಬುದು ನಮಗೆಲ್ಲಾ ತಿಳಿಯಿತು. ವಿದೇಶಗಳಿಂದ ಬಂದಮೇಲೆ ನಮ್ಮ ಸ್ನೇಹಿತರಲ್ಲಿ ಕೆಲವರು ಮಾಂಸಾಹಾರ ಮತ್ತು ಮದ್ಯಸೇವನೆಯ ದುಶ್ಚಟಕ್ಕೆ ಒಳಗಾಗಿ ಇಂಡಿಯಾದಲ್ಲಿ ತಮ್ಮ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಿದ್ದರು. ನಮ್ಮ ಕೆಲವು ಸ್ನೇಹಿತರು ಇಂಡಿಯಾಕ್ಕೆ ವಾಪಸ್ಸು ಬಂದಮೇಲೆ ಇಂತಹ ದುಶ್ಚಟಗಳನ್ನು ಏಕೆ ಮುಂದುವರಿಸುತ್ತಿದ್ದರು ಎಂದು ಕೇಳಿದಾಗ, ಅವರು ನಮಗೆ ಒಂದು ನೇರವಾದ ಉತ್ತರ ಕೊಡುತ್ತಿದ್ದರು. ಅಂತಹ ಚಳಿ ದೇಶಗಳಲ್ಲಿ ಮಾಂಸಾಹಾರ ಮತ್ತು ಮದ್ಯಸೇವನೆ ಮಾಡದೆ ಬದುಕುವುದಕ್ಕಾಗುವುದಿಲ್ಲ ಎನ್ನುತ್ತಿದ್ದರು. ಇದನ್ನು ನಾವು ನಂಬಿಕೊಂಡು ಸಹಿಸಿಕೊಳ್ಳುತ್ತಿದ್ದೆವು ಆದರೆ ಆ ದೇಶಗಳಲ್ಲಿರುವ ಸಮಾಜವನ್ನು ನೋಡಿದ ಮೇಲೆ ನಮಗೆ ನಿಜಸ್ಥಿತಿಯ ಅರಿವಾಯಿತು.

ವಿದ್ಯಾರ್ಥಿಗಳು ಅಮೆರಿಕಾದಲ್ಲಿರುವಾಗ ಅನೇಕ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ. ಆಗ ವಿದ್ಯಾರ್ಥಿಗಳು ಮತ್ತೊಂದು ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ನಮ್ಮ

ಸಮಾಜದ ನಡವಳಿಕೆಗೂ ಅಲ್ಲಿಯ ಸಮಾಜದ ನಡವಳಿಕೆಗ
ಅಜಗಜಾಂತರ ವ್ಯತ್ಯಾಸವಿದೆ. ಆದರೆ ನಾವು ನಮ್ಮ ಸಮಾಜ
ನಡವಳಿಕೆಗೆ ತಕ್ಕ ಹಾಗೆ ನಡೆದುಕೊಳ್ಳುತ್ತೇವೆ. ಅಂದರೆ ಯಾರ
ಅದಕ್ಕೆ ಅಡ್ಡಿ ಬರುವುದಿಲ್ಲ ಎಂಬ ಅಂಶವನ್ನು ವಾಚಕರು ಗವ
ದಲ್ಲಿಡಬೇಕು. ಅಲ್ಲಿಯ ಅನೇಕ ಸಮಾರಂಭಗಳಲ್ಲಿ ಮಧ್ಯಸೇ
ಮಾಡುವುದು ಮತ್ತು ಬೇರೆ ಹೆಂಗಸರೊಡನೆ ನರ್ತನ ಮಾಡುವ
ಪದ್ಧತಿಯಾಗಿ ಬೆಳೆದುಕೊಂಡು ಬಂದಿದೆ. ನಾವು ಇಂಗ್ಲೀ
ಚಲನಚಿತ್ರಗಳಲ್ಲಿ ಅವರ ಜೀವನದ ವಿಷಯವಾಗಿ ಏನನ್ನು ನೋ
ತ್ತೇವೋ ಅದು ಅವರ ನಿತ್ಯ ಜೀವನ ಪದ್ಧತಿ. ಇಂತಹ ಪರಿಸ್ಥಿ
ಯಲ್ಲಿ ನಮ್ಮ ಸ್ನೇಹಿತರನೇಕರು ತಮ್ಮ ನಡವಳಿಕೆಯನ್ನು ಕಳೆ
ಕೊಳ್ಳುವುದು ಸ್ವಾಭಾವಿಕವಾಗಿದೆ.

ಆದರೆ ವಿದ್ಯಾರ್ಥಿಗಳು ಯಾವುದೇ ರೀತಿಯ ಸಮಾರಂಭಗ
ಭಾಗವಹಿಸಿದಾಗಲೂ ತಮ್ಮ ನಡವಳಿಕೆಯನ್ನಾಗಲಿ ಅಥ
ತತ್ತ್ವಗಳನ್ನಾಗಲೀ ಬಿಟ್ಟುಕೊಡಬೇಕಾಗಿಲ್ಲ. ನಾವು ಅಮೆರಿ
ರೊಡನೆ ಸಂತೋಷಸಮಾರಂಭಗಳಲ್ಲಿ ಭಾಗವಹಿಸಿದಾಗ ಯಾ
ನಮ್ಮನ್ನು ದನದ ಮಾಂಸ ಅಥವಾ ಇನ್ನಾವುದೇ ರೀತಿಯ ಮಾ
ವನ್ನು ತಿನ್ನಿರಿ ಅಥವಾ ಮದ್ಯಗಳನ್ನು ಕುಡಿಯಿರಿ ಎಂದು ಹ
ಮಾಡುವುದಿಲ್ಲ. ನಮಗೆ ಬೇಕಾದ ಯಾವುದೇರೀತಿಯ ಸ
ಹಾರವನ್ನು ನಮಗೆ ತೃಪ್ತಿಯಾಗುವ ರೀತಿಯಲ್ಲಿ ತಿನ್ನಬಹು
ಅದಕ್ಕೆ ಅವರುಗಳು ಯಾರೂ ಬೇಸರಪಡುವುದಿಲ್ಲ. ನಾವು ನ
ದೇಶದ ಸಂಸ್ಕೃತಿಗೆ ತಕ್ಕಹಾಗೆ ನಡೆದುಕೊಂಡರೆ ಅವರು
ವಾಗಿಯೂ ನಮ್ಮನ್ನು ಕಂಡು ಮೆಚ್ಚುತ್ತಾರೆ ಮತ್ತು ಇ

ಹೆಚ್ಚು ಅಭಿಮಾನದಿಂದ ನಮ್ಮನ್ನು ಕಾಣುತ್ತಾರೆ. ಆದುದರಿಂದ ವಿದೇಶದಿಂದ ವಾಪಸ್ಸು ಬಂದಮೇಲೆ ಇಂಡಿಯಾ ದೇಶದಲ್ಲಿ ನಮ್ಮ ಸ್ನೇಹಿತರುಗಳು ಯಾರಾದರೂ ತಮ್ಮ ಮೊದಲಿನ ರೀತಿಯ ಜೀವನ ಪದ್ಧತಿ ಬಿಟ್ಟು ಹೊಸ ರೀತಿಯ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದರೆ ಅದಕ್ಕೆ ಅಮೆರಿಕದ ಸಮಾಜವಾಗಲೀ ಅಥವಾ ಅಲ್ಲಿಯ ಪರಿಸ್ಥಿತಿಯಾಗಲೀ ಕಾರಣವಲ್ಲ. ಅದರ ಬದಲು ನಮ್ಮಲ್ಲಿರುವ ಮನೋದೌರ್ಬಲ್ಯವೇ ಕಾರಣವೆಂದು ತಿಳಿದುಕೊಳ್ಳಬೇಕು.

ವಿದ್ಯಾರ್ಥಿಗೆ ನಿಜವಾದ ಸಮಸ್ಯೆ ಬರುವುದು ಆತನು ತರಗತಿಗಳಿಗೆ ಹೋದಾಗ. ನಮ್ಮಲ್ಲಿ ಅನೇಕರು ಅಮೆರಿಕದ ವಿಶ್ವವಿದ್ಯಾನಿಲಯಗಳ ಪದವೀಧರ ತರಗತಿಗಳಲ್ಲಿ ಓದಿದ ಹೊರತು, ಅಮೆರಿಕದ ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ತಿಳಿದುಕೊಳ್ಳಲಾರರು. ಅಲ್ಲಿ ಪದವೀಧರ ತರಗತಿಗಳಿಗೆ ನಿಗದಿಗೊಳಿಸಿರುವ ಪಠ್ಯಕ್ರಮಗಳಿಗೆ ತಕ್ಕಹಾಗೆ ನಮಗೆ ಜ್ಞಾನಾರ್ಜನೆ ಇಲ್ಲದಿರುವಾಗ ಅಮೆರಿಕದ ಅಧ್ಯಾಪಕರುಗಳು ನಮ್ಮನ್ನು ಪದವೀಪೂರ್ವ ತರಗತಿಗಳಿಗೆ (Undergraduate classes) ಕಳುಹಿಸಿ ನಿಗದಿಗೊಳಿಸಿರುವ ವಿಷಯಗಳನ್ನು ತೆಗೆದುಕೊಂಡು ಓದಿ ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ತಿಳಿಸುತ್ತಾರೆ. ಇಂತಹ ಅವಮಾನ ಪರಿಸ್ಥಿತಿಗೆ ಅನೇಕ ಇಂಡಿಯಾ ದೇಶದ ವಿದ್ಯಾರ್ಥಿಗಳು (ಇಲ್ಲಿಂದ ಎಂ.ಎ; ಎಂ.ಎಸ್‌ಸಿ; ಎಂ.ಕಾಂ ; ಎಂ.ಇಡಿ ಇತ್ಯಾದಿ ಪದವಿ ಪಡೆದುಕೊಂಡು ಹೋಗಿರುವವರು) ಒಳಗಾಗುತ್ತಾರೆ. ಅದರಲ್ಲೂ ಸಮಾಜಶಾಸ್ತ್ರಗಳನ್ನು (Social Sciences) ತೆಗೆದುಕೊಂಡು ಎಂ.ಎ. ಪಾಸು ಮಾಡಿಕೊಂಡು ಇಂಡಿಯಾದಿಂದ ಬರುವ ಅನೇಕ ವಿದ್ಯಾರ್ಥಿಗಳು ಇಂತಹ

ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಅನೇಕರಿಗೆ ತಾವು ಇಂಡಿಯಾದಲ್ಲಿ ಮಾಸ್ಟರ ಪದವಿ ಪಡೆದುಬಂದಿದ್ದರೂ ತಮಗೆ ಪದವಿಪೂರ್ವ ತರಗತಿಗಳಿಗೆ ಹೋಗಿ ಎಂದು ಹೇಳುತ್ತಾರಲ್ಲಾ ಎಂದು ದುಃಖ ಉಂಟಾಗುತ್ತದೆ. 1956–57 ಆದಮೇಲೆ ಅನೇಕ ಅಮೆರಿಕನ್ ಪ್ರೊಫೆಸರುಗಳು ಇಂಡಿಯಾ ದೇಶಕ್ಕೆ ಬಂದು ನಮ ವಿವಿಧ ವಿಶ್ವವಿದ್ಯಾನಿಲಯಗಳನ್ನು ನೋಡಿದ್ದಾರೆ. ಅವರು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಮಾಸ್ಟರ್ ತರಗತಿಗಳಿಗೆ ನಿಗದಿ ಪಡಿಸಿರುವ ಪಠ್ಯಕ್ರಮಗಳ ವಿಷಯ ತಿಳಿದುಕೊಂಡಿದ್ದಾರೆ. ಇಂಡಿಯಾದ ವಿಶ್ವ ವಿದ್ಯಾನಿಲಯಗಳಲ್ಲಿ ವಿದ್ಯಾಮಟ್ಟ ಬಹಳ ಕಡಮೆ ಇದೆ ಎಂಬು ದನ್ನು ತಿಳಿದುಕೊಂಡಿದ್ದಾರೆ. ಆದುದರಿಂದ ಅವರು ಈಗ ಇಂಡಿ ಯಾದ ವಿದ್ಯಾರ್ಥಿಗಳನ್ನು ಅಮೆರಿಕನ್ ವಿಶ್ವವಿದ್ಯಾನಿಲಯಗಳಿಗೆ ಸೇರಿಸಿಕೊಳ್ಳುವುದಕ್ಕೆ ಮೊದಲು ಪರೀಕ್ಷಿಸುತ್ತಾರೆ. 1956–57ಕ್ಕೆ ಮೊದಲು ಇಂಡಿಯಾದಲ್ಲಿ ಮಾಸ್ಟರ ಡಿಗ್ರಿ ಪಡೆದಿದ್ದರೆ ಅಂತಹವ ರನ್ನು ನೇರವಾಗಿ ಪಿ.ಎಚ್‌ಡಿ. ತರಗತಿಗಳಿಗೆ ಸೇರಿಸಿಕೊಳ್ಳುತ್ತಿದ್ದರು. ಆದರೆ ಹಾಗೆ ಸೇರಿಸಲ್ಪಟ್ಟವರಲ್ಲಿ ಅನೇಕರು ಫೇಲಾಗಿ ವಾಪಸ್ಸು ನಿರಾಶೆಯಿಂದ ಇಂಡಿಯಾಕ್ಕೆ ಹಿಂದಿರುಗುತ್ತಿದ್ದರು. ಆದುದರಿಂದ ಅಂತಹ ಪರಿಸ್ಥಿತಿಯನ್ನು ತಪ್ಪಿಸಲು ಈಗ ಪಿ.ಎಚ್‌ಡಿ. ತರಗತಿಗೆ ಸೇರಿಸಿಕೊಳ್ಳುವುದಕ್ಕೆ ಮೊದಲೇ ವಿದ್ಯಾರ್ಥಿಯನ್ನು ಪರೀಕ್ಷಿಸು ತ್ತಾರೆ. ನಾವು ಅಮೆರಿಕಾ ದೇಶಕ್ಕೆ ಹೋದ ಮೇಲೆ ವಿಶ್ವವಿದ್ಯಾ ನಿಲಯಕ್ಕೆ ಸೇರುವಾಗಲೇ ಮೊದಲನೆಯ ದಿನವೇ ಪರೀಕ್ಷೆ ನಡೆಸು ತ್ತಾರೆ. ಪರೀಕ್ಷೆ ನಡೆಸುವಾಗ ನಮ್ಮಗಳ ವಿದ್ಯಾ ಅರ್ಹತೆ ಎಷ್ಟಿದೆ ಎಂಬುದನ್ನು ಅಮೆರಿಕನ್ ಪ್ರೊಫೆಸರುಗಳು ಸುಲಭವಾಗಿ ತಿಳಿದು

ಕೊಳ್ಳುತ್ತಾರೆ. ನಮಗೆ ಸಾಕಷ್ಟು ಅರ್ಹತೆ ಇದೆ ಎಂದು ಕಂಡು ಬಂದರೆ ಮೊದಲು ಎಂ.ಎ ಅಥವಾ ಎಂ.ಎಸ್. ತರಗತಿಗಳಿಗೆ ಸೇರುವಂತೆ ನಮಗೆ ತಿಳಿಸುತ್ತಾರೆ. ನೇರವಾಗಿ ಪಿ.ಎಚ್‌ಡಿ. ತರಗತಿಗಳಿಗೆ ಸೇರಿಸಿಕೊಳ್ಳುವುದು ಈಗ ಬಹಳ ಅಪರೂಪವಾಗಿದೆ. ಪಿ.ಎಚ್‌ಡಿ. ತರಗತಿಗೆ ಯಾರಾದರೂ ವಿದ್ಯಾರ್ಥಿ ನೇರವಾಗಿ ಸೇರಲು ಅವಕಾಶಕೊಟ್ಟರೆ ಅದು ಒಂದು ಅದೃಷ್ಟ ಎಂದು ಹೇಳಬಹುದು. ಹಾಗಿಲ್ಲದೆ ಪರೀಕ್ಷೆಯಲ್ಲಿ ಅವರು ನಿರೀಕ್ಷಿಸಿದ ಮಟ್ಟಕ್ಕೆ ನಾವುಗಳು ಬರದೆ ಹೋದರೆ ನಮಗೆ ಒಂದೆರಡು ವರ್ಷ ಪದವಿ ಪೂರ್ವ ತರಗತಿಗಳಿಗೆ ಹೋಗಿ ಓದಿಕೊಂಡು ಬನ್ನಿರಿ ಎಂದು ಹೇಳುತ್ತಾರೆ. ಇಂತಹ ಸಂದರ್ಭಗಳಲ್ಲಿ ವಿದ್ಯಾರ್ಥಿಗೆ ಪದವಿಪೂರ್ವ ತರಗತಿಗಳ ಓದನ್ನು ಪೂರೈಸಿಕೊಂಡು ಅನಂತರ ಪಿ.ಎಚ್‌ಡಿ. ಪದವಿ ಪೂರೈಸಬೇಕಾದರೆ ಕಡೆಯ ಪಕ್ಷ 6 ಅಥವಾ 7 ವರ್ಷಗಳು ಬೇಕು. ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರಗಳಲ್ಲಿ ಪಿ.ಎಚ್‌ಡಿ. ಪದವಿ ಪಡೆಯಬೇಕಾದರೆ ಕೆಲವರು ಮೇಲ್ಕಂಡ ಕಾರಣದಿಂದ 7 ವರ್ಷ ತೆಗೆದುಕೊಳ್ಳುತ್ತಾರೆ. ಇದೇ ರೀತಿ ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ವಾಣಿಜ್ಯ ಮತ್ತು ಸಮಾಜಶಾಸ್ತ್ರಗಳಲ್ಲಿ ಪಿ.ಎಚ್‌ಡಿ. ಪದವಿ ಪಡೆಯಬೇಕಾದರೆ ಕನಿಷ್ಟಪಕ್ಷ 4 ಅಥವಾ 6 ವರ್ಷಗಳನ್ನು ತೆಗೆದುಕೊಳ್ಳುತ್ತಾರೆ. ಇಂತಹ ವಿದ್ಯಾರ್ಥಿಗಳೇ ನಮ್ಮ ದೇಶಕ್ಕೆ ಬಂದ ಮೇಲೆ ಪಿ.ಎಚ್‌ಡಿ. ಪದವಿ ಪಡೆಯಲು 7 ವರ್ಷಗಳಾಗುತ್ತೆ ಎನ್ನುತ್ತಾರೆ. ಇನ್ನು ಕೆಲವು ವಿದ್ಯಾರ್ಥಿಗಳಿಗೆ ಮೊದಲು ಎಂ.ಎ. ಪರೀಕ್ಷೆ ಪಾಸುಮಾಡಿ ಅನಂತರ ಪಿ.ಎಚ್‌ಡಿ. ತರಗತಿಗೆ ಬಾ ಎನ್ನುತ್ತಾರೆ. ಇಂತಹ ಸಂದರ್ಭದಲ್ಲಿಯೂ ವಿದ್ಯಾರ್ಥಿಗೆ

ಪಿ.ಎಚ್.ಡಿ. ಪದವಿ ಪಡೆಯಲು 4 ಅಥವಾ 5 ವರ್ಷಗಳು ಬೇಕಾಗುತ್ತದೆ. ಆದರೆ ಕೆಲವರು ನಮ್ಮ ದೇಶಕ್ಕೆ ಬಂದ ಮೇಲೆ ತಾವು ಎರಡು ಪದವಿಗಳನ್ನು ಪಡೆದೆವು ಎಂದು ಬೇರೆ ಸ್ನೇಹಿತರ ಮುಂದೆ ಹೇಳಿಕೊಳ್ಳುತ್ತಿರುತ್ತಾರೆ. ಅವರಿಗೆ ಮಾಸ್ಟರ್ ಪದವಿ ಮತ್ತು ಪಿ.ಎಚ್.ಡಿ. ಪದವಿಗಳು ಬರುವುದೇನೋ ನಿಜ. ಆದರೆ ಅದು ಆ ವಿದ್ಯಾರ್ಥಿಯ ವಿಶೇಷ ಅರ್ಹತೆ ತೋರಿಸುವುದಿಲ್ಲ. ಅದರ ಬದಲು ಆ ವಿದ್ಯಾರ್ಥಿಗೆ ಇದ್ದ ಅನರ್ಹತೆ ತೋರಿಸುತ್ತದೆ. ಆ ವಿದ್ಯಾರ್ಥಿಗೆ ಪಿ.ಎಚ್.ಡಿ. ತರಗತಿಗೆ ಸೇರಲು ಸಾಕಷ್ಟು ಅರ್ಹತೆ ಇಲ್ಲದೆ ಇದ್ದುದರಿಂದ ಅವನಿಗೆ ಮಾಸ್ಟರ್ ಪದವಿ ತರಗತಿಗೆ ಹೋಗಿ ಓದಿಕೊಂಡು ಬಾ ಎಂದು ಹೇಳಿರುತ್ತಾರೆ ಎಂಬುದನ್ನು ನಾವು ಗಮನದಲ್ಲಿಡಬೇಕು.

ಮೇಲ್ಕಂಡ ವಿಷಯಗಳನ್ನು ಪರಿಶೀಲಿಸಿದರೆ ಅಮೆರಿಕಾ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವಿದ್ಯಾಮಟ್ಟ ಇರುವುದರಿಂದಲೇ ಇಂಡಿಯಾದ ವಿದ್ಯಾರ್ಥಿಗಳು ಇಂತಹ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎಂದು ನಮಗೆ ತಿಳಿಯುತ್ತದೆ. ಆದರೆ ಅಮೆರಿಕಾ ವಿಶ್ವವಿದ್ಯಾನಿಲಯಗಳಿಗೆ ಪದವೀಧರ ವಿದ್ಯಾಭ್ಯಾಸಕ್ಕೆಂದು ಹೋದ ವಿದ್ಯಾರ್ಥಿಗಳಿಗೆ ಪದವಿಪೂರ್ವ ತರಗತಿಗಳಲ್ಲಿ 'ಓದು ಎಂದು ಹೇಳಿದ ಮೇಲೆ ಅವರಿಗೆ ಕೊಟ್ಟಿದ್ದ ಫೆಲೋಷಿಪ್ ಅಥವಾ ಟೀಚಿಂಗ್ ಅಸಿಸ್ಟೆಂಟ್‌ಷಿಪ್ ವಿದ್ಯಾರ್ಥಿವೇತನವನ್ನು ಮುಂದುವರಿಸುತ್ತಾರೆಯೆ ಎಂಬ ಅನುಮಾನ ವಾಚಕರಿಗೆ ಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅಮೆರಿಕಾ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಯಾವ ಮಾರ್ಗ ಅನುಸರಿಸುತ್ತಾರೆ ಎಂಬುದನ್ನು ವಿವರವಾಗಿ ಪರಿಶೀಲಿಸೋಣ.

ಅಮೆರಿಕಾದ ವಿಶ್ವವಿದ್ಯಾನಿಲಯದ ಅಧಿಕಾರಿಗಳಲ್ಲಿ ಮತ್ತು ಪ್ರೊಫೆಸರ್‌ಗಳಲ್ಲಿ ಒಂದು ದೊಡ್ಡ ಗುಣವಿದೆ. ಇಂಡಿಯಾದಿಂದ ನಾವು ಹೊರಡುವುದಕ್ಕೆ ಮುನ್ನ ನಮಗೆ ಪಿ.ಎಚ್‌ಡಿ. ಪದವಿಗೆ ಓದಲು ಎಂದು ವಿದ್ಯಾರ್ಥಿವೇತನ ಕೊಟ್ಟಿದ್ದರೂ, ಅಲ್ಲಿಗೆ ಹೋದ ಮೇಲೆ ನಮಗೆ ಅರ್ಹತೆ ಇಲ್ಲ ಎಂದು ಕಂಡುಬಂದರೂ, ವಿದ್ಯಾರ್ಥಿ ವೇತನ ವಾಪಸ್ಸು ತೆಗೆದುಕೊಳ್ಳುವುದಿಲ್ಲ.

ನಾವು ಪದವಿಪೂರ್ವ ತರಗತಿಗಳಲ್ಲಿ ಓದುವಂತಾದರೂ ಮೊದಲನೆ ವರ್ಷ ವಿದ್ಯಾರ್ಥಿವೇತನ ಕೊಟ್ಟಿರುತ್ತಾರೆ. ನಾವು ಯಾವ ಇಲಾಖೆಯಲ್ಲಿ ಓದುತ್ತೇವೋ, ಆ ಇಲಾಖೆಯವರು ನಾವು ಮೊದಲನೆ ವರ್ಷ ಓದಬೇಕಾದ ಪದವೀಪೂರ್ವ ವಿಷಯಗಳನ್ನು ನಿರ್ಧರಿಸುತ್ತಾರೆ. ಮೊದಲನೆ ವರ್ಷದ ಪರೀಕ್ಷೆಗಳಲ್ಲಿ ನಾವು ಸರಾಸರಿ "ಬಿ" ಗ್ರೇಡನ್ನು (ಬಿ, ಗ್ರೇಡ್ ಅಂದರೆ 100ಕ್ಕೆ 85 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯಬೇಕು) ಪಡೆದು ಅವರ ಮನ್ನಣೆಗೆ ಪಾತ್ರರಾದರೆ ಮುಂದಿನ ವರ್ಷಗಳಲ್ಲೂ ಕೂಡ ನಮಗೆ ಯಾವ ತೊಂದರೆಯೂ ಇಲ್ಲದೆ ವಿದ್ಯಾರ್ಥಿವೇತನಗಳು ದೊರೆಯುತ್ತವೆ. ಆಗ 6 ಅಥವಾ 7 ವರ್ಷಗಳಾಗಲೀ ನಾವು ಪಿ.ಎಚ್‌ಡಿ. ಪದವಿ ಪಡೆದು ಬರಬಹುದು. ಹಾಗಿಲ್ಲದೆ ಮೊದಲನೆಯ ವರ್ಷದ ಪರೀಕ್ಷೆಗಳಲ್ಲಿ ನಾವು ಉತ್ತೀರ್ಣರಾದರೆ ಆಗ ವಿಶ್ವವಿದ್ಯಾನಿಲಯದವರು ಸಾಮಾನ್ಯವಾಗಿ ಎರಡು ಕ್ರಮಗಳನ್ನು ಕೈಗೊಳ್ಳುತ್ತಾರೆ. 1) ಮುಂದಿನ ವರ್ಷ ವಿದ್ಯಾರ್ಥಿವೇತನ ಕೊಡಲಾಗುವುದಿಲ್ಲವೆಂದು ವಿದ್ಯಾರ್ಥಿಗೆ ಕರೆದು ಹೇಳಿಬಿಡುತ್ತಾರೆ. ಆದುದರಿಂದ ಓದಬೇಕೆಂದು ಇಷ್ಟವಿದ್ದರೆ ವಿದ್ಯಾರ್ಥಿಯೇ ತನ್ನ ಸ್ವಂತ ವೆಚ್ಚ

ದಿಂದ ಓದಬೇಕು ಎಂದು ತಿಳಿಸುತ್ತಾರೆ. 2) ವಿದ್ಯಾರ್ಥಿಗೆ ಸಾಕಷ್ಟು ಅರ್ಹತೆ ಇಲ್ಲ. ಆದುದರಿಂದ ವಿಶ್ವವಿದ್ಯಾನಿಲಯ ಬಿಟ್ಟು ಹೊರಟುಹೋಗು ಎಂದು ಅವನಿಗೆ ಹೇಳುತ್ತಾರೆ.

ಮೊದಲನೆಯ ಕ್ರಮ ಕೈಗೊಂಡರೆ ವಿದ್ಯಾರ್ಥಿ ಹೇಗಾದರೂ ಉಳಿದುಕೊಳ್ಳಬಹುದು. ವಿದ್ಯಾರ್ಥಿ ಏನೇ ಕಷ್ಟ ಬಂದರೂ ಓದುವ ಇಚ್ಛೆ ವ್ಯಕ್ತಪಡಿಸಿದರೆ ಮತ್ತು ಎಂತಹ ಶ್ರಮವಾದ ಕೆಲಸವನಾದರೂ ಮಾಡಲು ಸಿದ್ಧವಿದ್ದರೆ ಅಲ್ಲಿಯ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಎಲ್ಲಿಯಾದರೂ ಕೆಲಸ ಕೊಡಿಸುತ್ತಾರೆ. ಅಮೆರಿಕಾದಲ್ಲಿ ಅಲ್ಲಿಯ ವಿಶ್ವವಿದ್ಯಾನಿಲಯಗಳ ಪದವಿ ಪಡೆದ ಹೊರತು, ಒಳ್ಳೆಯ ಕೆಲಸ ಸಿಗುವುದಿಲ್ಲ. ಆದರೆ ದೈಹಿಕ ಶ್ರಮವನ್ನು ಉಪಯೋಗಿಸಿ ಮಾಡುವಂತಹಕೆಲಸಗಳು ಸಿಗುತ್ತವೆ. ಅಲ್ಲಿಯ ವಿದ್ಯಾರ್ಥಿನಿಲಯಗಳಲ್ಲಿ, ಹೋಟೆಲ್‌ಗಳಲ್ಲಿ, ಅಂಚೆಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ ಅಥವಾ ಅಂಗಡಿಗಳಲ್ಲಿ ಕೂಲಿಯಾಳುಗಳ ಕೆಲಸ ಸಿಗುತ್ತದೆ. ಈ ಕೆಲಸಗಳಲ್ಲಿ ವಿದ್ಯಾರ್ಥಿಗೆ ಬಹಳ ಶ್ರಮವಾಗುತ್ತದೆ. ಆದರೂ ಅದನ್ನು ತಾಳ್ಮೆಯಿಂದ ಸಹಿಸಿಕೊಂಡು ಹೋಗುವ ಶಕ್ತಿ ಇದ್ದರೆ ಕೈ ತುಂಬಾ ಹಣ ಬರುತ್ತದೆ. ದಿನಕ್ಕೆ 4 ಅಥವಾ 5 ಘಂಟೆಗಳ ಕಾಲ ಕೆಲಸ ಮಾಡಿದರೂ ಸಾಕು. ಘಂಟೆಗೆ $1\frac{1}{2}$ ಡಾಲರ್‌ನಿಂದ ಹಿಡಿದು $2\frac{1}{2}$ ಡಾಲರ್‌ವರೆಗೆ ಕೂಲಿ ಸಿಗುತ್ತದೆ. ಈ ಹಣದಿಂದ ವಿದ್ಯಾರ್ಥಿ ತನ್ನ ಜೀವನವನ್ನು ಸಾಗಿಸಬಹುದು. ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಬಹುದು. ಹೀಗೆ ಕಷ್ಟಪಟ್ಟು ಅನೇಕ ಇಂಡಿಯಾದ ವಿದ್ಯಾರ್ಥಿಗಳು ಕಡೆಪಕ್ಷ ಎಂ.ಎ. ಅಥವಾ ಎಂ.ಎಸ್. ಪದವಿ ಪಡೆದುಕೊಂಡು ಬರುತ್ತಾರೆ.

ದುರದೃಷ್ಟವಶಾತ್ ವಿದ್ಯಾರ್ಥಿ ವಿಷಯದಲ್ಲಿ ಅಮೆರಿಕಾದ ಪ್ರೊಫೆಸರ್‌ಗಳು ಎರಡನೆಯ ಕ್ರಮ ಕೈಗೊಂಡರೆ ವಿದ್ಯಾರ್ಥಿ ಬೇರೆ ಮಾರ್ಗವಿಲ್ಲದೆ ನಿರಾಶೆಯಿಂದ ದೇಶಕ್ಕೆ ಹಿಂದಿರುಗಬೇಕಾಗುತ್ತದೆ. ಒಬ್ಬ ವಿದ್ಯಾರ್ಥಿಗೆ ಅರ್ಹತೆ ಇಲ್ಲ ಎಂದು ಒಂದು ವಿಶ್ವವಿದ್ಯಾನಿಲಯದಿಂದ ಹೋಗು ಎಂದು ಹೇಳಿದ ಮೇಲೆ, ಅವನಿಗೆ ಮತ್ತಾವ ವಿಶ್ವವಿದ್ಯಾನಿಲಯದಲ್ಲೂ ಓದಲು ಅವಕಾಶ ಸಿಗುವುದಿಲ್ಲ. ವಿದ್ಯಾರ್ಥಿ ಎಷ್ಟೇ ಸಾಹಸಪಟ್ಟು ಹತ್ತಾರು ವಿಶ್ವವಿದ್ಯಾನಿಲಯಗಳಿಗೆ ಅರ್ಜಿ ಹಾಕಿಕೊಂಡರೂ ಅವನಿಗೆ ಮಾತ್ರ ಪ್ರವೇಶ ದೊರೆಯುವುದಿಲ್ಲ. 'ಏಕೆಂದರೆ ಪ್ರತಿ ಅಮೆರಿಕನ್ ವಿಶ್ವವಿದ್ಯಾನಿಲಯದಲ್ಲೂ ವಿದ್ಯಾರ್ಥಿ ಹಿಂದೆ ಯಾವ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದನೋ ಅಲ್ಲಿಯ ಪ್ರೊಫೆಸರ್‌ಗಳಿಂದ ಅರ್ಹತಾಪತ್ರವನ್ನು ತೆಗೆದುಕೊಂಡು ಬರಬೇಕೆಂದು, ಒತ್ತಾಯಪಡಿಸುತ್ತಾರೆ. ಜೊತೆಗೆ ಹಿಂದಿನ ವಿಶ್ವವಿದ್ಯಾನಿಲಯದಲ್ಲಿ ಕೊಟ್ಟಿರುವ ಅಂಕಗಳ ಪಟ್ಟಿಯನ್ನು ಹಾಜರುಮಾಡು ಎಂದು ತಿಳಿಸುತ್ತಾರೆ. ಇವೆರಡನ್ನೂ ತೋರಿಸದಿದ್ದರೆ ಪ್ರವೇಶಕ್ಕೆ ಅವಕಾಶವೇ ಇಲ್ಲ. ಆದುದರಿಂದ ಒಂದು ಕಡೆ ಫೇಲಾದ ವಿದ್ಯಾರ್ಥಿ ಮತ್ತೊಂದೆಡೆ ಸೇರಿಕೊಳ್ಳಲು ಸಾಧ್ಯವಿಲ್ಲ. ವಿದ್ಯಾರ್ಥಿ "ಬಿ" ಗ್ರೇಡ್‌ಗಿಂತ ಕಡಮೆ ಅಂಕಗಳನ್ನು ತೆಗೆದುಕೊಂಡಿದ್ದರೆ ಯಾವ ವಿಶ್ವವಿದ್ಯಾನಿಲಯವು ಅವನನ್ನು ಸೇರಿಸಿಕೊಳ್ಳುವುದಿಲ್ಲ. ಜೊತೆಗೆ ಅಮೆರಿಕನ್ ಪ್ರೊಫೆಸರ್‌ಗಳು ಎಷ್ಟು ನಿರ್ದಾಕ್ಷಿಣ್ಯವಾಗಿರುತ್ತಾರೆ ಅಂದರೆ ನಮಗೆ ಅರ್ಹತಾಪತ್ರಗಳನ್ನು (testimonials) ಕೊಡುವಾಗ ಅವರ ಮನಸ್ಸಿಗೆ ಸರಿ ಎಂದು ತೋಚಿದ್ದನ್ನು ಬರೆಯುತ್ತಾರೆ. ವಿದ್ಯಾರ್ಥಿಗೆ ಇರುವ

ನಿಜವಾದ ಅರ್ಹತೆ ವಿಷಯ ಬರೆಯುತ್ತಾರೆ. ನಮ್ಮ ದೇಶದಲ್ಲಿ ರುವ ಹಾಗೆ ದಾಕ್ಷಿಣ್ಯಕ್ಕಾಗಿ ಅರ್ಹತಾಪತ್ರಗಳನ್ನು ಕೊಡುವುದಿಲ್ಲ. ನಮ್ಮ ದೇಶದಲ್ಲಿ ನಮ್ಮ ಪ್ರೊಫೆಸರ್‌ಗಳು ಅನ್ನುವ ಹಾಗೆ, ಏನೋ ಪಾಪ ಇಲ್ಲಿ ಫೇಲಾಯಿತು, ಬೇರೆ ಎಲ್ಲಿಗಾದರೂ ಹೋಗಿ ಸೇರಿ ಕೊಂಡು ಪಾಸುಮಾಡಿಕೊಳ್ಳಲಿ, ನಾವು ಒಳ್ಳೆಯ ಅರ್ಹತಾಪತ್ರ ಗಳನ್ನು ಬರೆದುಕೊಡೋಣ ಎಂದು, ಅಮೆರಿಕನ್ ಪ್ರೊಫೆಸರ್‌ಗಳು ಬರೆಯುವುದಿಲ್ಲ. ಅದರ ಬದಲು ತಮ್ಮ ನಿಜವಾದ ಅಭಿಪ್ರಾಯ ಬರೆಯುತ್ತಾರೆ. ವಿದ್ಯಾರ್ಥಿ ಇಂತಹ ಅರ್ಹತಾಪತ್ರ ತೆಗೆದು ಕೊಂಡು ಹೋದಾಗ ಅವನಿಗೆ ಎಲ್ಲಿಯೂ ಪ್ರವೇಶ ದೊರೆಯುವು ದಿಲ್ಲ. ಆದುದರಿಂದ ನಮ್ಮ ಉಪಾಧ್ಯಾಯರುಗಳು ನಮ್ಮಗಳ ವಿಷಯ ದಲ್ಲಿ ಕೊಡುವ ಅರ್ಹತಾಪತ್ರಗಳಿಗೆ ಅಮೆರಿಕನ್ ವಿಶ್ವವಿದ್ಯಾ ನಿಲಯಗಳಲ್ಲಿ ಬಹಳ ಪ್ರಾಮುಖ್ಯತೆ ಇದೆ. ಸರಿಯಾದ ಅರ್ಹತಾ ಪತ್ರವಿಲ್ಲದೆ ಮತ್ತು ಒಳ್ಳೆಯ ಅಂಕಗಳನ್ನು ಪಡೆಯದೆ ಇರುವ ವಿದ್ಯಾರ್ಥಿಗೆ ಎಲ್ಲಿಯೂ ಅವಕಾಶ ದೊರೆಯುವುದಿಲ್ಲ. ಆದುದ ರಿಂದ ವಿದ್ಯಾರ್ಥಿ ಬೇರೆ ಮಾರ್ಗವಿಲ್ಲದೆ ಇಂಡಿಯಾಕ್ಕೆ ವಾಪಸ್ಸು ಬರಬೇಕಾಗುತ್ತದೆ. ಏತಕ್ಕೆ ಕೆಲವು ಇಂಡಿಯಾದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕೇವಲ 3 ಅಥವಾ 4 ತಿಂಗಳಿನೊಳಗಾಗಿ ಅಥವಾ 9 ತಿಂಗಳಿನೊಳಗಾಗಿ ಇಂಡಿಯಾಕ್ಕೆ ಹಿಂದಿರುಗುತ್ತಾರೆ ಎಂಬುದು ಈಗ ವಾಚಕರಿಗೆ ಮನವರಿಕೆಯಾಗುತ್ತದೆ ಎಂದು ಭಾವಿ ಸುತ್ತೇನೆ.

ನಮ್ಮ ಅಧ್ಯಾಪಕರುಗಳು ಕೊಡುವ ಅರ್ಹತಾಪತ್ರ ಎಷ್ಟರ ಮಟ್ಟಿಗೆ ನಮ್ಮ ವಿದ್ಯಾಭ್ಯಾಸ ಜೀವನದಲ್ಲಿ ಪ್ರಭಾವ ಬೀರಬಲ್ಲದು

ಎಂಬುದನ್ನು ವಿವರಿಸಲು ಒಂದು ನಿದರ್ಶನ ಕೊಡುತ್ತೇನೆ. ನಮ್ಮ ದೇಶದಲ್ಲಿ ನಮ್ಮ ಅಧ್ಯಾಪಕರುಗಳು ಅನೇಕ ಬಾರಿ ದಾಕ್ಷಿಣ್ಯಕ್ಕೋಸ್ಕರವಾಗಿ ಅರ್ಹತಾಪತ್ರ ಕೊಡುತ್ತಾರೆ. ನಮ್ಮ ಅಧ್ಯಾಪಕರು ಒಳ್ಳೆಯ ಅರ್ಹತಾಪತ್ರ ಕೊಡದಿದ್ದರೆ ವಿದ್ಯಾರ್ಥಿಗಳಾದ ನಾವು ಅವರನ್ನು ಬೈಯುತ್ತೇವೆ. ನಮ್ಮ ಅಧ್ಯಾಪಕ ಬ್ರಾಹ್ಮಣ, ವಿದ್ಯಾರ್ಥಿಯಾದ ನಾನು ಅಬ್ರಾಹ್ಮಣ ಆದುದರಿಂದ ಅರ್ಹತಾ ಪತ್ರ ಕೊಡಲಿಲ್ಲ ಎಂದು ಅನ್ನುತ್ತೇವೆ. ಇಲ್ಲದಿದ್ದರೆ ಅಧ್ಯಾಪಕ ಲಿಂಗಾಯಿತ, ವಿದ್ಯಾರ್ಥಿಯಾದ ನಾನು ಒಕ್ಕಲಿಗ, ಆದುದರಿಂದ ಅರ್ಹತಾಪತ್ರ ಕೊಡಲಿಲ್ಲ ಎನ್ನುವುದು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಸಾಮಾನ್ಯವಾಗಿದೆ. ಇಂತಹ ಸಮಾಜದಲ್ಲಿ ಇರುವಾಗ ನಮ್ಮ ಅಧ್ಯಾಪಕರುಗಳಿಗೆ ಸರಿಯಲ್ಲ ಎಂದು ಗೊತ್ತಿದ್ದರೂ, ಅನೇಕ ವೇಳೆ ಒಳ್ಳೆಯ ಅರ್ಹತಾಪತ್ರ ಕೊಡುತ್ತಾರೆ. ಇದೇ ರೀತಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಒಂದು ಘಟನೆ ನಡೆಯಿತು.

ಒಬ್ಬ ಅಧ್ಯಾಪಕರು ಪ್ರಭಾವಶಾಲಿಯಾಗಿದ್ದರು. ಒಬ್ಬ ಪ್ರಾಧ್ಯಾಪಕರು ಮತ್ತು ಉಪಕುಲಪತಿಗಳು ಅವರನ್ನು ಅಮೇರಿಕಾಕ್ಕೆ ಕಳುಹಿಸಿಕೊಡುವುದಕ್ಕೋಸ್ಕರ ಅರ್ಹತಾಪತ್ರ ಬರೆದುಕೊಟ್ಟರು. ಅಧ್ಯಾಪಕರು, ಇಂಡಿಯಾದಲ್ಲಿ ಪಿಎಚ್.ಡಿ. ಪದವಿಗೆ ಅಗತ್ಯವಾದ ಪ್ರಬಂಧ (Thesis) ಬರೆಯುತ್ತಿರುವರೆಂದೂ ಆದರೆ ಇನ್ನೂ ಸಂಪೂರ್ಣ ಮಾಡಿಲ್ಲವೆಂದೂ ಅರ್ಹತಾಪತ್ರದಲ್ಲಿ ಕಾಣಿಸಿದ್ದರು ಜೊತೆಗೆ ಅವರು ಒಳ್ಳೆಯ ಅಧ್ಯಾಪಕರೆಂದು ಕಾಣಿಸಿದ್ದರು. ಇಂತಹ ಅರ್ಹತಾಪತ್ರ ಅಮೇರಿಕಾದ ಒಂದು ಸುಪ್ರಸಿದ್ಧ ವಿಶ್ವವಿದ್ಯಾನಿಲಯಕ್ಕೆ ಹೋಯಿತು. ಸಾಮಾನ್ಯವಾಗಿ ಆ ವಿಶ್ವವಿದ್ಯಾನಿಲಯ

ದಲ್ಲಿ ಎಂ.ಎ. ತರಗತಿಗೆ ಪ್ರವೇಶ ಪಡೆಯುವುದು ಅನೇಕ ಅಮೆರಿಕನ್ ವಿದ್ಯಾರ್ಥಿಗಳಿಗೂ ಸಾಧ್ಯವಿಲ್ಲ. ಅಂತಹ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕಾಗಿ ನಮ್ಮ ಅಧ್ಯಾಪಕರು ಅರ್ಜಿ ಹಾಕಿದ್ದರು. ಇಂಡಿಯಾದ ಉಪಕುಲಪತಿಗಳೊಬ್ಬರಿಂದ ಇಂತಹ ಅರ್ಹತಾಪತ್ರ ಬಂದಿದ್ದನ್ನು ನೋಡಿ ಅಲ್ಲಿಯ ವಿಶ್ವವಿದ್ಯಾನಿಲಯದವರು ನಮ್ಮ ಅಧ್ಯಾಪಕರಿಗೆ ವಿದ್ಯಾರ್ಥಿವೇತನದ ಸಹಿತ ಪ್ರವೇಶವನ್ನು ದೊರಕಿಸಿಕೊಟ್ಟರು. ಆದರೆ ನಮ್ಮ ಅಧ್ಯಾಪಕರು ಅಲ್ಲಿಗೆ ಹೋದ ಕೆಲವು ತಿಂಗಳಿನೊಳಗಾಗಿ ಅವರಿಗಿದ್ದ ಅರ್ಹತೆ ವಿಷಯದಲ್ಲಿ, ಅಮೆರಿಕನ್ ಪ್ರೊಫೆಸರ್‌ಗಳಿಗೆ ಸದಭಿಪ್ರಾಯ ಬರಲಿಲ್ಲ. ಆದರೆ 9 ತಿಂಗಳ ತನಕ ವಿದ್ಯಾರ್ಥಿವೇತನ ಕೊಟ್ಟಿದ್ದರಿಂದ ಸುಮ್ಮನಿದ್ದರು. 9 ತಿಂಗಳಾದೊಡನೆ ವಿಶ್ವವಿದ್ಯಾನಿಲಯ ಬಿಟ್ಟು ಹೋಗಬೇಕೆಂದು ಹೇಳಿದರು. ವಿಧಿ ಇಲ್ಲದೆ ನಮ್ಮ ಅಧ್ಯಾಪಕರು ಹಿಂದಿರುಗಬೇಕಾಯಿತು.

ನನ್ನ ಮಿತ್ರರು ಮತ್ತು ನಾನು ಅಮೆರಿಕಾದಲ್ಲಿದ್ದಾಗ ಆ ಸುಪ್ರಸಿದ್ಧ ವಿಶ್ವವಿದ್ಯಾನಿಲಯವನ್ನು ನೋಡಿಕೊಂಡು ಬರೋಣವೆಂದು ಹೋಗಿದ್ದೆವು. ಆಗ ಅಲ್ಲಿ ಕೆಲವು ಪ್ರಾಧ್ಯಾಪಕರುಗಳನ್ನು ಸಂದರ್ಶಿಸುವ ಅವಕಾಶ ಒದಗಿತು. ನಮ್ಮನ್ನು ನೋಡಿದೊಡನೆಯೆ ಅಲ್ಲಿದ್ದ ಒಬ್ಬ ಪ್ರಾಧ್ಯಾಪಕರಿಗೆ ಹಿಂದಿನ ನೆನಪು ಬಂದಿತು. ನಮ್ಮಗಳೆದುರಿಗೆ ಹೀಯಾಳಿಸುವ ರೀತಿಯಲ್ಲಿ ನಮಗೆ ಪ್ರಶ್ನೆ ಹಾಕಿದರು. “ನಿಮ್ಮ ವಿಶ್ವವಿದ್ಯಾನಿಲಯದ ಅಧ್ಯಾಪಕರು ಮತ್ತು ಅಧಿಕಾರ ವರ್ಗದವರು ಅರ್ಹತಾಪತ್ರವನ್ನು ಕೊಡುವಾಗ ಏಕೆ ಸತ್ಯ ತಿಳಿಸುವುದಿಲ್ಲ ಎಂದರು.” ನಮಗಿಂತ ಮೊದಲು ಹೋಗಿ ವಾಪಸ್ಸು

ಬಂದಿದ್ದ ಅಧ್ಯಾಪಕರ ವಿಷಯ ತಿಳಿಸಿದರು. ಆಗ ನಾವು ಮರು ಮಾತನಾಡದೆ ತಲೆ ತಗ್ಗಿಸಿದೆವು. ಈಗ ಅದರ ಪರಿಣಾಮ ಏನಾಗಿದೆ ಅಂದರೆ ನಮ್ಮ ವಿಶ್ವವಿದ್ಯಾನಿಲಯದಿಂದ ಅಲ್ಲಿಗೆ ಯಾರು ಅರ್ಜಿ ಹಾಕಿದರೂ ಅದನ್ನು ತಳ್ಳಿ ಹಾಕುತ್ತಾರೆ. ಹೀಗೆ ಒಂದು ಸಲ ಅಲ್ಲಿಯ ಪ್ರಾಧ್ಯಾಪಕರುಗಳಿಗೆ ನಮ್ಮ ನಡವಳಿಕೆಯ ವಿಷಯದಲ್ಲಿ ಅಪನಂಬಿಕೆ ಬಂದರೆ ಇನ್ನೆಂದಿಗೂ ನಮಗೆ ಅವರು ಪುರಸ್ಕಾರ ಕೊಡುವುದಿಲ್ಲ. ನಮಗೆ ಪುರಸ್ಕಾರ ದೊರೆಯದೆ ಇದ್ದಾಗ ದೇಶ ಬಿಟ್ಟು ಬರಬೇಕಲ್ಲದೆ ಇನ್ನಾವ ಮಾರ್ಗವು ಉಳಿಯುವುದಿಲ್ಲ.

ಇದುವರೆಗೆ ವಿಮರ್ಶಿಸಲ್ಪಟ್ಟಿರುವ ವಿಷಯಗಳನ್ನು ನೋಡಿದಾಗ ಅಮೆರಿಕನ್ ವಿದ್ಯಾಭ್ಯಾಸ ಕ್ರಮ ತಿಳಿಯಬೇಕೆಂಬ ಕುತೂಹಲ ಉಂಟಾಗುವುದು ಸಹಜ. ಆದುದರಿಂದ ಮುಂದಿನ ಅಧ್ಯಾಯದಲ್ಲಿ ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ಬೆಳೆಯಿಸಿಕೊಂಡು ಬಂದಿರುವ ಪದವೀಧರ ವಿದ್ಯಾಭ್ಯಾಸ ಕ್ರಮವನ್ನು ವಿವರಿಸಲಾಗಿದೆ.

ಅಧ್ಯಾಯ ೩

ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸ ಕ್ರಮ

ಹಿಂದಿನ ಅಧ್ಯಾಯದಲ್ಲಿ ಪಿಎಚ್.ಡಿ ತರಗತಿಗೆ ಸೇರಿಸಿಕೊಳ್ಳು ವುದಕ್ಕೆ ಮೊದಲು ಯಾವ ರೀತಿ ನಮ್ಮನ್ನು ಅಮೆರಿಕನ್ ಪ್ರೊಫೆಸರ್‌ಗಳು ಪರೀಕ್ಷಿಸುತ್ತಾರೆ ಎಂಬುದನ್ನು ವಿವರಿಸಲಾಗಿದೆ. ಅದೃಷ್ಟವಶಾತ್ ನೇರವಾಗಿ ಪಿಎಚ್.ಡಿ. ತರಗತಿಗೆ ಪ್ರವೇಶ ದೊರೆತರೆ ಇಂಡಿಯಾದ ವಿದ್ಯಾರ್ಥಿಗಳು ಅನಂತರ ಅನುಭವಿಸ ಬೇಕಾದ ಸಮಸ್ಯೆಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸ ಲಾಗಿದೆ. ಸಮಾಜಶಾಸ್ತ್ರಗಳು, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರಗಳೆಲ್ಲಕ್ಕೂ ಅನ್ವಯಿಸು ವಂತೆ ಯಾವರೀತಿ ಪಿಎಚ್.ಡಿ. ವಿದ್ಯಾಭ್ಯಾಸ ಕ್ರಮವನ್ನು ಅಮೆರಿಕನ್ ವಿಶ್ವವಿದ್ಯಾನಿಲಯಗಳು ರೂಪಿಸಿಕೊಂಡಿವೆ ಎಂಬು ದನ್ನು ಕುರಿತು ಸಹ ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಇಂಡಿಯಾದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಪೈಕಿ ಅನೇ ಕರಿಗೆ ಪಿಎಚ್.ಡಿ. ಪದವಿ ಪಡೆಯಬೇಕಾದರೆ ತರಗತಿಗಳಿಗೆ ಹೋಗ ಬೇಕೆ ಎಂಬ ಆಶ್ಚರ್ಯ ಸ್ವಾಭಾವಿಕವಾಗಿ ನಮ್ಮಲ್ಲಿ ಕಂಡುಬರು ತ್ತದೆ. ಏಕೆಂದರೆ ಅನೇಕ ವರ್ಷಗಳಿಂದ ನಮ್ಮ ವಿಶ್ವವಿದ್ಯಾನಿಲಯ ಗಳು ಬ್ರಿಟಿಷ್ ವಿಶ್ವವಿದ್ಯಾನಿಲಯಗಳ ಮಾದರಿಯನ್ನು ಅಳವಡಿಸಿ

ಕೊಂಡು ಅವುಗಳ ಹಾಗೆ ಬೋಧನ ಕ್ರಮಗಳನ್ನು ನಮ್ಮ ದೇಶದಲ್ಲಿ ಕಾರಿಗೆ ತಂದಿವೆ. ಆದುದರಿಂದ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಎಚ್.ಡಿ. ತರಗತಿಗಳನ್ನು ಕಾಣುವುದಿಲ್ಲ. ಆದರೆ ಅಮೆರಿಕನ್ ಶ್ವವಿದ್ಯಾನಿಲಯಗಳಲ್ಲಿ ಉಳಿದ ಪದವಿ ತರಗತಿಗಳಲ್ಲಿ ಓದುವಂತೆ ಎಚ್.ಡಿ. ಪದವಿಗೂ ತರಗತಿಗಳ ಮೂಲಕ ಓದಬೇಕು.

ಪ್ರತಿಯೊಬ್ಬ ಇಂಡಿಯಾದ ವಿದ್ಯಾರ್ಥಿಯು ಗಮನದಲ್ಲಿ ಇಡ ಬೇಕಾದ ಒಂದು ಮುಖ್ಯ ಅಂಶ ಏನೆಂದರೆ, ನಮ್ಮ ವಿಶ್ವವಿದ್ಯಾ ಲಯಗಳಲ್ಲಿ ಇರುವಂತೆ ಮಾಸ್ಟರ್ ಪದವಿ ಪಡೆದ ಮೇಲೆ ನೇರ ವಾಗಿ ಒಂದು ಪ್ರಬಂಧ (Thesis) ಬರೆದು ಪಿಎಚ್.ಡಿ. ಡಿಗ್ರಿ ಪಡೆಯುವ ಹಾಗಿಲ್ಲ. ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ಎಚ್.ಡಿ. ಪದವಿಗೆ ಓದುವುದು ಅಂದರೆ ಮಾಸ್ಟರ್ ಪದವಿ ಪಡೆದ ಮೇಲೆ 2 ಅಥವಾ 3 ವರ್ಷಗಳ ಕಾಲ ತರಗತಿಗಳಲ್ಲಿ ಅನೇಕ ವಿಷಯಗಳನ್ನು (Subjects) ಓದಿ, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು ಎಂದು ತಿಳಿದುಕೊಳ್ಳಬೇಕು.

ಇಂಡಿಯಾದ ವಿದ್ಯಾರ್ಥಿಗಳು ಪಿಎಚ್.ಡಿ. ತರಗತಿಗೆ ಸೇರಿಸಿ ಕೊಳ್ಳಲ್ಪಟ್ಟರೂ, ಮೊದಲು ಇಂಗ್ಲಿಷ್ ಭಾಷೆ ಪರೀಕ್ಷೆಯಲ್ಲಿ ಪಾಸು ಮಾಡಬೇಕೆಂದು, ನಾವು ವಿಶ್ವವಿದ್ಯಾನಿಲಯಕ್ಕೆ ಸೇರಿದೊಡನೆಯೆ ತಿಳಿಸುತ್ತಾರೆ. ಮೊದಲು ನಮ್ಮ ವಿಷಯಕ್ಕೆ ಸಂಬಂಧಪಟ್ಟ ಹಾಗೆ ತರಗತಿಗಳಿಗೆ ಹೋಗಲು ಸೂಚಿಸುತ್ತಾರೆ. ಅಂದರೆ ಅರ್ಥಶಾಸ್ತ್ರದ ವಿದ್ಯಾರ್ಥಿ ಅರ್ಥಶಾಸ್ತ್ರ ವಿಭಾಗದ ಪಿಎಚ್.ಡಿ. ತರಗತಿಗಳಿಗೂ ಮತ್ತು ಇತರ ವಿಜ್ಞಾನಗಳನ್ನು ಅಧ್ಯಯನ ಮಾಡುವವರು ಅವರ ರ ಶಾಸ್ತ್ರಗಳಿಗೆ ಅನ್ವಯಿಸುವ ತರಗತಿಗಳಿಗೆ ಹೋಗುವಂತೆ ಸೂಚಿ

ಸುತ್ತಾರೆ. ಅದರ ಜೊತೆಗೆ ಇಂಗ್ಲಿಷ್ ಭಾಷೆಯ ಪರೀಕ್ಷೆಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ.

ಮೊದಲು ಇಂಗ್ಲಿಷ್ ಭಾಷೆ ಪರೀಕ್ಷೆಗೆ ನಾವು ಕುಳಿತಾಗ ಅದರಲ್ಲೇ ತೇರ್ಗಡೆಯಾದರೆ ಯಾವ ತೊಂದರೆಯೂ ಇಲ್ಲ. ಇಲ್ಲ ದಿದ್ದರೆ ಪುನಃ ಇಂಗ್ಲಿಷ್ ಭಾಷೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ತನಕ ಇಂಗ್ಲಿಷ್ ಭಾಷೆ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದು ಸೂಚಿ ಸುತ್ತಾರೆ. ಇಂಡಿಯಾದಲ್ಲಿ ನಾವು 13 ವರ್ಷಗಳ ಕಾಲ (ಪ್ರಾಥ ಮಿಕ ಶಾಲೆಯಿಂದ ಪ್ರಾರಂಭಿಸಿ ಮಾಸ್ಟರ್ ತರಗತಿ ಪೂರ್ತಾ) ಇಂಗ್ಲಿಷ್ ಭಾಷೆ ಅಧ್ಯಯನ ಮಾಡಿದ್ದೇವೆ ಮತ್ತು ಇಂಗ್ಲಿಷ್ ಮಾಧ್ಯಮದ ಮೂಲಕವೇ ಓದಿದ್ದೇವೆ ಎಂದರೂ ಅವರು ಕೇಳುವು ದಿಲ್ಲ. ಇಂಡಿಯಾದ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲಿಷ್ ಭಾಷೆ ಯಲ್ಲಿ ಎಂ.ಎ ಪದವಿ ಪಡೆದು ಇಂಗ್ಲಿಷ್ ಅಧ್ಯಾಪಕನಾಗಿದ್ದರೂ ಅವರು ಬಿಡುವುದಿಲ್ಲ. ಆತನೂ ಕೂಡ ಪುನಃ ಅವರು ನಡೆಸುವ ಇಂಗ್ಲಿಷ್ ಭಾಷಾ ಪರೀಕ್ಷೆಯಲ್ಲಿ ಪಾಸು ಮಾಡಬೇಕು ಎಂದು ಹೇಳುತ್ತಾರೆ. ಇಂತಹ ಪರಿಸ್ಥಿತಿಯನ್ನು ನೋಡಿದಾಗ ನಮಗೆ ನಿಜ ವಾಗಿಯೂ ದುಃಖವಾಗುತ್ತದೆ. ಏಕೆಂದರೆ ಅವರು ನಡೆಸುವ ಪರೀಕ್ಷೆ ಎಷ್ಟು ಕಠಿಣವಾಗಿರುತ್ತದೆ ಅಂದರೆ ಅನೇಕ ಇಂಡಿಯಾದ ವಿದ್ಯಾರ್ಥಿಗಳು ಒಂದೇ ಸಲಕ್ಕೆ ಆ ಪರೀಕ್ಷೆಯಲ್ಲಿ ತೇರ್ಗಡೆಯಾಗ ವುದಿಲ್ಲ. ಕೆಲವರು ಮೂರು ಅಥವಾ ನಾಲ್ಕು ಬಾರಿ ಆ ಪರೀಕ್ಷೆ ಕುಳಿತುಕೊಂಡು ಅನಂತರ ತೇರ್ಗಡೆಯಾಗುತ್ತಾರೆ. ಇನ್ನು ಕೆಲ ವರು ತಮ್ಮ ವಿಜ್ಞಾನಶಾಸ್ತ್ರಕ್ಕೆ ಸಂಬಂಧಪಟ್ಟ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿದ್ದರೂ ಇಂಗ್ಲಿಷ್ ಭಾಷೆಯ ಪರೀಕ್ಷೆಯಲ್ಲಿ ತೇರ್ಗ

ರ್ಯಾಗಿರುವುದಿಲ್ಲ. ಆ ಪರೀಕ್ಷೆಯಲ್ಲಿ ತೇರ್ಗಡೆಯಾದ ಹೊರತು ಮಗೆ ಪದವಿ ಬರುವುದಿಲ್ಲ.

ಇಂಡಿಯಾದಿಂದ ಬರುವ ಈಗಿನ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಾಷೆಯ ವಿಷಯದಲ್ಲಿ ಸಾಕಷ್ಟು ಪರಿಶ್ರಮವಿಲ್ಲವೆಂದು ಅಲ್ಲಿಯ ಶ್ವವಿದ್ಯಾನಿಲಯದ ಅಧಿಕಾರಿಗಳು ತಿಳಿದುಕೊಂಡಿದ್ದಾರೆ. ಆದುದ ಂದ ಅಲ್ಲಿಗೆ ಹೋದ ಕೂಡಲೇ ಮೊದಲು ಇಂಗ್ಲಿಷ್ ಭಾಷೆಯ ರೀಕ್ಷೆ ನಡೆಸುತ್ತಾರೆ. ಆ ಪರೀಕ್ಷೆಯಲ್ಲಿ ಶೇಕಡಾ 50ಕ್ಕಿಂತ ಡಮೆ ಅಂಕಗಳನ್ನು ತೆಗೆದುಕೊಂಡರೆ ಮೊದಲು ಇಂಗ್ಲಿಷ್ ರಗತಿಗಳಿಗೆ ಹೋಗಿ ಅಭ್ಯಾಸ ಮಾಡಿಕೊಂಡು ಬನ್ನಿ ಎನ್ನುತ್ತಾರೆ. ೀಕಡಾ 50ರಿಂದ 70ರವರೆಗೆ ಅಂಕಗಳನ್ನು ತೆಗೆದುಕೊಂಡರೆ ನುತ್ತೀರ್ಣರೆಂದು ತೀರ್ಮಾನಿಸುತ್ತಾರೆ. ಪುನಃ ಪರೀಕ್ಷೆಗೆ ಕುಳಿತು ೊಳ್ಳುವಂತೆ ಹೇಳುತ್ತಾರೆ. ಆದರೆ ಇಂತಹವರು ಇಂಗ್ಲಿಷ್ ಾಷೆಯ ತರಗತಿಗಳಿಗೆ ಹೋಗಿ ಓದಬೇಕಾಗಿಲ್ಲ. ಉತ್ತರ ಇಂಡಿ ಯಾದ ವಿಶ್ವವಿದ್ಯಾನಿಲಯಗಳಿಂದ ಬರುವ ಬಹುಮಂದಿ ವಿದ್ಯಾರ್ಥಿ ಳು ಇಂಗ್ಲಿಷ್ ಭಾಷಾ ಪರೀಕ್ಷೆಯಲ್ಲಿ ಶೇಕಡಾ 50ಕ್ಕಿಂತ ಡಿಮೆ ಅಂಕಗಳನ್ನು ಪಡೆದು ಇಂಗ್ಲಿಷ್ ಭಾಷೆಯ ತರಗತಿಗಳಿಗೆ ೋಗುವುದು ಈಗ ಸಾಮಾನ್ಯವಾಗಿದೆ. (ಆದರೆ ದೆಹಲಿ, ಕಲ್ಕತ್ತಾ ುತ್ತು ಮುಂಬಯಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಇಂತಹ ರಿಸ್ಥಿತಿಗೆ ಒಳಗಾಗುವುದು ಅಪರೂಪ). ದಕ್ಷಿಣ ಇಂಡಿಯಾದ ಶ್ವವಿದ್ಯಾನಿಲಯಗಳಲ್ಲಿ ಓದಿರುವ ಅನೇಕ ವಿದ್ಯಾರ್ಥಿಗಳು ಂಗ್ಲಿಷ್ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾರೆ. ಆದರೆ ತ್ತೀಚೆಗೆ ಈ ವಿಶ್ವವಿದ್ಯಾನಿಲಯಗಳಿಂದ ಬಂದಿರುವ ಕೆಲವು

ವಿದ್ಯಾರ್ಥಿಗಳೂ ಕೂಡ ಇಂಗ್ಲಿಷ್ ತರಗತಿಗಳಿಗೆ ಹೋಗಬೇಕಾಗಿದೆ. ಅಮೆರಿಕಾದ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ವಿದೇಶಿ ವಿದ್ಯಾರ್ಥಿಗಳಿಗಾಗಿಯೇ ಪ್ರತ್ಯೇಕ ಇಂಗ್ಲಿಷ್ ಭಾಷಾ ತರಗತಿಗಳನ್ನು ನಡೆಸುತ್ತಾರೆ. ಇಂಗ್ಲಿಷ್ ಭಾಷೆಯಲ್ಲಿ ತರಬೇತಿ ಕೊಡಬೇಕೆಂದು ತೀರ್ಮಾನಿಸಿದ ವಿದ್ಯಾರ್ಥಿಗಳೆಲ್ಲರನ್ನೂ ಇಂತಹ ತರಗತಿಗಳಿಗೆ ಹೋಗಿ ಅನ್ನುತ್ತಾರೆ. ಇಂತಹವರು ಇಂಗ್ಲಿಷ್ ಭಾಷೆ ಕಲಿಯುವುದಕ್ಕಾಗಿಯೇ 6 ತಿಂಗಳಿನಿಂದ 1 ವರ್ಷಕಾಲ ತೆಗೆದುಕೊಳ್ಳುತ್ತಾರೆ. ಆದುದರಿಂದ ಇಂಡಿಯಾದಿಂದ ಬಂದ ವಿದ್ಯಾರ್ಥಿ ಇಂತಹ ಪರಿಸ್ಥಿತಿಗೆ ಒಳಗಾದರೆ ಅವನ ಮೊದಲನೆ ವರ್ಷದ ಅವಧಿಯೆಲ್ಲಾ ಇಂಗ್ಲಿಷ್ ಭಾಷೆಯ ಅಧ್ಯಯನಕ್ಕಾಗಿಯೇ ವಿನಿಯೋಗಿಸಲ್ಪಟ್ಟಿತು ಎಂಬುದನ್ನು ವಾಚಕರು ಗಮನಿಸಬೇಕು. ಇಂತಹ ತರಬೇತಿ ಪಡೆದ ಮೇಲೂ ಇಂಗ್ಲಿಷ್ ಭಾಷಾ ಪರೀಕ್ಷೆಯಲ್ಲಿ ಅನುತ್ತೀರ್ಣನಾದರೆ ಅವನಿಗೆ ತರಗತಿಯಲ್ಲೂ ಓದಲು ಬಿಡುವುದಿಲ್ಲ. ವಿದ್ಯಾರ್ಥಿ ವಾಪಸ್ಸು ತನ್ನ ದೇಶಕ್ಕೆ ಹೋಗಬೇಕಾಗುತ್ತದೆ.

ಮೊದಲನೆಯ ಸಮಸ್ಯೆಯಾದ ಇಂಗ್ಲಿಷ್ ಭಾಷಾ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರೆ ಅನಂತರ ಅವರ ವಿಭಾಗದ ಅಧ್ಯಯನ ಕ್ರಮಗಳಲ್ಲಿ ಅವರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಸಮಾಜಶಾಸ್ತ್ರಗಳ ಮತ್ತು ಭೌತಶಾಸ್ತ್ರಗಳ ಯಾವುದೇ ಒಂದು ಭಾಗವನ್ನು ತೆಗೆದುಕೊಂಡು ಪಿಎಚ್.ಡಿ. ಪದವಿಗಾಗಿ ಓದುವ ವಿದ್ಯಾರ್ಥಿಗೆ 2 ವರ್ಷಗಳ ಅವಧಿಯಲ್ಲಿ 15ರಿಂದ 20 ವಿಷಯಗಳನ್ನು (Subjects) ತೆಗೆದುಕೊಳ್ಳುವಂತೆ ಸೂಚಿಸುತ್ತಾರೆ. ಪ್ರತಿಯೊಂದು

ವಿಷಯದಲ್ಲೂ ವಿದ್ಯಾರ್ಥಿ ಕಡೆಪಕ್ಷ ಸಿ ಗ್ರೇಡ್ ಅಂಕೆಗಳನ್ನು (ಶೇಕಡಾ 75ಕ್ಕಿಂತ ಅಧಿಕ ಅಂಕಗಳು) ತೆಗೆದುಕೊಂಡು ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಎಲ್ಲಾ ವಿಷಯಗಳು ಸೇರಿ ಒಟ್ಟಿನಲ್ಲಿ ಶೇಕಡಾ 85ಕ್ಕಿಂತ ಅಧಿಕ ಅಂಕಗಳನ್ನು ಪಡೆದು ('ಬಿ'ಗ್ರೇಡ್) ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು. ಇವಲ್ಲದೆ ಪಿ. ಎಚ್‌ಡಿ. ಪದವಿಗಾಗಿ ಓದುವ ವಿದ್ಯಾರ್ಥಿ ಎರಡು ಯೂರೋಪಿಯನ್ ಭಾಷೆಗಳನ್ನು ತೆಗೆದುಕೊಂಡು ಓದಿ ಅವುಗಳಲ್ಲಿಯೂ ತೇರ್ಗಡೆಯಾಗಬೇಕು. (ಸಾಮಾನ್ಯವಾಗಿ ಜರ್ಮನ್, ಫ್ರೆಂಚ್, ಸ್ಪ್ಯಾನಿಷ್, ರಷ್ಯನ್, ಇಟಾಲಿಯನ್ ಮತ್ತು ಲ್ಯಾಟಿನ್ ಭಾಷೆಗಳ ಪೈಕಿ ಯಾವುದಾದರೂ ಎರಡನ್ನು ಚುನಾಯಿಸಿಕೊಳ್ಳಬೇಕು.)

ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ವರ್ಷಕ್ಕೊಂದು ಬಾರಿ ಮಾತ್ರ ·ಪರೀಕ್ಷೆ ನಡೆಯುವುದಿಲ್ಲ. ಅಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ಎರಡು ರೀತಿಯ ವ್ಯವಸ್ಥೆಯನ್ನು ಕಾಣುತ್ತೇವೆ. (1) ಸೆಮಿಸ್ಟರ್ ಪದ್ಧತಿಯಂತೆ ಕೆಲಸ ಮಾಡುವ ವಿಶ್ವವಿದ್ಯಾನಿಲಯಗಳು ; ಇವುಗಳಲ್ಲಿ 4 ತಿಂಗಳಿಗೊಂದು ಸಲ ಫೈನಲ್ ಪರೀಕ್ಷೆಗಳು ನಡೆಯುತ್ತವೆ. ಅಂದರೆ ಇಂಡಿಯಾದಲ್ಲಿ ಒಂದು ವರ್ಷದ ಅವಧಿಯಲ್ಲಿ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಎಷ್ಟು ಓದುತ್ತೇವೋ ಅಷ್ಟನ್ನು 4 ತಿಂಗಳ ಅವಧಿಯೊಳಗಾಗಿ ಈ ವಿಶ್ವವಿದ್ಯಾನಿಲಯಗಳಲ್ಲಿ ಓದಿ ಪೂರೈಸಬೇಕು. 4 ತಿಂಗಳಾದ ಕೂಡಲೇ ನಾವು ಓದಿದ ವಿಷಯದಲ್ಲಿ ಪರೀಕ್ಷೆಗೆ ಕುಳಿತು ತೇರ್ಗಡೆಯಾಗಬೇಕು. (ಈಗ ಈ ಪದ್ಧತಿಯನ್ನು ನಮ್ಮ ಇಂಜನಿಯರಿಂಗ್ ಕಾಲೇಜುಗಳಲ್ಲಿ ಜಾರಿಗೆ ತರಲಾಗಿದೆ) (2) ಕ್ವಾರ್ಟರ್ ಪದ್ಧತಿಯಂತೆ ಕೆಲಸ ಮಾಡುವ

ವಿಶ್ವವಿದ್ಯಾನಿಲಯಗಳು ; ಇವುಗಳಲ್ಲಿ 3 ತಿಂಗಳಿಗೊಂದು ಸಲ ಫೈನಲ್ ಪರೀಕ್ಷೆಗಳು ನಡೆಯುತ್ತವೆ. 3 ತಿಂಗಳ ಕೊನೆ ಭಾಗದಲ್ಲಿ ನಾವು ಓದಿದ ವಿಷಯದಲ್ಲಿ ಪರೀಕ್ಷೆಗೆ ಕುಳಿತು ತೇರ್ಗಡೆಯಾಗಬೇಕು.

ಮೇಲ್ಕಂಡಂತಹ ಪದ್ಧತಿಗಳು ಇರುವುದರಿಂದಲೇ ವಿದ್ಯಾರ್ಥಿ ಸದಾ ಕಾಲದಲ್ಲಿಯೂ ತನ್ನ ವಿದ್ಯಾಭ್ಯಾಸದ ವಿಷಯದಲ್ಲಿ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಪ್ರತಿ ಕ್ವಾರ್ಟರ್‌ಗೆ ಅಥವಾ ಸೆಮಿಸ್ಟರ್‌ಗೆ 3 ಅಥವಾ 4 ವಿಷಯಗಳನ್ನು (ಆಯಾ ಇಲಾಖೆಯವರು ನಿರ್ಧರಿಸಿದಂತೆ) ತೆಗೆದುಕೊಂಡು ವಿದ್ಯಾರ್ಥಿ ಓದಲೇಬೇಕು. ಆದುದರಿಂದ ನಾವು ಹೋದ 3 ಅಥವಾ 4 ತಿಂಗಳಿನೊಳಗಾಗಿ ನಮ್ಮ ಅರ್ಹತೆ ಅಳೆಯಲು ಅಮೆರಿಕನ್ ಪ್ರೊಫೆಸರ್‌ಗಳಿಗೆ ಅವಕಾಶ ದೊರೆಯುತ್ತದೆ. ಮೊದಲನೆ ಕ್ವಾರ್ಟರ್ ಅಥವಾ ಸೆಮಿಸ್ಟರ್ ಪರೀಕ್ಷೆ ಆದ ಮೇಲೆ ನಾವು ತೆಗೆದುಕೊಂಡ ಅಂಕಗಳನ್ನು ನೋಡುತ್ತಾರೆ. 'ಬಿ' ಗ್ರೇಡ್ ಅಂಕಗಳನ್ನು ತೆಗೆದುಕೊಂಡಿದ್ದರೆ ಸುಮ್ಮನಾಗುತ್ತಾರೆ. 'ಸಿ' ಗ್ರೇಡ್ ಅಂಕಗಳನ್ನು ತೆಗೆದುಕೊಂಡಿದ್ದರೆ, ಇಲಾಖೆಯ ಮುಖ್ಯಸ್ಥರು ನಮ್ಮನ್ನು ಕರೆಯಿಸಿ ಎಚ್ಚರಿಸುತ್ತಾರೆ. ಬರುವ ಕ್ವಾರ್ಟರ್ ಅಥವಾ ಸೆಮಿಸ್ಟರ್ ಪರೀಕ್ಷೆಗಳಲ್ಲಿ 'ಬಿ' ಗ್ರೇಡ್ ಅಂಕಗಳನ್ನು ಪಡೆಯದೆ ಹೋದರೆ ಮುಂದಿನ ವರ್ಷದ ವಿದ್ಯಾರ್ಥಿವೇತನ ನಿಲ್ಲಿಸಲ್ಪಡುತ್ತದೆ ಅನ್ನುತ್ತಾರೆ. 3 ಕ್ವಾರ್ಟರ್ ಅಥವಾ 2 ಸೆಮಿಸ್ಟರ್ ಅವಧಿ ಆದಮೇಲೆ, ಅಲ್ಲಿಯವರೆಗೆ ನಾವು ತೆಗೆದುಕೊಂಡಿರುವ ವಿಷಯಗಳು ಮತ್ತು ಅವುಗಳ ಪರೀಕ್ಷೆಯಲ್ಲಿ ನಾವು ಪಡೆದ ಅಂಕಗಳನ್ನು ಪರಿಶೀಲಿಸುತ್ತಾರೆ. ಅವರ ನಿರೀಕ್ಷಣೆಗೆ ತಕ್ಕ ಹಾಗೆ ನಾವು 'ಬಿ' ಗ್ರೇಡ್ ಅಂಕಗಳನ್ನು ಪಡೆದಿದ್ದರೆ ವಿದ್ಯಾರ್ಥಿವೇತನವನ್ನು

ಮುಂದುವರಿಸುತ್ತಾರೆ ಮತ್ತು ಮುಂದಕ್ಕೆ ಓದಲು ಅವಕಾಶ ಕೊಡುತ್ತಾರೆ. ಹಾಗಿಲ್ಲದೆ ಪರೀಕ್ಷೆಯಲ್ಲಿ ನಾವು ಅಧಿಕ 'ಸಿ' ಗ್ರೇಡ್‌ಗಳನ್ನು ಪಡೆದರೆ ವಿದ್ಯಾರ್ಥಿವೇತನ ನಿಲ್ಲಿಸುತ್ತಾರೆ. ಮುಂದಕ್ಕೆ ಓದಲು ಮಾತ್ರ ಅವಕಾಶ ಕೊಡುತ್ತಾರೆ. 'ಸಿ' ಗ್ರೇಡ್‌ಗಿಂತ ಕಡಮೆ ಅಂಕಗಳನ್ನು ಪಡೆದರೆ ವಿಶ್ವವಿದ್ಯಾನಿಲಯ ಬಿಟ್ಟುಹೋಗು ಅನ್ನುತ್ತಾರೆ. ಅಲ್ಲಿಗೆ ವಿದ್ಯಾರ್ಥಿಯ ಓದುವಿಕೆ ಕೊನೆಗೊಂಡಂತೆ. ಬೇರೆ ಮಾರ್ಗವಿಲ್ಲದೆ ಇಂಡಿಯಾಕ್ಕೆ ವಾಪಸ್ಸು ಬರಬೇಕಾಗುತ್ತದೆ. ಇದರ ಪರಿಣಾಮವಾಗಿಯೆ ಅನೇಕರು 3ರಿಂದ 9 ತಿಂಗಳ ಅವಧಿಯೊಳಗಾಗಿ ಇಂಡಿಯಾಕ್ಕೆ ವಾಪಸ್ಸಾಗುತ್ತಾರೆ.

ಅದೃಷ್ಟವಶಾತ್ ವಿದ್ಯಾರ್ಥಿ ಬುದ್ಧಿವಂತನಾಗಿದ್ದು ಶ್ರದ್ಧಾವಂತನಾಗಿದ್ದರೆ 2 ವರ್ಷಗಳೊಳಗಾಗಿ ಎಲ್ಲಾ ವಿಷಯಗಳಲ್ಲೂ ತೇರ್ಗಡೆ ಹೊಂದುತ್ತಾನೆ. ಇಲ್ಲದಿದ್ದರೆ ಕೆಲವರು ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದಕ್ಕಾಗಿಯೇ 3 ವರ್ಷಗಳನ್ನು ತೆಗೆದುಕೊಳ್ಳುತ್ತಾರೆ.

ಇದಾದಮೇಲೆ ವಿದ್ಯಾರ್ಥಿ Comprehensive (ಸಮಗ್ರ ಪರೀಕ್ಷೆ) ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುತ್ತದೆ. ಪಿಎಚ್.ಡಿ. ತರಗತಿಗಳಲ್ಲಿ ಕಳೆದ 2 ಅಥವಾ 3 ವರ್ಷಗಳಲ್ಲಿ ವಿದ್ಯಾರ್ಥಿ ಓದಿದ ಎಲ್ಲಾ ವಿಷಯಗಳನ್ನು ಒಟ್ಟುಗೂಡಿಸಿ 4 ಅಥವಾ 5 ಭಾಗಗಳನ್ನಾಗಿ ಮಾಡುತ್ತಾರೆ. ಈ 4 ಅಥವಾ 5 ಭಾಗಗಳಿಗೆ ಪ್ರತ್ಯೇಕ ಪ್ರಶ್ನಪತ್ರಿಕೆಗಳು ಇರುತ್ತವೆ. ಸಮಗ್ರಪರೀಕ್ಷೆಯಲ್ಲಿ ಈ ಪ್ರಶ್ನಪತ್ರಿಕೆಗಳಿಗೆ ಉತ್ತರ ಬರೆಯಬೇಕು. ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ವಿದ್ಯಾರ್ಥಿಗೆ ಕೇವಲ 2 ಸಲ ಮಾತ್ರ ಅವಕಾಶ ಕೊಡುತ್ತಾರೆ. (ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಕೇವಲ ಒಂದೇ ಒಂದು

ಅವಕಾಶ ಮಾತ್ರ ಕೊಡುತ್ತಾರೆ) ಈ ಪರೀಕ್ಷೆಯಲ್ಲಿ ವಿದ್ಯಾರ್ಥಿ ತೇರ್ಗಡೆಯಾದರೆ ಅನಂತರ ಆತನಿಗೆ ಮೌಖಿಕ ಪರೀಕ್ಷೆ (Oral Examination) ನಡೆಸುತ್ತಾರೆ. ಮೌಖಿಕ ಪರೀಕ್ಷೆ 3 ಘಂಟೆಗಳ ಕಾಲ ಒಂದೇ ಸಮನೆ ನಡೆಯುತ್ತದೆ. 5 ಅಥವಾ 6 ಜನ ಪ್ರೊಫೆಸರ್‌ಗಳು ಅವನು ಓದಿರುವ ಎಲ್ಲಾ ವಿಷಯಗಳ ಮೇಲೆ ಪ್ರಶ್ನೆ ಹಾಕುತ್ತಾರೆ. ಇದರಲ್ಲೂ ವಿದ್ಯಾರ್ಥಿ ತೇರ್ಗಡೆಯಾದರೆ ಅನಂತರ ಅವನಿಗೆ ಪ್ರಬಂಧ (Thesis) ಬರೆಯಲು ಅನುಮತಿ ಕೊಡುತ್ತಾರೆ.

ಶ್ರದ್ಧೆಯಿಂದ ಕೆಲಸಮಾಡುವ ವಿದ್ಯಾರ್ಥಿ ತನ್ನ ಪ್ರಬಂಧವನ್ನು ಸಾಮಾನ್ಯವಾಗಿ 1ರಿಂದ 2 ವರ್ಷಗಳ ಅವಧಿಯೊಳಗೆ ಪೂರೈಸ ಬಹುದು. ಅವನು ಬರೆದ ಪ್ರಬಂಧವನ್ನು ಅವನ ಪ್ರೊಫೆಸರ್‌ಗಳು ಒಪ್ಪಿಕೊಂಡರೆ ಕಡೆಯಲ್ಲಿ ಅವನಿಗೆ ಪಿಎಚ್.ಡಿ. ಪದವಿ ಬರುತ್ತದೆ. ಹೀಗೆ ಸಾಕಷ್ಟು ಅರ್ಹತೆ ಇರುವ ಮತ್ತು ಶ್ರದ್ಧೆಯಿಂದ ಕೆಲಸ ಮಾಡುವ ವಿದ್ಯಾರ್ಥಿ (ಸಮಾಜಶಾಸ್ತ್ರಗಳಲ್ಲಿ) 4 ವರ್ಷಗಳಲ್ಲಿ ಪಿಎಚ್.ಡಿ. ಪದವಿ ಪಡೆಯಬಹುದು. (ಭೌತಶಾಸ್ತ್ರಗಳಲ್ಲಿ ಕಡೆಯ ಪಕ್ಷ 5ರಿಂದ 6 ವರ್ಷಗಳು ಬೇಕಾಗುತ್ತವೆ.)

ಹಾಗಿಲ್ಲದೆ ವಿದ್ಯಾರ್ಥಿ Comprehensive ಪರೀಕ್ಷೆಯಲ್ಲಿ ಎರಡು ಸಲವೂ ಅನುತ್ತೀರ್ಣನಾದರೆ ಅವನನ್ನು ವಿಶ್ವವಿದ್ಯಾನಿಲಯ ಬಿಟ್ಟು ಹೋಗು ಅನ್ನುತ್ತಾರೆ. ಅವನಿಗೆ ಯಾವ ವಿಧವಾದ ಪದವಿಯೂ ಬರುವುದಿಲ್ಲ. ಆದರೆ ಕೆಲವು ವಿಶ್ವವಿದ್ಯಾನಿಲಯಗಳಲ್ಲಿರುವ ಕೆಲವು ಉದಾರ ಮನೋಭಾವವುಳ್ಳ ಪ್ರೊಫೆಸರ್‌ಗಳು, Comprehensive–(ಸಮಗ್ರಪರೀಕ್ಷೆ) ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿ ವಿಷಯದಲ್ಲಿ, ಕರುಣೆ ತೋರಿಸುತ್ತಾರೆ. ಆ ವಿದ್ಯಾರ್ಥಿ

ಕಳೆದ 2 ಅಥವಾ 3 ವರ್ಷಗಳಲ್ಲಿ ಆ ಇಲಾಖೆಯಲ್ಲಿದ್ದುಕೊಂಡು ಓದಿದ ಎಲ್ಲಾ ವಿಷಯಗಳನ್ನು (Subjects) ಪರಿಶೀಲಿಸುತ್ತಾರೆ. ಅವುಗಳಲ್ಲಿ ಅವನು ಸರಾಸರಿ 'ಬಿ' ಗ್ರೇಡ್ ತೆಗೆದುಕೊಂಡಿದ್ದರೆ ಅವನಿಗೆ Consolation M.A. ಅಥವಾ M.S. ಪದವಿ ಕೊಡು ವಂತೆ ಶಿಫಾರಸ್ಸು ಮಾಡುತ್ತಾರೆ. ಆಗ ಇಲಾಖೆಯಲ್ಲಿರುವ ಎಲ್ಲಾ ಪ್ರೊಫೆಸರುಗಳು ಒಪ್ಪಿಕೊಂಡರೆ ಆಗ ವಿದ್ಯಾರ್ಥಿಗೆ ಮಾಸ್ಟರ್ ಪದವಿ ಬರುತ್ತದೆ.

ಮೇಲ್ಕಂಡ ರೀತಿಯ ಪರೀಕ್ಷೆಯ ಕ್ರಮ ಇರುವುದರಿಂದಲೇ ಅನೇಕ ಇಂಡಿಯಾದ ವಿದ್ಯಾರ್ಥಿಗಳು ಅಮೆರಿಕಾ ವಿಶ್ವವಿದ್ಯಾ ನಿಲಯಗಳಲ್ಲಿ ಪಿಎಚ್.ಡಿ. ಪದವಿ ಪಡೆಯದೆ ವಾಪಸ್ಸು ಬರು ತ್ತಾರೆ. ಇಂಡಿಯಾ ಮತ್ತು ಬ್ರಿಟಿಷ್ ವಿಶ್ವವಿದ್ಯಾನಿಲಯಗಳಲ್ಲಿ ಪಿಎಚ್.ಡಿ. ಪದವಿ ಪಡೆದಿರುವವರೂ ಕೂಡ, ಅನೇಕ ಸಂದರ್ಭಗಳಲ್ಲಿ ಅಮೆರಿಕಾ ವಿಶ್ವವಿದ್ಯಾನಿಲಯಗಳಲ್ಲಿರುವ ಪರೀಕ್ಷಾ ಪದ್ಧತಿಯಿಂದ, ಅಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ಪಿಎಚ್.ಡಿ. ಪದವಿ ಪಡೆಯಲಾಗದೆ ವಾಪಸ್ಸು ಬರುತ್ತಾರೆ. ಆದುದರಿಂದಲೇ ನಮ್ಮ ದೇಶದ ಅನೇಕ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು (ತಮ್ಮ ಸ್ವಂತ ಹಣವನ್ನು ಖರ್ಚು ಮಾಡ ಬಲ್ಲ ಶಕ್ತಿ ಉಳ್ಳವರು) ಪಿಎಚ್.ಡಿ. ಪದವಿ ಪಡೆಯಲು ಬ್ರಿಟಿಷ್ ವಿಶ್ವವಿದ್ಯಾನಿಲಯಗಳಿಗೆ ಹೋಗುತ್ತಾರೆ. ಏಕೆಂದರೆ ಬ್ರಿಟಿಷ್ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮಲ್ಲಿರುವ ಹಾಗೆ ನೇರವಾಗಿ ಪ್ರಬಂಧ ಬರೆದು ಪದವಿ ಪಡೆಯಬಹುದು. ಅಲ್ಲಿ ಪರೀಕ್ಷೆಗಳ ಸಮಸ್ಯೆ ಇರು ವುದಿಲ್ಲ. (ಆದರೆ ಈಗ ಒಂದೆರಡು ಬ್ರಿಟಿಷ್ ವಿಶ್ವವಿದ್ಯಾನಿಲಯ

ಗಳಲ್ಲಿ ಅಮೆರಿಕನ್ ಮಾದರಿಯ ಪಿಎಚ್.ಡಿ. ತರಗತಿಗಳನ್ನು ಆರಂಭಿಸಿದ್ದಾರೆ. ಉದಾ-ಎಸೆಕ್ಸ್ ವಿಶ್ವವಿದ್ಯಾನಿಲಯ).

ಅಮೆರಿಕನ್ ವಿಶ್ವವಿದ್ಯಾನಿಲಯುಗಳಲ್ಲಿ ಕ್ವಾರ್ಟರ್ ಅಥವಾ ಸೆಮಿಸ್ಟರ್ ಪರೀಕ್ಷೆಗಳಾದ ಒಂದು ವಾರದೊಳಗಾಗಿ ವಿದ್ಯಾರ್ಥಿ ಗಳಿಗೆ ಅಂಕಗಳ ಪಟ್ಟಿಗಳನ್ನು (ಅಲ್ಲಿ ಟ್ರಾನ್ಸ್ಕ್ರಿಪ್ಟ್ ಎಂದು ಕರೆಯುತ್ತಾರೆ.) ಕೊಡುತ್ತಾರೆ. ಅವನ್ನು ನೋಡಿ ವಿದ್ಯಾರ್ಥಿ ಯಾವ ತರಗತಿಯ ಪಾಠಗಳನ್ನು ಓದಿದ್ದಾನೆ ಎಂದು ಯಾರು ಬೇಕಾದರೂ ಹೇಳಬಹುದು. ಅಲ್ಲಿ ಗಣಕ ಯಂತ್ರಗಳು ಬಹು ವಾಗಿ ಉಪಯೋಗಿಸಲ್ಪಡುವುದರಿಂದ ಮತ್ತು ವಿದ್ಯಾರ್ಥಿಗಳ ಅಂಕ ಪಟ್ಟಿ ತಯಾರಿಸುವಾಗಲೂ ಗಣಕ ಯಂತ್ರಗಳನ್ನು ಬಳಸುವುದ ರಿಂದ, ಅಂಕಪಟ್ಟಿಗಳಲ್ಲಿ ನಾವು ತೆಗೆದುಕೊಂಡಿದ್ದ ವಿಷಯಗಳ ಪೂರ್ತಾ ಹೆಸರು ಬರೆಯುವುದರ ಬದಲು ಅದರ ಸಂಕೇತ ಅಂಕಿ ಗಳನ್ನು (Code Numbers—) ಮಾತ್ರ ಬರೆದಿರುತ್ತಾರೆ. ಅಮೆರಿಕನ್ ವಿಶ್ವವಿದ್ಯಾನಿಲಯುಗಳಲ್ಲಿ ಈ ಕೆಳಗೆ ಕಂಡಂತೆ ಸಂಕೇತ ಅಂಕಿಗಳನ್ನು ಕೊಟ್ಟು ಪ್ರತಿ ತರಗತಿಗೂ ಸೇರಿದ ಬೋಧನ ಕ್ರಮ ಗಳನ್ನು ವಿಂಗಡಿಸುತ್ತಾರೆ.

(1) ಮೊದಲನೆ ವರ್ಷ, ವಿದ್ಯಾರ್ಥಿ ವಿಶ್ವವಿದ್ಯಾನಿಲಯದಲ್ಲಿ ಓದುವಾಗ ತೆಗೆದುಕೊಳ್ಳುವ ವಿಷಯಗಳು.	ಇವುಗಳು ಬಿ.ಎ. ಅಥವಾ ಬಿ.ಎಸ್‌ಸಿ. ಅಥವಾ ಬಿ ಕಾಂ. ಗುಂಪಿಗೆ ಸೇರಿರಲ ಅವಕ್ಕೆ 100-199 ಸಂಕೇತ ಅಂಕಿಗಳನ್ನು ಕೊಟ್ಟಿರುತ್ತಾರೆ
(2) 2ನೆ ವರ್ಷದ ಬೋಧನ	200–299

ವಿಷಯಗಳಿಗೆ (Subjects)

3) 3ನೆ ವರ್ಷದ ಬೋಧನ 300–399
ವಿಷಯಗಳಿಗೆ

4) ಮಾಸ್ಟರ್ ತರಗತಿಗಳ 400–499
ಬೋಧನ ವಿಷಯಗಳಿಗೆ

5) ಮಾಸ್ಟರ್ ಮತ್ತು ಪಿಎಚ್. ಡಿ. 500–600
ತರಗತಿಗಳ ಬೋಧನ ವಿಷಯಗಳಿಗೆ

400ಕ್ಕಿಂತ ಕಡಮೆ ಸಂಕೇತ ಅಂಕಿಗಳನ್ನು ಪಡೆದಿರುವ ಬೋಧನ ವಿಷಯಗಳೆಲ್ಲಾ ಪದವಿಪೂರ್ವ ತರಗತಿಗಳಿಗೆ (Under graduate Courses) ಸಂಬಂಧಿಸಿದವು. 400–600ರ ವರೆಗೆ ಸಂಕೇತ ಅಂಕಿಗಳನ್ನು ಪಡೆದಿರುವ ಬೋಧನ ವಿಷಯಗಳೆಲ್ಲಾ ಪದವೀಧರ ತರಗತಿಗಳಿಗೆ ಸಂಬಂಧಿಸಿದವು. (ಮಾಸ್ಟರ್ ಮತ್ತು ಪಿಎಚ್ ಡಿ. ತರಗತಿಯ ವಿದ್ಯಾರ್ಥಿಗಳು ಮಾತ್ರ ತೆಗೆದುಕೊಳ್ಳಬಹುದಾದಂತಹ ವಿಷಯಗಳು) ಹೀಗೆ ಬಹಳ ವಿಶ್ವವಿದ್ಯಾನಿಲಯಗಳಲ್ಲಿ 100–600ರ ವರೆಗೆ ಸಂಕೇತ ಅಂಕಿಗಳನ್ನು ಕೊಟ್ಟಿರುವ ಪದ್ಧತಿ ಕಂಡುಬರುತ್ತದೆ. (ಆದರೆ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರ 100ರಿಂದ ಪ್ರಾರಂಭಿಸುವುದರ ಬದಲು 1ರಿಂದ ಪ್ರಾರಂಭಿಸಿ 100ರ ವರೆಗೆ ಸಂಕೇತ ಅಂಕಿಗಳನ್ನು ಕೊಟ್ಟು ವಿವಿಧ ಬೋಧನ ವಿಷಯಗಳನ್ನು ವಿಭಾಗಿಸುತ್ತಾರೆ.)

ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮಲ್ಲಿರುವ ಹಾಗೆ ಮೊದಲನೆ ದರ್ಜೆ, ಎರಡನೆ ಮತ್ತು ಮೂರನೆ ದರ್ಜೆ ಎಂದು ಪರೀಕ್ಷಾ ಫಲಿತಾಂಶ ಪ್ರಕಟಿಸುವುದಿಲ್ಲ. ಆದರ ಬದಲು ಅವರು

A, B, C, D ಮತ್ತು E ಗ್ರೇಡ್‌ಗಳೆಂದು ಪ್ರಕಟಿಸುತ್ತಾರೆ. ಅವರು ಕೊಡುವ ಗ್ರೇಡ್‌ಗಳ ವಿವರ ಹೀಗಿದೆ.

A 92ರಿಂದ 100ರ ವರೆಗೆ ಅಂಕಗಳನ್ನು ಪಡೆದಿರುವ ವಿದ್ಯಾರ್ಥಿ (ಅತ್ಯುತ್ತಮ ವಿದ್ಯಾರ್ಥಿ).

B 85ರಿಂದ 91ರ ವರೆಗೆ ಅಂಕಗಳನ್ನು ಪಡೆದಿರುವವನು (ಒಳ್ಳೆಯವಿದ್ಯಾರ್ಥಿ).

C 75ರಿಂದ 85ರ ವರೆಗೆ ಅಂಕಗಳನ್ನು ಪಡೆದಿರುವವನು (ಸಾಮಾನ್ಯ ವಿದ್ಯಾರ್ಥಿ).

D 70ರಿಂದ 75ರ ವರೆಗೆ ಅಂಕಗಳನ್ನು ಪಡೆದಿರುವವನು (ಕೇವಲ ಪಾಸು ಮಾಡಿರುವ ವಿದ್ಯಾರ್ಥಿ).
(ಕೆನಡಾ ವಿಶ್ವವಿದ್ಯಾನಿಲಯಗಳಲ್ಲಿ 60ರಿಂದ 75 ರ ವರೆಗೆ ಅಂಕಗಳನ್ನು ಪಡೆದಿರುವವರನ್ನು 'ಡಿ' ಗ್ರೇಡ್‌ಗೆ ಸೇರಿಸುತ್ತಾರೆ)

E ಫೇಲಾದ ವಿದ್ಯಾರ್ಥಿ.

AU ವಿದ್ಯಾರ್ಥಿ ತರಗತಿಗಳಿಗೆ ಮಾತ್ರ ಬರುತ್ತಿದ್ದನು. ಆದರೆ ಪರೀಕ್ಷೆಗಳಿಗೆ ಬರುತ್ತಿರಲಿಲ್ಲ.
(ಇವರನ್ನು ಆಡಿಟ್ ಮಾಡಿದ ವಿದ್ಯಾರ್ಥಿಗಳೆಂದು ಆ ದೇಶದಲ್ಲಿ ಕರೆಯುತ್ತಾರೆ).

ಮಾಸ್ಟರ್ ತರಗತಿಯ ಅಥವಾ ಪಿಎಚ್.ಡಿ. ತರಗತಿಯ ಒಂದು ವಿಷಯದಲ್ಲಿ ವಿದ್ಯಾರ್ಥಿ ತೇರ್ಗಡೆಯಾಗಬೇಕಾದರೆ "ಸಿ" ಗ್ರೇಡ್ ಅನ್ನು ಪಡೆಯಲೇಬೇಕು. ಆದರೆ ಅವನು ಮಾಸ್ಟರ್ ಅಥವಾ ಪಿಎಚ್.ಡಿ. ತರಗತಿ ಪರೀಕ್ಷೆಗಳಲ್ಲಿ ಒಟ್ಟನಲ್ಲಿ ತೇರ್ಗಡೆ

ಯಾಗಬೇಕಾದರೆ ಸರಾಸರಿ 'ಬಿ' ಗ್ರೇಡ್ ಪಡೆಯಲೇಬೇಕು. ಪರೀಕ್ಷೆಗಳಲ್ಲಿ 'ಬಿ' ಗ್ರೇಡ್‌ನಲ್ಲಿ ತೇರ್ಗಡೆಯಾದ ಹೊರತು ಪದವೀಧರ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರಬಂಧ (Thesis) ಬರೆಯಲು ಅವಕಾಶ ಕೊಡುವುದಿಲ್ಲ. ಆದುದರಿಂದ ಅಮೇರಿಕನ್ ಸ್ನಾತಕೋತ್ತರ (ಪದವೀಧರ) ವಿದ್ಯಾಭ್ಯಾಸ ಪದ್ಧತಿಯಲ್ಲಿ ಪರೀಕ್ಷೆಗಳಿಗೆ ಬಹಳ ಪ್ರಾಮುಖ್ಯತೆ ಇದೆ.

ಅನೇಕ ಅಮೇರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಮಾಸ್ಟರ್ ಪದವಿ ಪಡೆಯಬೇಕಾದರೂ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಮೇಲೆ ಒಂದು ಸಣ್ಣ ಪ್ರಬಂಧ ಬರೆಯಲೇಬೇಕು. ಆದರೆ ಅನೇಕ ಕೆನಡಾ ವಿಶ್ವವಿದ್ಯಾನಿಲಯಗಳಲ್ಲಿ ಮಾಸ್ಟರ್ ಪದವಿ ಪಡೆಯಲು ಸಣ್ಣ ಪ್ರಬಂಧ ಬರೆಯಬೇಕಾಗಿಲ್ಲ. ಶ್ರದ್ಧೆಯಿಂದ ಕೆಲಸ ಮಾಡುವ ವಿದ್ಯಾರ್ಥಿ ಸಾಮಾನ್ಯವಾಗಿ 2 ವರ್ಷಗಳಲ್ಲಿ ಮಾಸ್ಟರ್ ಪದವಿಯನ್ನೂ 3ರಿಂದ 4 ವರ್ಷಗಳಲ್ಲಿ ಪಿ. ಎಚ್‌ಡಿ. ಪದವಿಯನ್ನೂ ಪಡೆಯಬಹುದು.

ಈ ಮೇಲ್ಕಂಡ ವಿವರಗಳನ್ನೆಲ್ಲಾ ಓದಿದ ಮೇಲೆ ವಾಚಕರುಗಳು ಏಕೆ ನಾನು ಇಷ್ಟೊಂದು ಬರೆದೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ ಎಂದು ಭಾವಿಸುತ್ತೇನೆ. ನನ್ನ ಸ್ನೇಹಿತರುಗಳು ಇನ್ನು ಮುಂದೆ ಅಮೇರಿಕನ್ ವಿಶ್ವವಿದ್ಯಾನಿಲಯಗಳಿಗೆ ಸಾಕಷ್ಟು ತಿಳುವಳಿಕೆ ಇಲ್ಲದೆ ಹೋಗಿ ಅವಮಾನ ಪಡಬಾರದೆಂಬುದೇ ನನ್ನ ಮುಖ್ಯ ಉದ್ದೇಶವಾಗಿದೆ. ವಾಚಕರಿಗೆ ಈಗ ಸಹಜವಾಗಿ ಕೆಲವು ಸಮಸ್ಯೆಗಳು ಕಂಡುಬರಬಹುದು—

1) ಇಂಡಿಯಾದಿಂದ ಹೋಗುವ ಅನೇಕ ವಿದ್ಯಾರ್ಥಿಗಳು

ತಮ್ಮ ಎಂ.ಎ; ಎಂ.ಎಸ್‌ಸಿ; ಅಥವಾ ಎಂ.ಕಾಂ. ಪರೀಕ್ಷೆ ಗಳಲ್ಲಿ ಮೊದಲನೆ ದರ್ಜೆಯಲ್ಲಿ ಪಾಸು ಮಾಡಿದ್ದರೂ ಅಥವಾ ರ್‍ಯಾಂಕುಗಳನ್ನು ಪಡೆದಿದ್ದರೂ ಏತಕ್ಕೆ ಅಮೆರಿ ಕನ್ ಪ್ರೊಫೆಸರುಗಳ ಮೆಚ್ಚಿಗೆಗೆ ಪಾತ್ರರಾಗುವುದಿಲ್ಲ?

2) ಇಂಡಿಯಾದ ವಿದ್ಯಾರ್ಥಿಗಳು ಇಲ್ಲಿ ಮಾಸ್ಟರ್ ಡಿಗ್ರಿ ಪಡೆದಿದ್ದರೂ ಅಲ್ಲಿಗೆ ಹೋದಮೇಲೆ ಏಕೆ ಪದವಿಪೂರ್ವ ತರಗತಿಗಳ ಪಾಠಗಳನ್ನು ಓದಿ ಎಂದು ಅವರಿಗೆ ಹೇಳು ತ್ತಾರೆ?

3) ಏಕೆ ಅನೇಕ ಇಂಡಿಯಾದ ವಿದ್ಯಾರ್ಥಿಗಳು ಹೋದ ಕೂಡಲೇ ಮೊದಲನೆ ವರ್ಷವೆ ಅಮೆರಿಕನ್ ವಿಶ್ವ ವಿದ್ಯಾನಿಲಯಗಳ ಪರೀಕ್ಷೆಗಳಲ್ಲಿ ಫೇಲಾಗುತ್ತಾರೆ?

ಈ ಮೇಲ್ಕಂಡ ಸಮಸ್ಯೆಗಳಿಗೆ ಉತ್ತರ ಹೇಳಲು ನಾನು ಅರ್ಥ ಶಾಸ್ತ್ರದ ಪಾಠಗಳ ಕಾರ್ಯಕ್ರಮಗಳನ್ನು ಉದಾಹರಣೆಯನ್ನಾಗಿ ತೆಗೆದುಕೊಂಡು ಎಲ್ಲವನ್ನೂ ವಿವರವಾಗಿ ತಿಳಿಸುತ್ತೇನೆ. ನಾನು ಅರ್ಥ ಶಾಸ್ತ್ರದ ವಿದ್ಯಾರ್ಥಿ ಆದುದರಿಂದ ಅದನ್ನೇ ಚುನಾಯಿಸಿಕೊಂಡಿ ದ್ದೇನೆ. ಇಂಡಿಯಾದಿಂದ ಅರ್ಥಶಾಸ್ತ್ರದಲ್ಲಿ ಪದವಿ ಪಡೆದು ಹೋಗಿ ರುವ ವಿದ್ಯಾರ್ಥಿಗೆ ಕಂಡುಬರುವ ಸಮಸ್ಯೆಗಳೇ ಇತರ ಎಲ್ಲಾ ಸಮಾಜಶಾಸ್ತ್ರಗಳಲ್ಲಿ ಪದವಿ ಪಡೆದಿರುವ ವಿದ್ಯಾರ್ಥಿಗಳಿಗೂ ಕಂಡು ಬರುತ್ತದೆ ಎಂದು ನನಗೆ ಅನೇಕ ವಿದ್ಯಾರ್ಥಿ ಸ್ನೇಹಿತರುಗಳಿಂದ ಅಮೆರಿಕಾದಲ್ಲಿರುವಾಗ ತಿಳಿದುಬಂದಿತು. ಆದುದರಿಂದ ಮುಂದಿನ ಪುಟಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ, ತರಗತಿಗಳಲ್ಲಿ ಅನುಭವಿಸುವ ಕಷ್ಟಗಳನ್ನು ವಿವರಿಸುತ್ತೇನೆ..

ಇಂಡಿಯಾದಿಂದ ಅಮೆರಿಕಾ ವಿಶ್ವವಿದ್ಯಾನಿಲಯಗಳಿಗೆ ಹೋಗುವ
ನೇಕರು ಪ್ರಮುಖ ಅರ್ಥಶಾಸ್ತ್ರದ ನಿಯತಕಾಲಿಕೆಗಳಲ್ಲಿ
Journals) ಬರುವ ಲೇಖನಗಳನ್ನು ಓದಿರುವುದಿಲ್ಲ. ಅಮೆರಿಕಾದ
ುತ್ತ ಪಾಶ್ಚಿಮಾತ್ಯ ದೇಶಗಳ ಅನೇಕ ಸುಪ್ರಸಿದ್ಧ ವಿದ್ವಾಂಸರು
ಳು ತಮ್ಮ ಲೇಖನಗಳನ್ನು ಈ ಕೆಳಗೆಕಂಡ ನಿಯತಕಾಲಿಕೆಗಳಲ್ಲಿ
ಪ್ರಕಟಿಸುತ್ತಾರೆ. :

1) ಅಮೆರಿಕನ್ ಎಕನಾಮಿಕ್ ರಿವ್ಯೂ.
2) ಕೆನೆಡಿಯನ್ಸ್ ಜನರಲ್ ಆಫ್ ಪೊಲಿಟಿಕಲ್. ಸೈನ್ಸ್ ಅಂಡ್ ಎಕನಾಮಿಕ್ಸ್.
3) ಹಾರ್ವರ್ಡ್ ರಿವ್ಯೂ.
4) ಕ್ವಾರ್ಟರ್‌ಲಿ ಜನರಲ್ ಆಫ್ ಎಕನಾಮಿಕ್ಸ್.
5) ದಿ ಜನರಲ್ ಆಫ್ ಎಕನಾಮಿಕ್ ಇಷ್ಯೂಸ್.
6) ದಿ ಎಕನಾಮಿಕ್ ಜನರಲ್; ಇತ್ಯಾದಿ.

ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ತಾವು ಲೇಖನ ಬರೆದಿರುವಂತೆಯೇ,
ಪದವೀಧರ ತರಗತಿಗಳಲ್ಲೂ ಕೂಡ ಅಮೆರಿಕನ್ ಪ್ರೊಫೆಸರುಗಳು
ಪಾಠ ಮಾಡುತ್ತಾರೆ. ಆದುದರಿಂದ ಇಂಡಿಯಾದ ವಿದ್ಯಾರ್ಥಿಗೆ
ಈ ಲೇಖನಗಳಲ್ಲಿ ಬರೆದಿರುವ ವಿಷಯ ತಿಳಿದಿದ್ದ ಹೊರತು ಅಲ್ಲಿಯ
ಪಾಠಗಳನ್ನು ತಿಳಿದುಕೊಳ್ಳಲಾಗುವುದಿಲ್ಲ. ಆದುದರಿಂದ ವಿದ್ಯಾರ್ಥಿ
ಹೋದಕೂಡಲೇ, ಅಮೆರಿಕನ್ ಪ್ರೊಫೆಸರುಗಳು ಅವನನ್ನು
ಪರೀಕ್ಷಿಸಿದಾಗ ವಿದ್ಯಾರ್ಥಿ ತನ್ನ ಅಜ್ಞಾನವನ್ನು ತೋರ್ಪಡಿಸಿಕೊಳ್ಳು
ತ್ತಾನೆ. ಇದರಿಂದ ಅವನಿಗೆ ತೊಂದರೆ ಪ್ರಾರಂಭವಾಗುತ್ತದೆ.
ಅವನನ್ನು ಪದವೀಪೂರ್ವ ತರಗತಿಗಳ ಪಾಠ ಓದು ಎನ್ನುತ್ತಾರೆ.

ಇದೇ ರೀತಿ ರಾಜಕೀಯಶಾಸ್ತ್ರ, ಮನಃಶಾಸ್ತ್ರ, ಭೂಗೋಳ ಇತ್ಯಾದಿ ವರ್ಗಗಳಲ್ಲಿ ಎಂ.ಎ. ಪದವಿ ಪಡೆದಿರುವವರೂ ಕೂಡ ತೊಂದರೆ ಅನುಭವಿಸುತ್ತಾರೆ.

ಸಮಾಜಶಾಸ್ತ್ರಗಳಲ್ಲಿ ಪಿಎಚ್.ಡಿ. ಪದವಿ ಪಡೆಯಲು ಹೋಗುವವರಿಗೆ ಬಹು ಮುಖ್ಯ ಅನರ್ಹತೆ ಒಂದು ಇದೆ. ಇಂಡಿಯಾ ದಲ್ಲಿ ಸಮಾಜಶಾಸ್ತ್ರಗಳನ್ನು ಓದಿ ಎಂ.ಎ. ಪದವಿ ಪಡೆದಿರುವವರಿಗೆ ಗಣಿತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರಗಳ ಅರಿವು ಇರುವುದಿಲ್ಲ. ನಮ್ಮ ದೇಶದಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ಆದ ಮೇಲೆ ಆರ್ಟ್ಸ್ ವಿದ್ಯಾರ್ಥಿಗಳಿಗೆ ಬೀಜಗಣಿತ, ತ್ರಿಕೋಣಮಿತಿ, ರೇಖಾಗಣಿತ, ಕ್ಯಾಲ್‌ಕ್ಯುಲಸ್ ಮುಂತಾದ ಗಣಿತಶಾಸ್ತ್ರದ ಭಾಗಗಳನ್ನು ಹೇಳಿ ಕೊಡುವುದಿಲ್ಲ. ಆದುದರಿಂದ ಅಮೆರಿಕನ್ ವಿಶ್ವವಿದ್ಯಾನಿಲಯಗಳಿಗೆ ಹೋದಾಗ ವಿದ್ಯಾರ್ಥಿಗಳು ದಿಕ್ಕುತೋಚದವರ ಹಾಗೆ ತರಗತಿ ಗಳಲ್ಲಿ ಕುಳಿತಿರುತ್ತಾರೆ. ಅಲ್ಲಿಯ ತರಗತಿಗಳಿಗೆ ಹೋದರೆ ಮಾತ್ರೆ ದರೆ ಬೋರ್ಡಿನ ಮೇಲೆ ಗಣಿತಶಾಸ್ತ್ರದ ಸಮಸ್ಯೆಗಳನ್ನು ಹಾಕಿ ವಿವರಿಸುತ್ತಾರೆ. ಜೊತೆಗೆ ಅರ್ಥಶಾಸ್ತ್ರದ, ಮನಃಶಾಸ್ತ್ರದ, ವಾಣಿಜ್ಯಶಾಸ್ತ್ರದ ಮತ್ತು ಭೂಗೋಳದ ವಿದ್ಯಾರ್ಥಿಗಳನ್ನು ಎಲ್ಲರ ಮುಂದೆಯೂ ತರಗತಿಗಳಲ್ಲಿ ಕರೆದು ಬೋರ್ಡಿನ ಮೇಲೆ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಿ ಎಂದು ಕೇಳುತ್ತಾರೆ. ಆಗ ಇಂಡಿಯಾದ ವಿದ್ಯಾರ್ಥಿ ಅಷ್ಟೊಂದು ಸಹ ವಿದ್ಯಾರ್ಥಿಗಳ ಎದುರು ಕಣ್ಣೀರು ಹಾಕಿಕೊಂಡು, ತಲೆತಗ್ಗಿಸಿ ನಿಂತುಕೊಳ್ಳಬೇಕಾಗುತ್ತದೆ. ಇದರಿಂದ ವಿದ್ಯಾರ್ಥಿ ಅನರ್ಹನೆಂದು ಪ್ರೊಫೆಸರುಗಳು ತೀರ್ಮಾನಿಸುತ್ತಾರೆ. ಅಲ್ಲಿಗೆ ಅವನ ಭವಿಷ್ಯ

ನಿರ್ಧಾರವಾದಂತೆ ಆಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ದೆಹಲಿ, ಮುಂಬಯಿ ಮತ್ತು ಕಲ್ಕತ್ತಾ ವಿಶ್ವವಿದ್ಯಾನಿಲಯಗಳಿಂದ ಎಂ.ಎ. ಪಾಸು ಮಾಡಿಕೊಂಡು ಬಂದಿರುವ ವಿದ್ಯಾರ್ಥಿಗಳು ಸ್ವಲ್ಪಮಟ್ಟಿಗೆ ಗಣಿತಶಾಸ್ತ್ರವನ್ನು ಕಲಿತಿರುತ್ತಾರೆ. ಆದುದರಿಂದ ಅವರು ಸ್ವಲ್ಪ ಧೈರ್ಯವಾಗಿ ತರಗತಿಗಳಲ್ಲಿ ಬೋರ್ಡಿನ ಮುಂದೆ ಬರುತ್ತಾರೆ. ಕಡೆಯವರೆಗೂ ಅವರುಗಳು ಕಷ್ಟಪಟ್ಟು ನಿಭಾಯಿಸಿಕೊಂಡು ಹೋಗುತ್ತಾರೆ. ಆದರೆ ಉಳಿದ ಇಂಡಿಯಾದ ವಿಶ್ವವಿದ್ಯಾನಿಲಯ ಗಳಿಂದ ಬರುವವರು ಹೆಜ್ಜೆ ಹೆಜ್ಜೆಗೂ ಸಂಕಟಪಟ್ಟುಕೊಂಡು ಇರು ತ್ತಾರೆ. ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ, ಭೂಗೋಳ ಇವುಗಳ ಪದವೀಧರ ತರಗತಿಗಳಲ್ಲಿ ಓದುವವರು ಕಡ್ಡಾಯವಾಗಿ ಗಣಿತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರದ ಪರೀಕ್ಷೆಗಳಲ್ಲಿ ಪಾಸು ಮಾಡಲೇಬೇಕು. ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ರಾಜನೀತಿಶಾಸ್ತ್ರ ಮತ್ತು ಸಮಾಜಶಾಸ್ತ್ರ (ಸೋಷಿಯಾಲಜಿ) ಓದುವ ವಿದ್ಯಾರ್ಥಿಗಳೂ ಕೂಡ ಕಡ್ಡಾಯ ವಾಗಿ ಗಣಿತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ ಓದಲೇಬೇಕು ಮತ್ತು ಪಾಸುಮಾಡಲೇಬೇಕು. ಇನ್ನು ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರ ರಾಜನೀತಿಶಾಸ್ತ್ರ ಮತ್ತು ಸಮಾಜಶಾಸ್ತ್ರದ ವಿದ್ಯಾರ್ಥಿ ಗಳಿಗೆ ಗಣಿತಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಇಟ್ಟಿದ್ದಾರೆ. ತತ್ವಶಾಸ್ತ್ರ, ಚರಿತ್ರೆ ಮತ್ತು ವಿವಿಧ ಭಾಷೆಗಳಲ್ಲಿ ಪದವೀಧರ ವಿದ್ಯಾ ಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಮಾತ್ರ ಗಣಿತಶಾಸ್ತ್ರ ಓದುವ ತೊಂದರೆ ಇಲ್ಲ.

ವಾಣಿಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ

ಯಾವಮಟ್ಟದಗಣಿತ ಶಾಸ್ತ್ರದ ತಿಳುವಳಿಕೆ ಇರಬೇಕೆಂದು ಗೊತ್ತಿ
ರುವುದಿಲ್ಲ. ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಹೋಗಿ ಕುಳಿತ
ಕೊಂಡಾಗ ಮಾತ್ರ ನಮಗೆ ಅದರ ಅರಿವು ಉಂಟಾಗುತ್ತದೆ
ಅಲ್ಲಿಯ ವಿಶ್ವವಿದ್ಯಾನಿಲಯಗಳಿಂದ ನಮಗೆ ಕಳುಹಿಸಿಕೊಡುವ
ಸಣ್ಣ ಪುಸ್ತಕಗಳಲ್ಲಿ (brochure) ಗಣಿತಶಾಸ್ತ್ರದ ಸಾಮಾನ್ಯ
ಜ್ಞಾನವಿದ್ದರೆ ಸಾಕೆಂದು ಬರೆದಿರುತ್ತಾರೆ. ಇಂಡಿಯಾದ ಅನೇಕ
ವಿದ್ಯಾರ್ಥಿಗಳು ಸಾಮಾನ್ಯ ಜ್ಞಾನ(Elementary Knowledge
of Mathematics) ಎಂಬ ಪದದ ಬಳಕೆಯಿಂದ ಮೋಸ
ಹೋಗುತ್ತಾರೆ. ತಾವೂ ಕೂಡ ಹೈಸ್ಕೂಲಿನಲ್ಲಿ ಗಣಿತಶಾಸ್ತ್ರ
ಕಲಿತಿದ್ದೇವೆ ಎಂದು ಮನಸ್ಸಿನಲ್ಲಿ ಅಂದುಕೊಂಡು ಸಿದ್ಧವಾಗದೆ
ಅಮೆರಿಕಾಕ್ಕೆ ಹೋಗುತ್ತಾರೆ. ಆದರೆ ಅಮೆರಿಕನ್ ವಿಶ್ವವಿದ್ಯಾ
ನಿಲಯಗಳಲ್ಲಿ ಅರ್ಥಶಾಸ್ತ್ರ ಅಥವಾ ವಾಣಿಜ್ಯಶಾಸ್ತ್ರದ ಸಮಸ್ಯೆ
ಗಳನ್ನು ವಿವರಿಸುವಾಗ ಉಪಯೋಗಿಸುವ ಗಣಿತವನ್ನು ಅರ್ಥ
ಮಾಡಿಕೊಳ್ಳಬೇಕಾದರೆ, ನಮಗೆ ನಮ್ಮ ಕಾಲೇಜುಗಳಲ್ಲಿ
ಬಿ.ಎಸ್‌ಸಿ. ಮೇಜರ್ ವಿದ್ಯಾರ್ಥಿಗಳಿಗೆ ಹೇಳಿಕೊಡುವಷ್ಟು ಗಣಿತ
ಮತ್ತು ಸಂಖ್ಯಾಶಾಸ್ತ್ರದ ಜ್ಞಾನವಿರಬೇಕು. ಅದಿಲ್ಲದೆ ಇರುವುದರಿಂದ
ನಾವು ನಿರಾಶೆಯಿಂದ ಹಿಂತಿರುಗುತ್ತೇವೆ.

ಅರ್ಥಶಾಸ್ತ್ರದ ವಿದ್ಯಾರ್ಥಿ ಎಂ.ಎಸ್. ತರಗತಿಯಲ್ಲಿ ಓದಲಿ
ಅಥವಾ ಪಿಎಚ್.ಡಿ. ತರಗತಿಯಲ್ಲಿ ಓದಲಿ ಕೆಲವು ವಿಷಯಗಳನ್ನು
ಕಡ್ಡಾಯವಾಗಿ ಓದಿ ಪಾಸು ಮಾಡಬೇಕು. (ಇದೇ ರೀತಿ ಇತರ
ಶಾಸ್ತ್ರಗಳನ್ನು ಓದುವ ವಿದ್ಯಾರ್ಥಿಗಳಿಗೂ ಕಡ್ಡಾಯವಾಗಿ ಓದ
ಬೇಕಾಗಿರುವ ವಿಷಯಗಳಿರುತ್ತವೆ.)

ಸಾಮಾನ್ಯವಾಗಿ ಅರ್ಥಶಾಸ್ತ್ರದಲ್ಲಿ ಮಾಸ್ಟರ್ ತರಗತಿಯಲ್ಲಿ ಇರುವ ವಿದ್ಯಾರ್ಥಿ ಈ ಕೆಳಗೆ ಕಂಡ ವಿಷಯಗಳನ್ನು ಕಡ್ಡಾಯವಾಗಿ ಓದಬೇಕು:

1) ಮೈಕ್ರೋ ಎಕನಾಮಿಕ್ ಥಿಯರಿ.
2) ಮಾಕ್ರೋ ಎಕನಾಮಿಕ್ ಥಿಯರಿ.
3) ಪಬ್ಲಿಕ್ ಫೈನಾನ್ಸ್ ಅಥವಾ ಇಂಟರ್‌ನ್ಯಾಷನಲ್ ಎಕನಾಮಿಕ್ಸ್.
4) ಎಕನಾಮಿಕ್ ಹಿಸ್ಟರಿ (ಆರ್ಥಿಕಚರಿತ್ರೆ).
5) ಸಂಖ್ಯಾಶಾಸ್ತ್ರ (Statistics).

ಪಿಎಚ್.ಡಿ. ತರಗತಿಯಲ್ಲಿ ಓದುವ ವಿದ್ಯಾರ್ಥಿ ಕಡ್ಡಾಯವಾಗಿ ಓದಬೇಕಾದ ವಿಷಯಗಳು ಹೀಗಿರುತ್ತವೆ:

1) ಮೈಕ್ರೋ ಎಕನಾಮಿಕ್ ಥಿಯರಿ.
2) ಮಾಕ್ರೋ ಎಕನಾಮಿಕ್ ಥಿಯರಿ.
3) ಹಿಸ್ಟರಿ ಆಫ್ ಎಕನಾಮಿಕ್ ಥಾಟ್ ಅಥವಾ ಪಬ್ಲಿಕ್ ಫೈನಾನ್ಸ್ ಅಥವಾ ಇಂಟರ್‌ನ್ಯಾಷನಲ್ ಎಕನಾಮಿಕ್ಸ್.
4) ಸಂಖ್ಯಾಶಾಸ್ತ್ರ (Statistics).
5) ಎಕನಾಮಿಕ್ ಹಿಸ್ಟರಿ.
6) ಗಣಿತಶಾಸ್ತ್ರ.

ಅರ್ಥಶಾಸ್ತ್ರದಲ್ಲಿ ಇರುವ ಇತರ ವಿಷಯಗಳಾದ ಆರ್ಥಿಕ ಅಭಿವೃದ್ಧಿ, ಆರ್ಥಿಕ ಬೆಳವಣಿಗೆ, ಆರ್ಥಿಕ ವ್ಯವಸ್ಥೆಗಳು, ವ್ಯವಸಾಯದ ಅರ್ಥಶಾಸ್ತ್ರ, ಕಾರ್ಮಿಕ ಅರ್ಥಶಾಸ್ತ್ರ, ಎಕನಾಮಿಟ್ರಿಕ್ಸ್ ಇತ್ಯಾದಿ ಯವುಗಳನ್ನು ಮಾಸ್ಟರ್ ಮತ್ತು ಪಿಎಚ್. ಡಿ. ತರಗತಿಗಳಲ್ಲಿ

ಓದುವ ವಿದ್ಯಾರ್ಥಿಗಳಿಗೆ ಐಚ್ಛಿಕ ವಿಷಯವನ್ನಾಗಿ ಕೊಡುತ್ತಾರೆ.

ಗಣಿತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರದ ಪರೀಕ್ಷೆಗಳಲ್ಲದೆ ಇನ್ನೂ ಕೆಲವು ಅರ್ಥಶಾಸ್ತ್ರದ ವಿಷಯಗಳಲ್ಲಿ ಇಂಡಿಯಾದ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಪಾಸು ಮಾಡುವುದು ಕಷ್ಟವಾಗುತ್ತದೆ. ಮೈಕ್ರೋ, ಮಾಕ್ರೋ, ಪಬ್ಲಿಕ್ ಫೈನಾನ್ಸ್, ಇಂಟರ್‌ನ್ಯಾಷನಲ್ ಎಕನಾ ಮಿಕ್ಸ್ ಮತ್ತು ಮಾನಿಟರಿ ಎಕನಾಮಿಕ್ಸ್ (ಹಣದ ವಿಷಯ ಚರ್ಚಿಸುವ ಭಾಗ) ಮುಂತಾದ ವಿಷಯಗಳಲ್ಲಿ ಪರೀಕ್ಷೆಗೆ ಕುಳಿ ತಾಗ ವಿದ್ಯಾರ್ಥಿಗೆ ಬಹಳ ತೊಂದರೆಯಾಗುತ್ತದೆ. ಈ ಪ್ರಶ್ನೆ ಪತ್ರಿಕೆಗಳಲ್ಲಿ ನಮ್ಮ ದೇಶದಲ್ಲಿ ಇರುವ ಹಾಗೆ ಲಘು ಲೇಖನಗಳ (Essay Type) ಮೂಲಕ ಉತ್ತರ ಬರೆಯುವಂತಹ ಪ್ರಶ್ನೆ ಗಳಿರುವುದಿಲ್ಲ. ಅವುಗಳನ್ನು ನೋಡಿದರೆ ನಾವು ಅರ್ಥಶಾಸ್ತ್ರದ ಪ್ರಶ್ನಪತ್ರಿಕೆಗೆ ಉತ್ತರ ಬರೆಯುತ್ತಿದ್ದೇವೋ ಅಥವಾ ಗಣಿತ ಶಾಸ್ತ್ರದ ಪತ್ರಿಕೆಗೆ ಉತ್ತರ ಬರೆಯುತ್ತಿದ್ದೇವೋ ಅನ್ನಿಸುತ್ತದೆ. ಹೀಗೆ ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಗಣಿತದ ಬಳಕೆ ಎಷ್ಟರ ಮಟ್ಟಿಗೆ ಅರ್ಥಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರಗಳಲ್ಲಿ ಹಬ್ಬಿದೆ ಎಂದರೆ ಈಗ ಅನೇಕ ಅಮೆರಿಕದ ವಿದ್ಯಾರ್ಥಿಗಳೂ ಕೂಡ ಇವು ಗಳಲ್ಲಿ ಎಂ.ಎ. ಪದವಿ ಪಡೆಯಲು ಇಷ್ಟಪಡುವುದಿಲ್ಲ.

ಇದಲ್ಲದೆ ಇಂಡಿಯಾದ ಅನೇಕ ವಿದ್ಯಾರ್ಥಿಗಳಿಗೆ ನಿರಾಶೆ ಉಂಟು ಮಾಡುವುದು ಅಂದರೆ ಅಲ್ಲಿಯ ಪರೀಕ್ಷಾ ವಿಧಾನ. ನಮ್ಮ ವಿಶ್ವ ವಿದ್ಯಾನಿಲಯಗಳಲ್ಲಿ ವರ್ಷಕ್ಕೊಂದು ಸಲ ಮಾತ್ರ ಪರೀಕ್ಷೆಯನ್ನು ಎದುರಿಸುತ್ತೇವೆ. ನಮ್ಮ ಎಲ್ಲಾ ಅರ್ಹತೆಯು ಆ ಪರೀಕ್ಷೆಯ ಮೂಲಕ ನಿರ್ಧರಿಸಲ್ಪಡುತ್ತದೆ. ಜೊತೆಗೆಶೇಕಡಾ 35 ಅಂಕೆಗಳನ್ನು

ತೆಗೆದುಕೊಂಡರೂ ನಮಗೆ ಪಾಸಾಗಿ ಡಿಗ್ರಿ ಸಿಗುತ್ತದೆ. ಆದರೆ ಇಂಡಿಯಾದ ಅನೇಕ ವಿದ್ಯಾರ್ಥಿಗಳಿಗೆ ಅವರ ಮೊದಲನೆ ವರ್ಷದ ಅವಧಿಯಲ್ಲಿ ಅಮೆರಿಕನ್ ಪರೀಕ್ಷಾ ವಿಧಾನವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಅಮೆರಿಕನ್ ಪ್ರೊಫೆಸರುಗಳು ನಡೆಸುವ ಟೆಸ್ಟ್‌ಗಳ ಮಹತ್ವ ಗೊತ್ತಿರುವುದಿಲ್ಲ. ಅವರುಗಳು ಪರೀಕ್ಷೆ ನಡೆಸುತ್ತೇವೆ ಎಂದು ಹೇಳುವುದಿಲ್ಲ. ಆದರೆ 15 ದಿನಗಳಿಗೊಂದು ಸಲ ಟೆಸ್ಟ್ ಮಾಡುತ್ತೇವೆ ಎನ್ನುತ್ತಾರೆ. ಇಂಡಿಯಾದ ವಿದ್ಯಾರ್ಥಿಗಳು ನಮ್ಮ ದೇಶದಲ್ಲಿ ಇದ್ದಹಾಗೆ ಎಂದು ತಿಳಿದುಕೊಂಡು ಟೆಸ್ಟ್‌ಗಳು ನಡೆದಾಗ ಸಾಕಷ್ಟು ಗಮನಕೊಡುವುದಿಲ್ಲ. ಆದರೆ ಕೊನೆಯಲ್ಲಿ ನಮಗೆ ಅವುಗಳ ಮಹತ್ವ ತಿಳಿಯುತ್ತದೆ. ಆದರೆ ಆಗ ಏನೂ ಪ್ರಯೋಜನವಾಗುವುದಿಲ್ಲ. ಟೆಸ್ಟ್ ಎಂದು ಕರೆಯಲಿ, ಪರೀಕ್ಷೆ ಎಂದು ಕರೆಯಲಿ, ಕ್ವಿಜ್ ಎಂದು ಕರೆಯಲಿ, ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲಿ ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಅವುಗಳಿಗೆ ಒಂದೇರೀತಿಯ ಪ್ರಾಮುಖ್ಯತೆ ಇರುತ್ತದೆ. ತಾವು ಪಾಠ ಹೇಳುವ ಅವಧಿಯಲ್ಲಿ ಸಂಬಂಧಪಟ್ಟ ಪ್ರೊಫೆಸರ್‌ರವರು ತಮಗೆ ಇಷ್ಟಬಂದಷ್ಟು ಸಲ ಪರೀಕ್ಷೆ ಮಾಡಬಹುದು. ಅವರನ್ನು ಯಾವ ವಿದ್ಯಾರ್ಥಿಯೂ ಪ್ರಶ್ನಿಸುವಹಾಗಿಲ್ಲ. ವಿಶ್ವವಿದ್ಯಾನಿಲಯದ ಅಧಿಕಾರಿಗಂತೂ ಆ ವಿಷಯದಲ್ಲಿ ತಲೆಹಾಕುವ ಅಧಿಕಾರವೇ ಇಲ್ಲ. ಆದುದರಿಂದ ತಾವು ಕೊಟ್ಟ ಎಲ್ಲಾ ರೀತಿಯ ಪರೀಕ್ಷೆಗಳಲ್ಲಿ ವಿದ್ಯಾರ್ಥಿ ಗಳಿಸಿದ ನಂಬರುಗಳನ್ನು ಗಣನೆಗೆ ತೆಗೆದುಕೊಂಡು ಅದರ ಸರಾಸರಿಯನ್ನು ಲೆಕ್ಕ ಹಾಕಿ ಅದರ ಮೇಲೆ ಫಲಿತಾಂಶ ಪ್ರಕಟಿಸುತ್ತಾರೆ. ಫಲಿತಾಂಶ ಪ್ರಕಟ

ಸುವ ಹಕ್ಕು ಸಂಪೂರ್ಣವಾಗಿ ಪ್ರೊಫೆಸರಿಗೆ ಸೇರಿದ್ದು. ಅದನ್ನು ಯಾವ ಅಧಿಕಾರಿಯಾಗಲೀ ಅಥವಾ ನ್ಯಾಯಾಲಯವಾಗಲಿ ಪ್ರಶ್ನಿಸುವಂತಿಲ್ಲ. ನಮ್ಮಲ್ಲಿರುವ ಹಾಗೆ ಗ್ರೇಸ್ ಮಾಡುವುದಾಗಲಿ ಅಥವಾ ಮತ್ತೊಬ್ಬರು ಪೇಪರ್‌ಗಳನ್ನು ತಿದ್ದುವುದಾಗಲೀ (Second Valuation–) ಅಥವಾ ಪರೀಕ್ಷಾ ಮಂಡಲಿನವರು ಒಟ್ಟಾಗಿ ಕುಳಿತು ಒಬ್ಬ ವಿದ್ಯಾರ್ಥಿಯ ಉತ್ತರಕ್ಕೆ ಮೌಲ್ಯ ಕಟ್ಟುವುದಾಗಲಿ ಇಲ್ಲವೇಇಲ್ಲ. ಕೊನೆಯಲ್ಲಿ ಪ್ರಬಂಧವನ್ನು ಪರೀಕ್ಷಿಸುವಾಗ ಮತ್ತು ಬಾಯಿಯಲ್ಲಿ ಪ್ರಶ್ನೆಗಳನ್ನು ಹಾಕಿ ವಿದ್ಯಾರ್ಥಿಯನ್ನು ಪರೀಕ್ಷಿಸು ವಾಗ ಮಾತ್ರ, ನಾಲ್ಕು ಅಥವಾ ಐದು ಜನ ಪ್ರೊಫೆಸರುಗಳ ಒಟ್ಟಾಗಿ ಕುಳಿತು ವಿದ್ಯಾರ್ಥಿಯನ್ನು ಪರೀಕ್ಷಿಸುತ್ತಾರೆ.

ಪ್ರಶ್ನಪತ್ರಿಕೆಗಳ ಮೂಲಕ ಪರೀಕ್ಷಿಸುವುದಲ್ಲದೆ ತರಗತಿಗಳಲ್ಲಿ ಪ್ರೊಫೆಸರುಗಳು ಪರೀಕ್ಷೆ ಮಾಡುತ್ತಾರೆ. ಪ್ರತಿಯೊಂದು ವಿಷಯ ದಲ್ಲೂ ಓದುತ್ತಿರುವ ವಿದ್ಯಾರ್ಥಿಗಳ ಹೆಸರನ್ನು ಪ್ರತಿಯೊಬ್ಬ ಪ್ರೊಫೆಸರ್ ಒಂದು ಪುಸ್ತಕದಲ್ಲಿ ಗುರುತು ಹಾಕಿಕೊಂಡಿರುತ್ತಾರೆ. ಸಾಮಾನ್ಯವಾಗಿ ಪ್ರತಿ ಎಂ.ಎ. ಅಥವಾ ಪಿಎಚ್.ಡಿ. ವಿಷಯ ಗಳಿಗೆ ಪಾಠ ಹೇಳುವ ಅವಧಿ (1 ದಿನದಲ್ಲಿ) 2 ಘಂಟೆಗಳ ಕಾಲ ಒಂದೇ ಸಮನೆ ಇರುತ್ತದೆ. ಆಗ ಪ್ರತಿ ವಿದ್ಯಾರ್ಥಿಯನ್ನು ಬೋರ್ಡಿನ ಹತ್ತಿರ ಕರೆಯಿಸಿ ಅರ್ಥಶಾಸ್ತ್ರದ ಸಮಸ್ಯೆಗಳಿ ಸಂಬಂಧಪಟ್ಟಂತೆ ಲೆಕ್ಕ ಮಾಡು ಎಂದು ಹೇಳುತ್ತಾರೆ. ವಿದ್ಯಾರ್ಥಿ ಎಲ್ಲಿಯವರೆಗೆ ಲೆಕ್ಕವನ್ನು ಸರಿಯಾಗಿ ಮಾಡಿರುತ್ತಾನೋ ಅಲ್ಲಿಯ ವರೆಗೆ ಸುಮ್ಮನಿರುತ್ತಾರೆ. ತಪ್ಪುಮಾಡಿದ ಕೂಡಲೇ ಪ್ರೊಫೆಸರ ರವರು ಎದ್ದು ಬಂದು ತಪ್ಪನ್ನು ತೋರಿಸಿ, ತಾವೇ ಲೆಕ್ಕವನ್ನು ಮಾ

ತೋರಿಸುತ್ತಾರೆ. ಆವರೆ ಆ ವಿದ್ಯಾರ್ಥಿಗೆ "E" Grade (ಫೇಲು) ಬರುತ್ತದೆ. ಲೆಕ್ಕ ಮಾಡಿದವನಿಗೆ "A" ಅಥವಾ "B" ಗ್ರೇಡ್ ಬರುತ್ತದೆ. ಇದರಿಂದ ಯಾವ ವಿದ್ಯಾರ್ಥಿಯೂ ಉಪಾಧ್ಯಾಯ ನನ್ನು ನಿಂದಿಸುವಂತಿಲ್ಲ. ಎಲ್ಲ ಸಹೋದ್ಯೋಗಿಗಳ ಎದುರಿಗೆ ಪರೀಕ್ಷೆ ಮಾಡಿ ನಂಬರು ಕೊಡುತ್ತಾರೆ. ನಮ್ಮಲ್ಲಿರುವ ಹಾಗೆ ಆವರ ಜಾತಿಯವನಿಗೆ ಪ್ರೊಫೆಸರ್ ಹೆಚ್ಚಿಗೆ ನಂಬರು ಕೊಟ್ಟುಕೊಂಡರು. ಬೇರೆಯವರಿಗೆ ಕಡಮೆ ನಂಬರು ಕೊಟ್ಟರು ಎಂದು ಯಾರೂ ಕೇಳುವಂತಿಲ್ಲ. ಇದಲ್ಲದೆ ವಿದ್ಯಾರ್ಥಿಗಳಿಗೆ ಯಾವುದಾದರೂ ವಿಷಯದ ಮೇಲೆ ಒಂದು ಸಣ್ಣ ಪ್ರಬಂಧ ಬರೆಯಲು ಹೇಳುತ್ತಾರೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅದನ್ನು ತರಗತಿಯಲ್ಲಿ ಚರ್ಚಿಸಬೇಕು. ಆಗ ಅವನು ಯಾವರೀತಿ ವರ್ತಿಸುತ್ತಾನೆ ಎಂಬುದರ ಮೇಲೆ ಅವನಿಗೆ ನಂಬರು ಕೊಡುತ್ತಾರೆ. ಈ ರೀತಿ ವಿದ್ಯಾರ್ಥಿ ತೆಗೆದು ಕೊಂಡ ನಂಬರುಗಳೆಲ್ಲವನ್ನೂ ಒಟ್ಟಾಗಿ ಸೇರಿಸಿ ಅವನ ಪರೀಕ್ಷಾ ಫಲಿತಾಂಶ ಪ್ರಕಟಿಸುತ್ತಾರೆ. ಹೀಗೆ ತರಗತಿಯಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಇಂಡಿಯಾದ ವಿದ್ಯಾರ್ಥಿಗಳು ಬಹಳಮಟ್ಟಿಗೆ ತಮ್ಮ ಅನರ್ಹತೆ ತೋರ್ಪಡಿಸಿಕೊಳ್ಳುತ್ತಾರೆ. ಆದುದರಿಂದ ಅನೇಕ ವಿದ್ಯಾರ್ಥಿಗಳು ಮೊದಲನೆ ವರ್ಷವೇ ಫೇಲಾಗಿ ವಾಪಸ್ಸು ಬರ ಬೇಕಾಗುತ್ತದೆ.

ಅದೃಷ್ಟವಶಾತ್ ಈ ಎಲ್ಲ ಪರೀಕ್ಷೆಗಳಲ್ಲಿ ವಿದ್ಯಾರ್ಥಿ ತೇರ್ಗಡೆ ಯಾದರೆ, ಅವನಿಗೆ Comprehensive—ಪರೀಕ್ಷೆಯನ್ನು 2 ವರ್ಷದ ಅವಧಿ ಆದಮೇಲೆ ಕೊಡುತ್ತಾರೆ. ಅದರಲ್ಲಿ ಪಾಸಾಗಿ ಮೌಖಿಕ (Orals) ಪರೀಕ್ಷೆಯಲ್ಲೂ ಪಾಸಾದರೆ ಕಡೆಯದಾಗಿ

ಅವನಿಗೆ ಪ್ರಬಂಧ(Thesis)ಬರೆಯಲು ಅನುಮತಿ ದೊರೆಯುತ್ತದೆ
ಆಗ ಅವನಿಗೆ ಎಲ್ಲಾ ರೀತಿಯ ಗೌರವ ಮತ್ತು ಪ್ರೋತ್ಸಾಹ ದೊ
ಯುತ್ತದೆ. ಪ್ರಬಂಧ (Thesis) ಬರೆದ ಮೇಲೆ ಅದಕ್ಕೆ ಪ್ರೊ
ಸರುಗಳಿಂದ ಒಪ್ಪಿಗೆ ದೊರೆತರೆ ಕಟ್ಟಕಡೆಯಲ್ಲಿ ಅವನಿಗೆ ಪಿಎಚ್.
ಪದವಿ ಬರುತ್ತದೆ.

ಮೇಲ್ಕಂಡ ರೀತಿಯ ಪರೀಕ್ಷೆ ಪದ್ಧತಿ ಮತ್ತು ನಮ್ಮ ದೇಶದ
ಇನ್ನೂ ಹಳೇ ರೀತಿಯ ಮಾಸ್ಟರ್ ತರಗತಿಯ ಕ್ರಮಗಳನ್ನೆ
ಮುಂದುವರಿಸಿಕೊಂಡು ಹೋಗುತ್ತಿದ್ದು ಇಂಡಿಯಾದ ವಿದ್ಯಾರ್ಥಿ
ಸಾಕಷ್ಟು ಅರ್ಹತೆ ಇಲ್ಲದೆ ಇರುವುದು, ಮುಖ್ಯವಾಗಿ ಇಂಡಿಯಾ
ವಿದ್ಯಾರ್ಥಿಗಳು ಅಪಮಾನಗೊಳ್ಳಲು ಕಾರಣವಾಗಿದೆ. ಆದುದರಿಂ
ಈಗ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳಿಗೆ ಆಶಾಭಂಗವಾಗಿ ವಾಪಸ
ಇಂಡಿಯಾಕ್ಕೆ ಬರುತ್ತಿದ್ದಾರೆ.

ಈ ಮೇಲ್ಕಂಡ ಅಂಶಗಳನ್ನು ವಿವರಿಸಿ ನಾನು ಯಾವ ಇಂ
ಯಾದ ವಿದ್ಯಾರ್ಥಿಯನ್ನೂ ಅಧೈರ್ಯಪಡಿಸಬೇಕೆಂದು ಇಷ್ಟಪರ
ವುದಿಲ್ಲ. ಅದರ ಬದಲು ಈ ಅಂಶಗಳನ್ನು ತಿಳಿದುಕೊಂಡು ಪ್ರ
ಯೊಬ್ಬ ಉಪಾಧ್ಯಾಯ ಮತ್ತು ವಿದ್ಯಾರ್ಥಿ ಇಂಡಿಯಾವನ
ಬಿಡುವುದಕ್ಕೆ ಮೊದಲು ಸಾಕಷ್ಟು ತರಪೇತಿ ಪಡೆದುಕೊಂಡು ಹೋ
ಬೇಕೆಂಬುದೇ ನನ್ನ ಉದ್ದೇಶ. ಈಗಾಗಲೇ ನಮ್ಮ ವಿದ್ಯಾರ್ಥಿಗಳಿ
ಉಪಾಧ್ಯಾಯರುಗಳಿಗೆ ಮತ್ತು ವಿಶ್ವವಿದ್ಯಾನಿಲಯಗಳಿಗೆ ಆಗು
ರುವ ಅವಮಾನವನ್ನು ತಪ್ಪಿಸಬೇಕೆಂದು ನನ್ನ ಪ್ರಾರ್ಥನೆ. ಈ
ಗಲೇ ಅಮೆರಿಕಾದ ಪ್ರಸಿದ್ಧ ವಿಶ್ವವಿದ್ಯಾನಿಲಯಗಳಾದ ಹಾರ್ವಡ
ಏಲ್, ಚಿಕಾಗೋ, ಪ್ರಿನ್ಸ್‌ಟನ್, ಸ್ಟಾನ್‌ಫರ್ಡ್ ಎಂ.ಐ.

ತ್ತು ಪರಡ್ಯೂ ಇತ್ಯಾದಿ ಮತ್ತು ಕೆನಡಾದ ಮೆಗಿಲ್ ಮತ್ತು ರೆಂಟೋ ವಿಶ್ವವಿದ್ಯಾನಿಲಯಗಳು ನಮ್ಮ ದೇಶದ ವಿದ್ಯಾರ್ಥಿಗೆ ಸ್ಟರ್ ತರಗತಿಗೆ ಕೂಡ ಪ್ರವೇಶ ನೀಡುತ್ತಿಲ್ಲ. ಸಮಾಜಶಾಸ್ತ್ರ ಲ್ಲಿ ಎಂ. ಎ. ಪದವಿ ಪಡೆದ ಇಂಡಿಯಾದ ವಿದ್ಯಾರ್ಥಿಗಳಿಗೆ ಕಷ್ಟು ಗಣಿತಶಾಸ್ತ್ರದ ಜ್ಞಾನ ಇಲ್ಲ ಎಂಬುದೇ ಇದಕ್ಕೆ ಮುಖ ರಣವಾಗಿದೆ. ಹಾಗೆಯೇ ನಮ್ಮ ದೇಶದಿಂದ ಕೆಲವು ಪ್ರೊಫೆಸರ್ರು ಹೋದರೆ ಅವರುಗಳಿಗೆ ಅಮೇರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ದವೀಧರ ತರಗತಿಗಳಿಗೆ ಪಾಠ ಹೇಳಲು ಅವಕಾಶ ಕೊಡುವುದಿಲ್ಲ. ದರ ಬದಲು ಅವರು ಮೊದಲನೆ ಬಿ.ಎ. ಅಥವಾ ಬಿ.ಎಸ್ಸಿ ತರಗತಿ ಳಿಗೆ ಮಾತ್ರ ಪಾಠ ಹೇಳುವಂತೆ ಮಾಡುತ್ತಾರೆ. ಇದಕ್ಕೆ ಮುಖ್ಯ ರಣವೇನೆಂದರೆ ನಮ್ಮ ವಿಶ್ವವಿದ್ಯಾನಿಲಯದ ಅನೇಕ ಪ್ರೊಫೆಸರು ಳಿಗೆ ಸಾಕಷ್ಟು ಪರಿಶ್ರಮ ಮತ್ತು ಜ್ಞಾನಾರ್ಜನೆ ಇಲ್ಲವೆಂಬುದೇ ರಣವಾಗಿದೆ. ಆದುದರಿಂದ ನಾವುಗಳು ಅಮೆರಿಕನ್ ವಿಶ್ವವಿದ್ಯಾ ಲಯಗಳಿಗೆ ಹೋಗುವುದಕ್ಕೆ ಮೊದಲು ಸಾಕಷ್ಟು ತರಬೇತಿ ಹೊಂದಿ ಹೋಗಿ, ಅಮೆರಿಕನ್ ಪ್ರೊಫೆಸರುಗಳ ದೃಷ್ಟಿಯಲ್ಲಿ ನಮ್ಮ ಶ್ವವಿದ್ಯಾನಿಲಯಗಳ ಮತ್ತು ದೇಶದ ಘನತೆಯನ್ನು ಎತ್ತಿಹಿಡಿಯ ಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಾಯ ೪

ಅಮೆರಿಕ ವಿಶ್ವವಿದ್ಯಾನಿಲಯಗಳ ಸಾಮಾಜಿಕ ಮತ್ತು ಶೈಕ್ಷಣಿಕ ಪ್ರಭಾವ :

ಹಿಂದಿನ ಅಧ್ಯಾಯದಲ್ಲಿ ಇಂಡಿಯಾದ ವಿದ್ಯಾರ್ಥಿಗಳ ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ಬೋಧನ ಕ್ರಮಗಳ ವಿಷಯ ದಲ್ಲಿ ಎದುರಿಸಬೇಕಾದ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗಿದೆ ಈ ಅಧ್ಯಾಯದಲ್ಲಿ ಎಷ್ಟರಮಟ್ಟಿಗೆ ಶೈಕ್ಷಣಿಕವಾಗಿ ಇಂಡಿಯಾ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರುಗಳ ಮೇಲೆ ಅಮೆರಿಕಾದ ವಿ ವಿದ್ಯಾನಿಲಯಗಳು ಪ್ರಭಾವ ಬೀರಿವೆ ಎಂಬುದರ ವಿಷಯ ವಿವರಿ ಲಾಗಿದೆ.

ಇಂಡಿಯಾದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಅಮೆರಿಕನ ವಿಶ್ವವಿದ್ಯಾನಿಲಯಗಳಲ್ಲಿ ಕಾಲಿಟ್ಟೊಡನೆಯೆ ಅವರ ಮೇಲೆ ಉಂಟ ಗುವ ಮೊಟ್ಟಮೊದಲನೆಯ ಪರಿಣಾಮ ಅಂದರೆ, ಅವರಲ್ಲಿರು ಅಹಂಭಾವವು ಅಡಗುತ್ತದೆ. ನಮ್ಮಲ್ಲಿ ಅನೇಕರು ಎಂ.ಎ ಎಂ.ಎಸ್‌ಸಿ ; ಎಂ. ಕಾಂ ; ಮತ್ತು ಎಂ. ಇಡಿ ಪರೀಕ್ಷೆಗಳಲ್ಲಿ ಮೊ ಲನೆ ದರ್ಜೆ ಅಥವಾ ರ್‍ಯಾಂಕುಗಳನ್ನು ಪಡೆದು ತೇರ್ಗಡೆಯಾದ ನಮಗೆ ಸರಿಸಮಾನರಾದವರು ಇನ್ನಾರು ಇದ್ದಾರೆ ಎಂಬ ಭಾವ ಯಿಂದ ವರ್ತಿಸುತ್ತಿರುತ್ತೇವೆ. ನಮ್ಮ ಜೊತೆಯಲ್ಲಿ ಸಹಪಾ ಗಳಾಗಿದ್ದು ದುರದೃಷ್ಟದಿಂದ ಅವರುಗಳು ಎರಡನೆಯ ದರ್ಜೆಯ ತೇರ್ಗಡೆಯಾಗಿದ್ದರೆ ಅವರನ್ನು ತಾತ್ಸಾರ ಮನೋಭಾವದಿಂ

ಣುತ್ತೇವೆ. ಇವಲ್ಲದೆ ನಮ್ಮಲ್ಲಿ ಕೆಲವರು ವಿಶ್ವವಿದ್ಯಾನಿಲಯ
ಲ್ಲಿ ಅಧ್ಯಾಪಕರಾಗಿ ನಾಲ್ಕಾರು ವರ್ಷ ಕೆಲಸ ಮಾಡಿದ್ದರಂತೂ,
ರ್ಮ್ಮ ಅಹಂಭಾವನೆಗೆ ಕೊನೆಯೆ ಇರುವುದಿಲ್ಲ. (ಅಂದರೆ ಈ
ದರ್ಭದಲ್ಲಿ ನಾನು ಕೆಲವು ಪೂಜ್ಯ ಸ್ನೇಹಿತರನ್ನು ಮತ್ತು ಗುರು
ನ್ನು ನೆನಪು ಮಾಡಿಕೊಳ್ಳಬೇಕಾಗಿದೆ. ಏಕೆಂದರೆ ನಿಜವಾಗಿಯೂ
ದ್ವಾಂಸರಾದ ಅವರು ನಮ್ಮ ಹಾಗೆ ಬಡಾಯಿ ಕೊಚ್ಚಿಕೊಳ್ಳು
ದಿಲ್ಲ. ಆದರೆ ಇಂಡಿಯಾದಲ್ಲಿ ಅಂತಹವರ ಸಂಖ್ಯೆ ಬಹಳ ಕಡಿಮೆ
ನ್ನಬಹುದು.) ಜೊತೆಗೆ ಇಂಡಿಯಾದಲ್ಲಿದ್ದಾಗಲೇ ಪಿಎಚ್.ಡಿ.
ದವಿ ಪಡೆದಿದ್ದರಂತೂ ನಮ್ಮಲ್ಲಿ ಕೆಲವರಿಗಿರುವ ಅಹಂಭಾವ
ನ್ನು ವರ್ಣಿಸಲಸಾಧ್ಯವಾಗಿರುತ್ತದೆ.

ಆದರೆ ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿ ಕಾಲಿಟ್ಟ ಸ್ವಲ್ಪ
ವಗಳೊಳಗಾಗಿ ನಮಗೆಷ್ಟು ವಿದ್ಯೆ ಬರುತ್ತದೆ ಎಂಬುದು ನಮಗೆ
ಂತ್ತಾಗುತ್ತದೆ. ಇಲ್ಲಿಂದ ಪಿ. ಎಚ್‌ಡಿ. ಪದವಿ ಪಡೆದುಕೊಂಡು
ಿಗಿರಲಿ ಅಥವಾ ಮಾಸ್ಟರ್ ಪದವಿಯಲ್ಲಿ ರ್‍ಯಾಂಕ್ ಪಡೆದು
ಂಡು ಹೋಗಿರಲಿ, ಅಲ್ಲಿಗೆ ಹೋದ ಒಡನೆಯೆ ತಲೆತಗ್ಗಿಸ
ಕಾಗಿ ಬರುತ್ತದೆ. ಇಂಡಿಯಾದಿಂದ ಹೋಗುವಾಗ ಹಾರ,
ರಾಯಿಗಳನ್ನು ಹಾಕಿಸಿಕೊಂಡು ಸಂಭ್ರಮದಿಂದ, ಅಟ್ಟಹಾಸ
ದ ಪಿ. ಎಚ್‌ಡಿ. ಮಾಡಿಕೊಂಡು ಬರುತ್ತೇವೆ ಎಂದು ಹೋಗು
ವೆ. ಆದರೆ ಅಲ್ಲಿಗೆ ಹೋದ ಒಡನೆಯೆ ನಮಗೆ ಟೆಸ್ಟ್ ಕೊಟ್ಟಾಗ
ಮ್ಮ ತೇಜೋಭಂಗವಾಗುತ್ತದೆ. ಹಿಂದಿನ ಅಧ್ಯಾಯದಲ್ಲಿ
ಸಿರುವಂತೆ ನಮ್ಮ ಯೋಗ್ಯತೆಗೆ ತಕ್ಕಂತೆ ನಾವು ಬ್ಯಾಚುಲರ್
ವಾ ಮಾಸ್ಟರ್ ಅಥವಾ ಪಿ.ಎಚ್.ಡಿ. ತರಗತಿಗಳಿಗೆ ಹೋಗ

ಬೇಕಾಗುತ್ತದೆ. ನಾವುಗಳು ಅಲ್ಲಿಯ ಪದವಿ ತರಗತಿಗಳ
ಹೋಗಿ ಕುಳಿತುಕೊಂಡಾಗ ನಮಗಿರುವ ನಿಜವಾದ ಜ್ಞಾನ
ಅರಿವು ನಮಗುಂಟಾಗುತ್ತದೆ. ನಮಗಿಂತ ವಯಸ್ಸಿನಲ್ಲಿ ಕಿರಿಯ
ರಾದ ಅಲ್ಲಿಯ ವಿದ್ಯಾರ್ಥಿಗಳು ತರಗತಿಗಳಲ್ಲಿ ಸಮಸ್ಯೆಗಳನ
ವಿಶ್ಲೇಷಣೆ ಮಾಡುವ ರೀತಿಯನ್ನು ನೋಡಿದಾಗ ನಮ್ಮ ಯೋಗ್ಯ
ಯನ್ನು ನಾವೇ ಅಳೆದುಕೊಳ್ಳಬೇಕಾಗುತ್ತದೆ. ನಾನು ಮತ
ನನ್ನ ಅನೇಕ ಸ್ನೇಹಿತರು ಅಲ್ಲಿ ಕಣ್ಣೀರು ಇಟ್ಟಿರುವುದನ್ನು ನೆನ
ಕೊಂಡಾಗ ನಮ್ಮಲ್ಲಿದ್ದ ಅಹಂಭಾವನೆ ಹೋಯಿತೇನೊ ಎಂದ
ನನಗನಿಸುತ್ತದೆ. ಸಂಪೂರ್ಣವಾಗಿ ವಿದ್ಯಾರ್ಥಿಗಳಾಗಿ ಹೋದವ
ಪೈಕಿ ಶೇಕಡಾ 98 ಜನರು ಇಂತಹ ಅನುಭವ ಪಡೆವಿರುತ್ತಾ
ನಮಗಾಗುವ ಅವಮಾನವನ್ನು ತೋರಿಸಿಕೊಡಲು ಒಂದೆರ
ನಿದರ್ಶನಗಳನ್ನು ಮಾತ್ರ ಕೊಡುತ್ತೇನೆ.

ಮೊದಲು ನನ್ನ ಸ್ವಂತ ಅನುಭವವನ್ನೇ ಹೇಳುತ್ತೇನೆ. ನಾನ
ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ ಹಣದ ವಿಷಯವನ್ನು (Mone
tary Economics) ಕಡ್ಡಾಯವಾಗಿ ಓದಬೇಕಾಗಿ ಬಂದಿತ
ನನಗೆ ಮೊದಲು ಮಾಸ್ಟರ್ ಡಿಗ್ರಿಗೆ ಓದು ಎಂದು ಹೇಳಿದರ
ಮೊದಲು ಆ ತರಗತಿಗೆ ಹೋದೆ. ಅಲ್ಲಿಯ ಪ್ರೊಫೆಸರ್‌ರವ
ಹಣದ ವಿಷಯದಲ್ಲಿ ಉಪನ್ಯಾಸ ಮಾಡುತ್ತಾರೆ ಎಂದು ತಿಳಿದಿದ್ದೆ
ಪ್ರೊಫೆಸರ್‌ರವರು ಒಟ್ಟಿಗೆ 2 ಘಂಟೆಗಳ ಕಾಲ ಪಾಠ ತೆಗೆ
ಕೊಂಡರು. ಮೊದಲು ಹತ್ತು ನಿಮಿಷ ಕೆಲವು ವಿಷಯಗಳನ
ಹೇಳಿದರು. ಅನಂತರ ಬೋರ್ಡಿಗೆ ಬಂದು ಒಂದು ಇಂಟೆಗ್ರಲ
ಕ್ಯಾಲಕ್ಯುಲಸ್‌ನ ಈಕ್ವೇಶನ್ ಹಾಕಿದರು. ತರಗತಿಯಲ್ಲಿ

ವಿದ್ಯಾರ್ಥಿಗಳನ್ನು ಒಬ್ಬೊಬ್ಬರನ್ನಾಗಿ ಕರೆದು ಆ ಲೆಕ್ಕದಲ್ಲಿದ್ದ ಒಂದೊಂದು ಹಂತವನ್ನು (Step) ಮಾತ್ರ ಮಾಡುವಂತೆ ಹೇಳಿದರು. ನಾಲ್ಕು ಜನ ಅಲ್ಲಿಯ ವಿದ್ಯಾರ್ಥಿಗಳು ಸುಲಭವಾಗಿ ಮಾಡಿದರು. ನಾನು ಐದನೆಯವನು. ನನ್ನನ್ನು ಕರೆದರು. ದುಃಖದಿಂದ ಬೋರ್ಡಿನ ಮುಂದೆ ಹೋದೆ. ನನ್ನ ಕೈಯಲ್ಲಿ ಮಾಡಲಾಗುವುದಿಲ್ಲ ಎಂದು ತಲೆತಗ್ಗಿಸಿದೆ. ಪ್ರೊಫೆಸರ್‌ರವರಿಗೆ ವಯಸ್ಸಾಗಿದ್ದುದರಿಂದ ನನ್ನ ಕಣ್ಣುಗಳಲ್ಲಿ ನೀರು ಬರುತ್ತಿರುವುದನ್ನು ನೋಡಿ ಅವರು ನನ್ನ ಪರಿಸ್ಥಿತಿಯನ್ನು ಅರಿತುಕೊಂಡರು. ನನ್ನ ಜಾಗದಲ್ಲಿ ವಾಪಸ್ಸು ಹೋಗಿ ಕುಳಿತುಕೊ ಎಂದರು. ನನ್ನೊಡನೆ ಮತ್ತೊಬ್ಬ ಬಿಹಾರಿನ ವಿದ್ಯಾರ್ಥಿ ಇದ್ದನು. ಆತನು ಇಂಡಿಯಾದಲ್ಲೇ ಪಿಎಚ್.ಡಿ. ಪಡೆದಿದ್ದನು. ಆದರೆ ಅವನಿಗೆ Monetary Economics ತರಗತಿಗೆ ಹೋಗಿ ಕುಳಿತು ಅಲ್ಲಿ ನಡೆಯುವ ಚರ್ಚೆಯಲ್ಲಿ ಭಾಗವಹಿಸುವಂತೆ ಹೇಳಿದರು. ಆತ ನನ್ನ ಹಾಗೆ ಪರೀಕ್ಷೆ ತೆಗೆದುಕೊಳ್ಳಬೇಕಾಗಿರಲಿಲ್ಲ. ಆದರೆ ವಿಶ್ವವಿದ್ಯಾನಿಲಯದಲ್ಲಿ ಯಾರಾದರೂ ಹೆಸರುವಾಸಿಯಾದ ಪ್ರೊಫೆಸರ್‌ರವರು ಪಾಠ ಮಾಡುತ್ತಿದ್ದರೆ ಹೊರಗಿನಿಂದ ಬಂದ ವಿದ್ಯಾರ್ಥಿಗಳನ್ನು ಆ ತರಗತಿಗಳಿಗೆ ಹೋಗಿ ಚರ್ಚೆಯಲ್ಲಿ ಭಾಗವಹಿಸಿ ಎನ್ನುತ್ತಾರೆ. ಆ ದಿನ ಪಾಠ ಮಾಡುತ್ತಿದ್ದ ಪ್ರೊಫೆಸರ್‌ರವರಿಗೆ ಈ ವಿದ್ಯಾರ್ಥಿ ಎಂ.ಎ. ತರಗತಿಯವನಲ್ಲ ಎಂದು ಗೊತ್ತಿರಲಿಲ್ಲ. ನನ್ನ ಪಕ್ಕದಲ್ಲಿ ಆತ ಕುಳಿತಿದ್ದುದರಿಂದ ನನ್ನಾದಮೇಲೆ ಅವನನ್ನು ಬೋರ್ಡಿಗೆ ಕರೆದರು. ಆತ ವಿಧಿ ಇಲ್ಲದೆ ಬೋರ್ಡಿನ ಹತ್ತಿರ ಹೋಗಿ ನನ್ನ ಹಾಗೆ ಅವಮಾನ ಪಡಬೇಕಾಯಿತು. ನಾವಿಬ್ಬರು ಲೆಕ್ಕ ಮಾಡಲಾರದೆ ಹೋದಮೇಲೆ

ಉಳಿದ ಅಮೆರಿಕನ್ ವಿದ್ಯಾರ್ಥಿಗಳನ್ನು ಕರೆದರು. ಅವರೆಲ್ಲರು
ಲೆಕ್ಕ ಮಾಡಿದರು.

ಇದೇ ರೀತಿ ಉಳಿದ $1\frac{1}{2}$ ಘಂಟೆಗಳ ಕಾಲ ತರಗತಿಯಲ್ಲಿ ಲೆಕ್ಕ
ಮಾಡಿ ಪ್ರೊಫೆಸರ್‌ರವರು ಮಧ್ಯೆ ಮಧ್ಯೆ ಹಣದ ಸಮಸ್ಯೆಯನ್ನು
ಗಣಿತೋಕ್ತಿಗಳ ರೂಪದಲ್ಲಿ ವಿವರಿಸಿದರು. ತರಗತಿ ಮುಗಿದ
ಮೇಲೆ ನನ್ನನ್ನು ಅವರ ರೂಮಿನ ಹತ್ತಿರ ಬರುವಂತೆ ಹೇಳಿದರು.
ಅದರಂತೆ ನಾನು ಹೋದೆ. ನಾನು ಹೋದ ಒಡನೆಯೆ ರೂಮಿನ
ಬಾಗಿಲನ್ನು ಮೊದಲು ಮುಚ್ಚು ಎಂದರು. ಏಕೆಂದರೆ ಆ ದೇಶದಲ್ಲಿ
ಒಬ್ಬ ವಿದ್ಯಾರ್ಥಿಯೊಡನೆ ಮಾತನಾಡಿದುದು ಮತ್ತೊಬ್ಬನಿಗೆ
ಗೊತ್ತಾಗಬಾರದು ಎಂಬುದು ಅವರ ಮನೋಧರ್ಮವಾಗಿರುತ್ತದೆ.
ಬಾಗಿಲನ್ನು ಮುಚ್ಚಿದ ಮೇಲೆ ನಿರ್ಭಯವಾಗಿ ನಾನು ಏನು ಹೇಳ
ಬೇಕೆಂದಿರುವನೋ ಅದನ್ನು ಹೇಳು ಎಂದರು. ಅನಂತರ ಇಂಡಿಯಾ
ದಲ್ಲಿ ಯಾವ ರೀತಿ ವಿದ್ಯಾಭ್ಯಾಸ ಪದ್ಧತಿ ಇದೆ ಮತ್ತು ಏಕೆ ನನಗೆ
ಗಣಿತಶಾಸ್ತ್ರ ಬರುವುದಿಲ್ಲ ಎಂಬುದನ್ನು ಅವರಿಗೆ ವಿವರಿಸಿದೆ. ಅದನ್ನು
ಕೇಳಿ ಪ್ರೊಫೆಸರ್ ಬಹಳ ಪಶ್ಚಾತ್ತಾಪಪಟ್ಟರು. ತರಗತಿಯಲ್ಲಿ
ಎಲ್ಲರ ಎದುರಿಗೆ ನನಗೆ ಲೆಕ್ಕ ಮಾಡು ಎಂದು ಹೇಳಿ ನನ್ನ ಮನ
ಸ್ಸನ್ನು ನೋಯಿಸಿದ್ದಕ್ಕೆ ಬೇಜಾರುಪಡಬೇಡ ಎಂದು ಅವರು
ಹೇಳಿದರು. ಆದರೆ ಒಂದು ವ್ಯಂಗೋಕ್ತಿಯನ್ನು ಹೇಳಿದರು.
ಅದನ್ನು ನನ್ನ ಜೀವನದಲ್ಲಿ ಎಂದಿಗೂ ಮರೆಯಲಾರೆ. ಅವರು ಈ
ರೀತಿ ನುಡಿದರು. "ನೀನು ದಕ್ಷಿಣ ಇಂಡಿಯಾದಿಂದ ಬರುತ್ತೀಯೆ
ಎಂದು ಹೇಳುತ್ತೀಯೆ. ದಕ್ಷಿಣ ಇಂಡಿಯಾದಲ್ಲಿ ಸುಪ್ರಸಿದ್ಧ ಗಣಿತ
ಶಾಸ್ತ್ರಜ್ಞ ಪ್ರೊಫೆಸರ್ ರಾಮಾನುಜಂ ಎಂಬುವರು ಜನ್ಮವೆತ್ತಿದ್ದರು

ಂತಹ ದೇಶದಲ್ಲಿ ನೀನು ಇದ್ದು ನಿನಗೆ ಕೇವಲ ಪ್ರಾಥಮಿಕ ಗಣಿತ ಸ್ತ್ರವು ಬರುವುದಿಲ್ಲ ಎಂಬುದನ್ನು ತಿಳಿದು ನನಗೆ ಬಹಳ ಆಶ್ಚರ್ಯ ಾಗುತ್ತದೆ." ಇದನ್ನು ಕೇಳಿದೊಡನೆಯೇ ನನ್ನ ಕಣ್ಣನಲ್ಲಿ ಃಬಾಷ್ಪಗಳು ಬಂದವು. ಅವರ ಮುಂದೆ ತಲೆ ಎತ್ತಿಕೊಂಡು ಡಾ ನಿಲ್ಲಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ನಾನು ಚೇತರಿಸಿ ಂಡು ಅವರಿಗೆ ವಿನಯದಿಂದ ಉತ್ತರ ಹೇಳಿದೆ. ನನ್ನನ್ನು ೋಡಿ ಇಂಡಿಯಾದ ಎಲ್ಲಾ ವಿದ್ಯಾರ್ಥಿಗಳೂ ನನ್ನ ಹಾಗೆ ಇದ್ದಾರೆ ಂಬ ತೀರ್ಮಾನಕ್ಕೆ ಬರಬೇಡಿ ಎಂದು ಕೇಳಿಕೊಂಡೆ. ಇಂಡಿಯಾ ಲ್ಲಿ ಅನೇಕರು ಗಣಿತಶಾಸ್ತ್ರದಲ್ಲಿ ಒಳ್ಳೆ ಪಾಂಡಿತ್ಯ ಪಡೆದಿದ್ದಾರೆ. ದರೆ ದುರದೃಷ್ಟವಶಾತ್ ಆರ್ಟ್ಸ್ ವಿದ್ಯಾರ್ಥಿಗಳಿಗೆ ಗಣಿತ ಹೇಳಿ ಡುವುದಿಲ್ಲ ಆದುದರಿಂದ ಈ ದುಸ್ಥಿತಿ ಅನುಭವಿಸುತ್ತಿದ್ದೇನೆ ಂದೆ. ಅನಂತರ ನಾನು ಹೊರಗೆ ಬಂದೆ. ನಾನು ನನ್ನ ದೇಶಕ್ಕೆ ತ್ತು ವಿಶ್ವವಿದ್ಯಾನಿಲಯಕ್ಕೆ ಎಂತಹ ಅವಮಾನ ಮಾಡಿದೆ ಂಬುದು ಮಾತ್ರ ನನ್ನನ್ನು ಬಾಧಿಸುತ್ತಲೇ ಇತ್ತು. ನಾನು ಅಲ್ಲಿದ್ದ ವರ್ಷ 3 ತಿಂಗಳ ಕಾಲದಲ್ಲಿ ಈ ಅವಮಾನ ನನಗೆ ಸದಾಕಾಲ ಲ್ಲಿಯೂ ಎಚ್ಚರಿಕೆ ನೀಡುತ್ತಿತ್ತು. ನಾನು ರೂಮಿನಿಂದ ಹೊರಗೆ ಂದಮೇಲೆ ಬಿಹಾರಿನ ವಿದ್ಯಾರ್ಥಿಯು ಏನಾಯಿತು ಎಂಬುದನ್ನು ನ್ನಿಂದ ತಿಳಿದುಕೊಂಡ. ಮಾರನೆ ದಿನದಿಂದ ಅವನು ಆ ಪ್ರೊಫೆ ಸರವರ ತರಗತಿಗೆ ಬರುವುದನ್ನೇ ಬಿಟ್ಟನು. ಆದರೆ ನು ಮಾತ್ರ $3\frac{1}{2}$ ತಿಂಗಳು ಆ ತರಗತಿಯಲ್ಲಿ ಪ್ರತಿನಿತ್ಯ ತಲೆತಗ್ಗಿಸಿ ಂಡು ಕುಳಿತುಕೊಳ್ಳಲೇಬೇಕಾಯಿತು.

ಉತ್ತರಪ್ರದೇಶದಿಂದ ಒಬ್ಬ ವಿದ್ಯಾರ್ಥಿ (ಎಂ. ಕಾಂ.ನಲ್ಲಿ

ಮೊದಲನೆ ದರ್ಜೆಯಲ್ಲಿ ತೇರ್ಗಡೆಯಾಗಿದ್ದ) ನಾಸಿದ್ದ ವಿಶ್ವವಿದ
ನಿಲಯದಲ್ಲಿ ಎಂ. ಬಿ. ಎ. ತರಗತಿಯಲ್ಲಿ ಓದಲು ಬಂದಿದ್ದನ
ಅವನಿಗೆ ಬಂದೊಡನೆಯೆ ಅವರ ಪ್ರೊಫೆಸರ್ ಟೆಸ್ಟ್ ಕೊಟ್ಟ
ಅವನಿಗೆ ಒಂದು ಸ್ಲೈಡ್ ರೂಲ್ ಕೊಟ್ಟು ಒಂದು ಗಣಿತ
ಸಮಸ್ಯೆಯನ್ನು ಅವನಿಗೆ ಕೊಟ್ಟರು. ಆ ಸಮಸ್ಯೆಗೆ ಕಾಗದ ಮ
ಪೆನ್ಸಿಲ್ ಉಪಯೋಗಿಸದೆ, ಸ್ಲೈಡ್ ರೂಲ್ ಉಪಯೋ
ಉತ್ತರ ಕೊಡಬೇಕು ಎಂದರು. ಅವನಿಗೆ ದಿಕ್ಕು ತೋಚದೆ ತ
ಕಷ್ಟವನ್ನು ಹೇಳಿಕೊಂಡನು. ಆಗ ಒಂದು ವರ್ಷ ಬಿ. ಕಾ
ತರಗತಿಗೆ ಹೋಗಿ ಗಣಿತಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮ
ಕೊಂಡು ಬಾ ಎಂದು ಆತನಿಗೆ ತಿಳಿಸಿದರು.

ಮತ್ತೊಬ್ಬನು ಪೂನಾ ವಿಶ್ವವಿದ್ಯಾನಿಲಯದಲ್ಲಿ ಭೌತಶಾ
ದಲ್ಲಿ ಎಂ.ಎಸ್‌ಸಿ. ಪದವಿ ಪಡೆದು, 3 ವರ್ಷಗಳ ಕಾಲ ಟ್ರಾಂಬೆ
ಅಣು ಶಕ್ತಿ ಉತ್ಪಾದನಾ ಕೇಂದ್ರದಲ್ಲಿ ಕೆಲಸ ಮಾಡಿ ಅನಂ
ಪಿ.ಎಚ್‌ಡಿ. ಡಿಗ್ರಿ ಪಡೆಯಲು ಅಲ್ಲಿಗೆ ಬಂದಿದ್ದನು. ಆತ
ಅವರ ಪ್ರೊಫೆಸರ್‌ರವರು ಹೋದಕೂಡಲೇ ಗಣಕ ಯಂತ್ರಗಳ
ಉಪಯೋಗಿಸಿಕೊಂಡು (ಕಂಪ್ಯೂಟರ್) ಒಂದು ಸಮಸ್ಯೆಗೆ ಉತ್ತ
ತರುವಂತೆ ಒಂದು ಟೆಸ್ಟ್ ಕೊಟ್ಟರು. ಯಥಾಪ್ರಕಾರ ಆತ
ತನ್ನ ಅಜ್ಞಾನವನ್ನು ತೋರ್ಪಡಿಸಿಕೊಂಡಮೇಲೆ ಅವ
ಮೊದಲು ಗಣಕ ಯಂತ್ರಗಳ ವಿಷಯದಲ್ಲಿ ತರಬೇತಿ ಪಡೆದು, ಅ
ತರ ಗಣಿತಶಾಸ್ತ್ರದ ಅಧ್ಯಯನ ಮಾಡುವಂತೆ ಸೂಚಿಸಿದರು. ಅ
ಗಳಲ್ಲಿ ವಿದ್ಯಾರ್ಥಿ ಅರ್ಹತೆ ಪಡೆದರೆ ಅನಂತರ ಮಾಸ್ಟರ್ ತರಗ
ಸೇರಿಸಿಕೊಳ್ಳುವುದಾಗಿ ಹೇಳಿದರು.

ಮೇಲ್ಕಂಡ ಘಟನೆಗಳನ್ನು ವಿಮರ್ಶಿಸಿದರೆ ಇಂಡಿಯಾದ
ದ್ಯಾರ್ಥಿಗಳ ಮೇಲೆ ಎಂತಹ ಪರಿಣಾಮ ಉಂಟಾಗುತ್ತದೆ ಎಂಬು
ನ್ನು ಅರಿಯಬಹುದು. ಯಾವಾಗ ಪಿಎಚ್.ಡಿ. ಪದವಿ ಪಡೆ
ಲು ಹೋದವರು, ಬಿ.ಎ; ಬಿ.ಎಸ್‌ಸಿ; ಬಿ.ಕಾಂ. ತರಗತಿಗಳಲ್ಲಿ
ವಬೇಕಾಗಿ ಬರುತ್ತದೋ ಆಗಲೇ ಅವರಲ್ಲಿ ಒಂದು ವಿಧವಾದ
ಗುಸ್ಸೆ ಆರಂಭವಾಗುತ್ತದೆ. ಕೆಲವರು ತಮಗಾದ ಅವಮಾನ ಸಹಿಸಿ
ಂಡು ಏನೇ ಆದರೂ ಪದವಿ ಪಡೆಯಬೇಕೆಂದು ನಿರ್ಧರಿಸುತ್ತಾರೆ.
ತಹವರು ಒಂದೆರಡು ವರ್ಷ ಪದವಿಪೂರ್ವ ತರಗತಿಗಳಲ್ಲಿ ಓದಿ,
ನಂತರ ಮಾಸ್ಟರ್ ತರಗತಿಯಲ್ಲಿ ಓದಿ, ಕಡೆಗೆ ಪಿಎಚ್.ಡಿ. ತರ
ಗೆ ಬರುತ್ತಾರೆ. ಆರೇಳು ವರ್ಷ ಕಾಲ ಸಾಹಸ ಮಾಡುತ್ತಾರೆ.
ಸಾಕಷ್ಟು ಮನಸ್ಥೈರ್ಯ ಮತ್ತು ಪರಿಶ್ರಮ ಇಲ್ಲದೆ ಇರುವವರು
ಲವು ತಿಂಗಳಿನೊಳಗಾಗಿ ವಾಪಸ್ಸಾಗುತ್ತಾರೆ. ಇವರುಗಳು
ದ್ಯಾರ್ಥಿವೇತನದ ಅವಧಿ (9 ತಿಂಗಳು) ಪೂರ್ತಾ ಇದ್ದು
ನಂತರ ಯಾವ ವಿಧವಾದ ಪದವಿಯನ್ನು ಪಡೆಯದೆ ದೇಶಕ್ಕೆ
ಪಸ್ಸು ಹೋದರೆ ಅವಮಾನವಾಗುತ್ತದೆ ಎಂದು ತಿಳಿದು 3 ತಿಂಗಳು
ವಾ 4 ತಿಂಗಳು ಆದ ಒಡನೆಯೆ ಹೊರಟು ಬರುತ್ತಾರೆ. ಮಧ್ಯ
ಯೇ ಹೊರಟು ಹೋಗುತ್ತೇನೆ ಎಂದರೆ ಅಮೆರಿಕಾದವರು
ಡನೆನ್ನುವುದಿಲ್ಲ. ಆದರೆ ಇವರಿಗೆ ವಿದ್ಯಾರ್ಥಿವೇತನ ನಿಲ್ಲಿಸು
ರೆ. ಇಂತಹವರು ಇಂಡಿಯಾಕ್ಕೆ ವಾಪಸ್ಸು ಬಂದಾಗ
ಗುಂಟಾದ ಅಪಮಾನ ಅಥವಾ ಕಷ್ಟಗಳನ್ನು ಹೇಳಿಕೊಳ್ಳದೆ
ಯಿಲೆ ಬಂದಿತು, ಆದುದರಿಂದ ಅಲ್ಲಿಯ ವಾತಾವರಣ ತಮಗೆ
ಗಲಿಲ್ಲವೆಂದು ಹೇಳಿಕೊಂಡು ಸುಮ್ಮನಿರುತ್ತಾರೆ. ಅಂತಹವರ

ಮನಸ್ಸಿನಲ್ಲಿ ಎಷ್ಟು ಮನೋವ್ಯಥೆ ಉಂಟಾಗಬಹುದು ಎಂಬುದ ವಾಚಕರೇ ಊಹಿಸಬಲ್ಲರೆಂದು ನಾನು ಭಾವಿಸುತ್ತೇನೆ.

ಇನ್ನು ಎರಡನೇ ವರ್ಗದ ಜನರು. ಇಂಡಿಯಾದಲ್ಲಿ ಪಿಎಚ್. ಪದವಿ ಪಡೆದು ಅನಂತರ ಅಲ್ಲಿಯ ವಿಶ್ವವಿದ್ಯಾನಿಲಯಗಳಿಗೆ ಬ ತ್ತಾರೆ. ಇವರುಗಳಲ್ಲಿ ಅನೇಕರು ಅಲ್ಲಿಯ ವಿಶ್ವವಿದ್ಯಾನಿಲಯಗಳ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದೆವೆಂದು ನಮ್ಮಲ್ಲಿ ಹೇಳಿಕೊ ತ್ತಾರೆ. ಆದರೆ ಇವರಲ್ಲಿ ಅನೇಕರಿಗೆ ಬಿ. ಎ. ಬಿ,ಎಸ್‌ಸಿ. ಮ ಬಿ.ಕಾಂ. ತರಗತಿಗಳಿಗೂ ಪಾಠ ಹೇಳಲು ಅವಕಾಶ ಕೊಡುವುದಿ ಎಂಬುದನ್ನು ತಿಳಿದರೆ ವಾಚಕರಿಗೆ ಆಶ್ಚರ್ಯವಾಗಬಹುದ ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಪಾಠ ಹೇಳಬೇಕಾ ಮೊದಲನೆ ಅರ್ಹತೆ ಅಂದರೆ ಅಧ್ಯಾಪಕನು ಅಮೆರಿಕಾದ ಸಂಯು ಸಂಸ್ಥಾನಗಳು ಮತ್ತು ಕೆನಡಾದಲ್ಲಿರುವ ಯಾವುದಾದರೂ ಒಂ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದಿರ ಬೇಕು. ಆ ವಿಶ್ವವಿದ್ಯಾನಿಲಯಗಳಲ್ಲಿ ಪಿಎಚ್. ಡಿ. ಪದ ಪಡೆಯದೆ ಅಧ್ಯಾಪಕನಾಗಿರುವವನು ಇಲ್ಲವೆಂದೇ ಹೇಳಬಹುದ ಕೆಲವು ಸಂದರ್ಭಗಳಲ್ಲಿ ಇನ್ನೂ ಪಿಎಚ್.ಡಿ. ಪದವಿ ಪಡೆಯ ಇದ್ದರೂ, ಪಿಎಚ್.ಡಿ. ಪದವಿಗೆ ಬಹು ಮುಖ್ಯ ಪರೀಕ್ಷೆಯಾ comprehensive (ಸಮಗ್ರ) ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದ ಮಾತ್ರ ಅಂತಹವರನ್ನು ಅಧ್ಯಾಪಕರನ್ನಾಗಿ ನೇಮಿಸುತ್ತಾರೆ. ಆ ಅವರು ಪಿಎಚ್.ಡಿ. ಪದವಿಯನ್ನು ಪಡೆಯುವ ತನಕ Lectur ಆಗಿ ಇರಬೇಕು. ಅನಂತರವೆ ಅವರಿಗೆ ಅಸಿಸ್ಟೆಂಟ್ ಪ್ರೊಫೆಸ ಹುದ್ದೆ ದೊರೆಯುತ್ತದೆ. ಅಮೆರಿಕಾ ದೇಶದವರನ್ನು ಬಿಟ್ಟು, ಬ

ದೇಶದವರನ್ನು ಅಧ್ಯಾಪಕರನ್ನಾಗಿ ನೇಮಿಸಿಕೊಳ್ಳಬೇಕಾದರೆ ಅವರು ವಿಶೇಷ ಪ್ರತಿಭೆಯನ್ನು ತೋರಿಸಿದ್ದು ಹತ್ತಾರು ಪ್ರಸಿದ್ಧ ಗ್ರಂಥಗಳನ್ನು ಪ್ರಕಟಿಸಿದ್ದರೆ ಮಾತ್ರ ನೇಮಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ ಇಲ್ಲ. ಬ್ರಿಟಿಷ್ ವಿಶ್ವವಿದ್ಯಾನಿಲಯಗಳಲ್ಲಿ ಪಿಎಚ್.ಡಿ. ಪದವಿ ಪಡೆದು ಬಂದಿದ್ದರೂ ಅವರನ್ನು ನೇಮಿಸಿಕೊಳ್ಳಬೇಕಾದರೆ ಬಹಳವಾಗಿ ಯೋಚಿಸಿ ಅನಂತರ ನೇಮಿಸಿಕೊಳ್ಳುತ್ತಾರೆ. ಅದರೆ ಅವರಿಗೂ ಮೊದಲು ಪದವಿಪೂರ್ವ ತರಗತಿಗಳಲ್ಲಿ ಪಾಠ ಹೇಳಲು ನೇಮಿಸಿ, ಅನಂತರ ಅವರ ಜ್ಞಾನಾರ್ಜನೆಯನ್ನು ಪರೀಕ್ಷಿಸಿ, ಅಮೆರಿಕನರ ಮನಸ್ಸಿಗೆ ತೃಪ್ತಿಯಾದರೆ ಮಾತ್ರ ಅವರನ್ನು ಸ್ನಾತಕೋತ್ತರ ತರಗತಿಗಳಿಗೆ ಪಾಠ ಹೇಳಲು ನೇಮಿಸುತ್ತಾರೆ. ಇಲ್ಲದಿದ್ದರೆ 9 ತಿಂಗಳ ಕರಾರು ಮುಗಿದ ಮೇಲೆ ವಾಪಸ್ಸು ಕಳುಹಿಸುತ್ತಾರೆ.

ಇಂಡಿಯಾದಿಂದ ಪಿ.ಎಚ್ಡಿ. ಪಡೆದು ಹೋದವರನ್ನು ನೇರವಾಗಿ ಅಧ್ಯಾಪಕರನ್ನಾಗಿ ನೇಮಿಸಿಕೊಳ್ಳುವುದು ಬಹಳ ಅಪರೂಪ. ಇಂಡಿಯಾದಲ್ಲಿರುವಾಗಲೆ ಒಳ್ಳೆ ಹೆಸರು ಸಂಪಾದಿಸಿದ್ದು, ಸುಪ್ರಸಿದ್ಧ ಅಂತರರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಒಳ್ಳೆಯ ಲೇಖನಗಳನ್ನು ಬರೆದಿದ್ದರೆ ಮತ್ತು ಕೆಲವು ಗ್ರಂಥಗಳನ್ನು ಬರೆದಿದ್ದರೆ ಮಾತ್ರ, ಅಂತಹವರನ್ನು 3 ತಿಂಗಳಿಂದ 9 ತಿಂಗಳ ಅವಧಿವರೆಗೆ ಅಧ್ಯಾಪಕರನ್ನಾಗಿ ನೇಮಿಸಿಕೊಳ್ಳುತ್ತಾರೆ. ಇಂತಹ ಅರ್ಹತೆ ಪಡೆದಿರುವವರೂ ಕೂಡ ಕೇವಲ ಪದವಿಪೂರ್ವ ತರಗತಿಗಳಿಗೆ ಪಾಠ ಹೇಳಬೇಕಾಗುತ್ತದೆ.

ಮೇಲೆ ಹೇಳಿದ ಯಾವ ಅರ್ಹತೆಯನ್ನೂ ಪಡೆಯದೆ ಕೇವಲ

ಪಿಎಚ್.ಡಿ. ಪಡೆದು ಹೋದವರಿಗೆ post–Doctoral (ಪಂಡಿತ ಪದವಿ ಪಡೆದ ಮೇಲೆ ಕೊಡುವ) ವಿದ್ಯಾರ್ಥಿವೇತನ ಕೊಡುತ್ತಾರೆ. ಇದು 9 ತಿಂಗಳ ಅವಧಿಯುಳ್ಳದ್ದಾಗಿರುತ್ತೆ. ಈ ಅವಧಿಯಲ್ಲಿ ಇವರುಗಳು ತಾವು ಪ್ರಾವೀಣ್ಯತೆ ಪಡೆದಿರುವ ಯಾವುದಾದರೂ ಒಂದು ಭಾಗದಲ್ಲಿ ಸಂಶೋಧನೆ ನಡೆಸಬೇಕಾಗುತ್ತದೆ. ಸಂಶೋಧನೆ ನಡೆಸುವಾಗ ಇವರು ಎಷ್ಟರಮಟ್ಟಿನ ಪ್ರಗತಿಯನ್ನು ಸಾಧಿಸುತ್ತಾರೆ ಎಂಬುದನ್ನು ಅಲ್ಲಿಯ ಪ್ರೊಫೆಸರ್‌ಗಳು ಸೂಕ್ಷ್ಮವಾಗಿ ಪರಿಶೀಲಿಸುತ್ತಿರುತ್ತಾರೆ. ಜೊತೆಗೆ ಇವರುಗಳನ್ನು ಅಲ್ಲಿ ನಡೆಯುವ ಸೆಮಿನಾರ್ ತರಗತಿಗಳಲ್ಲಿ ಭಾಗವಹಿಸುವಂತೆ ಮಾಡುತ್ತಾರೆ. ಅಲ್ಲಿ ಇವರು ಪ್ರಬಂಧಗಳನ್ನು ಓದಬೇಕಾಗುತ್ತದೆ, ಚರ್ಚೆಗಳಲ್ಲಿ ಭಾಗವಹಿಸಬೇಕಾಗುತ್ತದೆ, ಆಗ ಇವರಿಗಿರುವ ಜ್ಞಾನವನ್ನು ಅಳೆಯುತ್ತಾರೆ. ಸೆಮಿನಾರ್‌ಗಳು ಅಂದರೆ ಅವು ಸಾಮಾನ್ಯವಾಗಿರುವುದಿಲ್ಲ. ಯಾರು ಬೇಕಾದರೂ ಯಾವ ಸಮಸ್ಯೆಯನ್ನು ಬೇಕಾದರೂ ಎತ್ತಬಹುದು. ಅದಕ್ಕೆ ತಕ್ಕ ಉತ್ತರವನ್ನು ಪ್ರಬಂಧ ಬರೆದವರು ನೀಡಬೇಕು. ಯಥಾಪ್ರಕಾರ ಅಲ್ಲಿ ಅಮೇರಿಕನ್ ವಿದ್ಯಾರ್ಥಿಗಳಿಗೆ ಮತ್ತು ಪ್ರೊಫೆಸರ್‌ಗಳಿಗೆ ಗಣಿಶಾಸ್ತ್ರದ ಅರಿವು ಚೆನ್ನಾಗಿರುವುದರಿಂದ ಅವರು ಗಣಿತೋಕ್ತಿಗಳ ರೂಪದಲ್ಲಿ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡುವಂತೆ ತಿಳಿಸುತ್ತಾರೆ. ಇಂಡಿಯಾದ ಅಧ್ಯಾಪಕನಿಗೆ ಗಣಿತಶಾಸ್ತ್ರದ ಜ್ಞಾನ ಉನ್ನತಮಟ್ಟದಲ್ಲಿ ಇರದಿದ್ದರೆ, ಈತನು ನಿರಾಶೆಯಿಂದ ಕುಳಿತುಕೊಂಡು ತನ್ನ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ 3 ಅಥವಾ 4 ತಿಂಗಳಿನೊಳಗಾಗಿ ಇವರ ವಿದ್ಯಾರ್ಹತೆಯು ಅವರಿಗೆ ತಿಳಿದುಬರುತ್ತದೆ. ಏಕೆಂದರೆ 15 ದಿನಗಳಿಗೊಂದು

ಸೆಮಿನಾರ್ ಅಲ್ಲಿ ನಡೆಯುತ್ತದೆ. ಅದರಲ್ಲಿ ಇವರುಗಳು ಭಾಗ ವಹಿಸಲೇಬೇಕಾಗುತ್ತದೆ. ಆದುದರಿಂದ ಸಮಾಜಶಾಸ್ತ್ರಗಳು ಮತ್ತು ಭೌತಶಾಸ್ತ್ರಗಳಲ್ಲಿ ಪಿಎಚ್.ಡಿ. ಪದವಿ ಪಡೆದು ಹೋದರೂ ಅಲ್ಲಿ ನಿರ್ವಹಿಸಲಾರದೆ ಹೋಗುತ್ತಾರೆ. ಆದುದರಿಂದ 9 ತಿಂಗಳಾದ ಮೇಲೆ ಇವರುಗಳನ್ನು ವಾಪಸ್ಸು ಹೋಗಿ ಅನ್ನುತ್ತಾರೆ. ಹಾಗಿಲ್ಲದೆ ಇವರು ಸಾಕಷ್ಟು ಪ್ರತಿಭೆ ತೋರಿಸಿದರೆ, ಮತ್ತೆ 9 ತಿಂಗಳವರೆಗೆ ಇವರಿಗೆ ಕೊಡುವ ವಿಶೇಷ ವಿದ್ಯಾರ್ಥಿವೇತನವನ್ನು ಮುಂದುವರಿಸು ತ್ತಾರೆ. ಹೀಗೆ ಮುಂದುವರೆದರೆ ಕಡೆಯಲ್ಲಿ ಇವರು ಯಾವು ದಾದರೂ ಒಂದು ಗ್ರಂಥಕ್ಕೆ ಸಾಕಾಗುವಷ್ಟು ವಿಷಯಗಳನ್ನು ಸಂಗ್ರಹಿಸಿಕೊಂಡು ಒಂದು ಪುಸ್ತಕವನ್ನು ಪ್ರಕಟಿಸಿಕೊಳ್ಳಬಹುದು. ಮೇಲೆ ವಿವರಿಸಿದ ಸಮಸ್ಯೆಗಳನ್ನು ಇವರು ಅನುಭವಿಸಿದರೂ ಇಂಡಿಯಾಕ್ಕೆ ಬಂದ ಮೇಲೆ ಇವರಲ್ಲಿ ಅನೇಕರು ತಮಗಾದ ಅನು ಭವಗಳನ್ನು ಹೇಳಿಕೊಳ್ಳದೆ ಮರೆಮಾಚಿಕೊಳ್ಳುತ್ತಾರೆ ಬಹಳ ಜನರು ತಾವು ಅಧ್ಯಾಪಕರಾಗಿದ್ದುಕೊಂಡು ಒಳ್ಳೆ ಕೀರ್ತಿ ಪಡೆದೆ ವೆಂದು ಹೇಳಿಕೊಳ್ಳುತ್ತಾರೆ. ಆ ದೇಶದಲ್ಲಿ ಇರುವಾಗ ಇವರು ಅನೇಕ ಸಂದರ್ಭಗಳಲ್ಲಿ ತಮಗಾಗುವ ಅವಮಾನವನ್ನು ಸುಮ್ಮನೆ ಸಹಿಸಿಕೊಳ್ಳಬೇಕಾಗುತ್ತದೆ. ಆ ದೇಶದಲ್ಲಿ ಪಿಎಚ್.ಡಿ. ಪದವಿ ಪಡೆದವನಿಗೆ ಮಾತ್ರ ಅಧ್ಯಾಪಕ ಹುದ್ದೆ ಸಿಗುತ್ತದೆ, ಇವರಿಗೆ ಸಿಗುವುದಿಲ್ಲ. ಒಂದೆರಡು ಸಲ ಸೆಮಿನಾರ್‌ಗಳಲ್ಲಿ ಇವರು ತಮ್ಮ ಪ್ರತಿಭೆ ತೋರಿಸದೆಹೋದರೆ ಅನಂತರ ಇವರನ್ನು ತಾತ್ಸಾರ ಮನೋಭಾವನೆಯಿಂದ ಕಾಣುತ್ತಾರೆ. ಏನೋ ದುಡ್ಡನ್ನು ಸಂಪಾ ದಿಸಿಕೊಳ್ಳಲು ಬಂದಿದ್ದಾರೆ ಎಂದು ನಮ್ಮಗಳನ್ನು ಹಾಸ್ಯ ಮಾಡು

ತ್ತಾರೆ. ಇಂತಹ ಪರಿಸ್ಥಿತಿಯು ನಿಜವಾಗಿಯೂ ನಮ್ಮ ದೇಶಕ್ಕೂ ಮತ್ತು ನಮ್ಮ ವಿಶ್ವವಿದ್ಯಾನಿಲಯಗಳಿಗೂ ಅವಮಾನ ಮಾಡಿ ದಂತಾಗುತ್ತದೆ.

ಮೂರನೆ ವರ್ಗದ ಜನರು ಅಧ್ಯಾಪಕ ವೃತ್ತಿಯನ್ನು ಒಪ್ಪಿ ಕೊಂಡು ಹೋದವರು. ಇಂಡಿಯಾದಿಂದ ಹೋಗುವುದಕ್ಕೆ ಮುನ್ನವೇ ಇವರುಗಳಿಗೆ ಕೆಲವು ಷರತ್ತುಗಳನ್ನು ತಿಳಿಸಿರುತ್ತಾರೆ. ಕೆನಡಾದಲ್ಲಿ ಮತ್ತು ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ (ಕೆಲವು ಹಿಂದುಳಿದಿರುವ ರಾಜ್ಯಗಳಲ್ಲಿ) ಹೈಸ್ಕೂಲುಗಳಿಗೆ ಅಧ್ಯಾಪಕ ರನ್ನು ಹುಡುಕುವುದು ಕಷ್ಟವಾಗುತ್ತದೆ. ಅಲ್ಲಿ ಹೈಸ್ಕೂಲುಗಳಿಗೆ ಅಧ್ಯಾಪಕರಾಗಬೇಕಾದರೆ ಎಂ.ಎ. ಅಥವಾ ಎಂ.ಎಸ್‌ಸಿ. ಪದವಿ ಯನ್ನು ಪಡೆದಿರಲೇಬೇಕು. ಅಲ್ಲಿ ವಿದ್ಯಾರ್ಥಿಗಳು .ಬಹಳ ಜನ ಮಾಸ್ಟರ್ ಪದವಿಗಳನ್ನು ಪಡೆದು ಸುಮ್ಮನಿರುವುದಿಲ್ಲ. ಮುಂದೆ ಪಿಎಚ್.ಡಿ. ಪದವಿ ಪಡೆದರೆ ವಿಶ್ವವಿದ್ಯಾನಿಲಯಗಳಲ್ಲಿ ಒಳ್ಳೆ ಅವ ಕಾಶ ದೊರೆಯುತ್ತದೆ ಎಂದು ಓದಲು ಹೋಗುತ್ತಾರೆ. ಇಲ್ಲದಿದ್ದರೆ ಬ್ಯಾಚುಲರ್ ಪದವಿಯನ್ನು ಪಡೆದು ಮುಂದೆ ಯಾವುದಾದರೂ ಹುದ್ದೆಗೆ ಸೇರಿಕೊಳ್ಳುತ್ತಾರೆ. ಬ್ಯಾಚುಲರ್ ಮತ್ತು ಮಾಸ್ಟರ್ ಪದವಿ ಪಡೆದವರಿಗೆ ಕೈಗಾರಿಕಾ ಸಂಸ್ಥೆಗಳಲ್ಲಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಒಳ್ಳೆ ವೇತನ ದೊರೆಯುವುದರಿಂದ ಅವರುಗಳು ಅಲ್ಲಿಗೆ ಹೊರಟುಹೋಗುತ್ತಾರೆ. ಆದುದರಿಂದ ಕೆಲವು ಸಂದರ್ಭಗಳಲ್ಲಿ ಅಲ್ಲಿ ಹೈಸ್ಕೂಲುಗಳಿಗೆ ಉಪಾಧ್ಯಾಯರನ್ನು ಹುಡುಕುವುದು ಕಷ್ಟ ವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ನಮ್ಮನ್ನು ನೇಮಿಸಿಕೊಳ್ಳು ತ್ತಾರೆ. ನಾವು:.ಅರ್ಜಿ ಬರೆದುಕೊಳ್ಳುವಾಗ ಇಂಡಿಯಾದಲ್ಲಿ

ಯಾವುದಾದರೂ ವಿಶ್ವವಿದ್ಯಾನಿಲಯದಲ್ಲಿ ಅಥವಾ ಕಾಲೇಜಿನಲ್ಲಿ ಕೆಲವಾರು ವರ್ಷ ಅಧ್ಯಾಪಕರಾಗಿ ಕೆಲಸ ಮಾಡಿದ್ದೇವೆ ಎಂದು ಕಾಣಿಸುವುದರಿಂದ ಮತ್ತು ನಮ್ಮ ಕಾಲೇಜಿನ ಆಡಳಿತಾಧಿಕಾರಿಗಳು ಈ ವಿಷಯದಲ್ಲಿ ನಮಗೆ ಸರ್ಟಿಫಿಕೇಟು ಕೊಡುವುದರಿಂದ, ಅವರು ನಮ್ಮನ್ನು ನೇಮಿಸಿಕೊಳ್ಳುತ್ತಾರೆ. ಇಂಡಿಯಾದಲ್ಲಿ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದವನು ನಮ್ಮ ಹೈಸ್ಕೂಲಿನಲ್ಲಿ ಕೆಲಸ ಮಾಡಲಿ ಎಂಬ ಅಭಿಪ್ರಾಯದಿಂದ ಅವರು ನಮ್ಮನ್ನು ನೇಮಿಸಿಕೊಳ್ಳುತ್ತಾರೆ. ಯಥಾಪ್ರಕಾರ 9 ತಿಂಗಳವರೆಗೆ ಇವರನ್ನು ನೇಮಿಸಿಕೊಳ್ಳುತ್ತಾರೆ. ಕೆಲವರು ಮಾತ್ರ ಇಂಡಿಯಾದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದು ಹತ್ತಾರು ವರ್ಷಕಾಲ ಇಲ್ಲಿ ಯಾವುದಾದರೂ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಅಥವಾ ರೀಡರ್ ಸ್ಥಾನದಲ್ಲಿದ್ದರೆ ಅಂತಹ ಸಂದರ್ಭದಲ್ಲಿ $3\frac{1}{2}$ ತಿಂಗಳ ಅವಧಿಯವರೆಗೆ ಇವರಿಗೆ ಒಂದು ಅಧ್ಯಾಪಕ ಹುದ್ದೆ ಕೊಟ್ಟು ಪರೀಕ್ಷಿಸುತ್ತಾರೆ. ಆದರೆ ಇದನ್ನು ಪಡೆಯಬೇಕಾದರೆ ಬಹಳ ಉನ್ನತಮಟ್ಟದಲ್ಲಿ ಶಿಫಾರಸ್ಸು ಆಗಬೇಕು. ಹಾಗಿಲ್ಲದಿದ್ದರೆ ಹತ್ತಾರು ಪ್ರಸಿದ್ಧ ಗ್ರಂಥಗಳನ್ನು ಪ್ರಕಟಿಸಿ ಹೆಸರುವಾಸಿಯಾಗಿರಬೇಕು. ಇವೆರಡೂ ಇಲ್ಲದಿದ್ದರೆ ವಿಶ್ವವಿದ್ಯಾನಿಲಯಗಳಿಗೆ ಅಧ್ಯಾಪಕರಾಗಿ ಹೋಗುವುದು ಬಹಳ ಕಷ್ಟ. ಇವರುಗಳ ಜ್ಞಾನಾರ್ಜನೆಯನ್ನು ಪರೀಕ್ಷಿಸಬೇಕೆಂದು ಅಲ್ಲಿ ಇವರುಗಳಿಗೆ ಮೊದಲು ಪದವಿ ತರಗತಿಗಳಲ್ಲಿ ಪಾಠ ಹೇಳುವಂತೆ ಮಾಡುತ್ತಾರೆ. $3\frac{1}{2}$ ತಿಂಗಳ ಅವಧಿಯಲ್ಲಿ ಇವರ ವಿದ್ಯಾಮಟ್ಟವನ್ನು ಅಳೆಯುತ್ತಾರೆ. ಅಮೆರಿಕನ್ ಪ್ರೊಫೆಸರುಗಳ ಮನಸ್ಸಿಗೆ ಇವರುಗಳ ವಿದ್ಯಾರ್ಹತೆ ವಿಷಯದಲ್ಲಿ

ಒಳ್ಳೆ ಅಭಿಪ್ರಾಯ ಮೂಡಿದರೆ ಇವರು ಇನ್ನೊಂದು ಅವಧಿಗೆ ($3\frac{1}{2}$ ತಿಂಗಳು ಕಾಲ) ಇರಲು ಅವಕಾಶ ಕೊಡುತ್ತಾರೆ. ಇಲ್ಲದಿದ್ದರೆ ಹೋಗಿಬನ್ನಿ ಎನ್ನುತ್ತಾರೆ. ಇವರುಗಳಲ್ಲಿ ಅನೇಕರಿಗೆ visiting lecturer ಎಂದು ಕರೆಯುತ್ತಾರೆ ಅಥವಾ visiting fellow ಎಂದು ಕರೆಯುತ್ತಾರೆ. ಆದರೆ ನಮ್ಮ ದೇಶದಲ್ಲಿ ಇವರುಗಳು visiting professor ಆಗಿ ಹೋಗಿದ್ದೆವೆಂದು ನಮ್ಮಲ್ಲಿ ಹೇಳಿಕೊಳ್ಳುತ್ತಾರೆ.

ನಾವುಗಳಿದ್ದ ಅವಧಿಯಲ್ಲೇ ಇಂಡಿಯಾದ ವಿವಿಧ ವಿಶ್ವವಿದ್ಯಾನಿಲಯಗಳಿಂದ ಬಂದಿದ್ದ 6 ಜನ ಪ್ರಾಧ್ಯಾಪಕರ ಸ್ಥಿತಿಯನ್ನು ನೋಡುವ ಸದವಕಾಶ ನಮಗೆ ಲಭಿಸಿತ್ತು. ಇವರ ಪೈಕಿ ಮೂರು ಜನರು ಮೈಸೂರಿನವರೇ. ಈ ಮೂವರು ಮೈಸೂರಿನವರಿಗೆ ಅಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ಕೊಟ್ಟ ಪುರಸ್ಕಾರವನ್ನು ನೋಡಿದಾಗ ಮನಸ್ಸಿಗೆ ತುಂಬಾ ದುಃಖವಾಗುತ್ತಿತ್ತು. ಒಬ್ಬರಿಗೆ $3\frac{1}{2}$ ತಿಂಗಳ ಅವಧಿಯವರೆಗೆ ಮಾತ್ರ ಒಂದು ಪದವೀ ತರಗತಿಗೆ ಪಾಠಹೇಳಲು ಅವಕಾಶ ಕೊಟ್ಟರು. ಆದರೆ ಅವರು ಪಾಠ ಹೇಳುತ್ತಿದ್ದ ವಿಷಯ ಪರೀಕ್ಷೆಯ ವಿಷಯವಾಗಿರಲಿಲ್ಲ. ಅಲ್ಲಿ ಕೆಲವು ವಿಷಯಗಳನ್ನು Audit ವಿಷಯಗಳೆಂದು ಕರೆಯುತ್ತಾರೆ. ಅಂದರೆ ಆ ಪಾಠ ಹೇಳುವ ಅಧ್ಯಾಪಕನ ತರಗತಿಗೆ ವಿದ್ಯಾರ್ಥಿಗಳು ಸೇರಿಕೊಳ್ಳಬಹುದು. ಆದರೆ ಆ ಅಧ್ಯಾಪಕನು ಹೇಳಿದ ಪಾಠದ ವಿಷಯದಲ್ಲಿ ಪರೀಕ್ಷೆ ತೆಗೆದುಕೊಳ್ಳಬೇಕಾಗಿಲ್ಲ. ಆ ತರಗತಿಯಲ್ಲಿ ಹಾಜರಿದ್ದರೆಂದು ಒಂದು ಸರ್ಟಿಫಿಕೇಟು ಮಾತ್ರ ಕೊಡುತ್ತಾರೆ. ಆದುದರಿಂದ ಬೇಕಾದ ವಿದ್ಯಾರ್ಥಿಗಳು ಅಲ್ಲಿಗೆ ಹೋಗಬಹುದು. ಇಲ್ಲದಿದ್ದರೆ

ಇಲ್ಲ. ಇದರ ಪರಿಣಾಮವಾಗಿ ಆ ಅಧ್ಯಾಪಕರ ತರಗತಿಗೆ 15 ಜನ ವಿದ್ಯಾರ್ಥಿಗಳೂ ಇರಲಿಲ್ಲ. ಅಧ್ಯಾಪಕರು ಮಾತ್ರ $3\frac{1}{2}$ ತಿಂಗಳವರೆಗೆ ಇದ್ದು ಸ್ವಲ್ಪ ಹಣ ಸಂಪಾದನೆ ಮಾಡಿಕೊಂಡು ಅಮೆರಿಕಾದ ಕೆಲವು ಭಾಗಗಳನ್ನು ನೋಡಿಕೊಂಡು ಬಂದರು. ಇವರ ವಿಷಯ ದಲ್ಲಿ ಅಲ್ಲಿಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಮಾತನಾಡು ತ್ತಿದ್ದುದನ್ನು ನೋಡಿ ನಮಗೆ ಬಹಳ ದುಃಖವಾಯಿತು.

ಇನ್ನೊಬ್ಬರು ಮೈಸೂರು ದೇಶದಲ್ಲಿ ಸಾಕಷ್ಟು ಕಾಲ ಉನ್ನತ ಅಧಿಕಾರದಲ್ಲಿದ್ದು ಒಂದು ಅವಧಿಯವರೆಗೆ ಪಾಠ ಹೇಳಲು ಅಲ್ಲಿಗೆ ಬಂದರು. ಅವರಿಗೆ ಅಮೆರಿಕಾದ ಒಂದು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿ ಇದ್ದುದರಿಂದ ಮತ್ತು ಮೈಸೂರಿನಲ್ಲಿ ಒಂದು ಉನ್ನತ ಹುದ್ದೆಯಲ್ಲಿ ಇದ್ದುದರಿಂದ ಸ್ವಲ್ಪ ಒಳ್ಳೆಯ ಸಂಬಳ ಕೊಟ್ಟು ನೇಮಿಸಿಕೊಂಡರು. ಆದರೆ ಯಥಾಪ್ರಕಾರ ಅವರಿಗೆ ಒಂದು ಪದವೀ ತರಗತಿಗೆ ಪಾಠ ಹೇಳುವಂತೆ ಮಾಡಿದರು.

ಮತ್ತೊಬ್ಬರು ಮೈಸೂರು ದೇಶದಲ್ಲಿ ಸಾಕಷ್ಟು ಕಾಲ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದರು. ಆದರೆ ಅವರನ್ನು ಪಾಠ ಹೇಳುವುದಕ್ಕೆ ಬಿಡಲಿಲ್ಲ. ಕೇವಲ ಸಂಶೋಧನೆಯಲ್ಲಿ ಮಾತ್ರ ತೊಡಗಿರುವಂತೆ ಮಾಡಿ ಕೆಲವು ಸೆಮಿನಾರ್ ತರಗತಿಗಳಲ್ಲಿ ಭಾಗವಹಿಸುವಂತೆ ಮಾಡಿದರು.

ಇವರಲ್ಲದೆ ಇಂಡಿಯಾದ ಬೇರೆ ವಿಶ್ವವಿದ್ಯಾನಿಲಯಗಳಿಂದ (ಉತ್ತರ ಇಂಡಿಯಾದವರು) ಬಂದಿದ್ದ ಮೂವರು ಪ್ರಾಧ್ಯಾಪಕರ ಅನುಭವವನ್ನು ಪಡೆಯುವ ಅವಕಾಶ ದೊರೆಯಿತು. ಇವರ ಪೈಕಿ ಇಬ್ಬರು ಬ್ರಿಟಿಷ್ ವಿಶ್ವವಿದ್ಯಾನಿಲಯಗಳ ಡಾಕ್ಟರೇಟ್ ಪದವಿ

ಪಡೆದಿದ್ದರು. ಇವರುಗಳನ್ನು ಅಲ್ಲಿಯ ಪ್ರಯೋಗಾಲಯಗಳಲ್ಲಿ ಕೆಲಸ ಮಾಡುವಂತೆ ಹೇಳಿದರು. ಜೊತೆಗೆ ಒಂದು ಪದವೀ ತರಗತಿಗೆ ಪಾಠ ಹೇಳುವಂತೆ ಮಾಡಿದರು. ಒಬ್ಬರಿಗಾದರೂ ಸ್ನಾತಕೋತ್ತರ ತರಗತಿಯಲ್ಲಿ ಪಾಠ ಹೇಳಲು ಅವಕಾಶ ಕೊಡಲಿಲ್ಲ. ಇವರುಗಳಿಗೆ ಅಲ್ಲಿಯ ಅಧ್ಯಾಪಕವರ್ಗದವರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ನೀಡುತ್ತಿದ್ದ ಗೌರವವನ್ನು ನೋಡಿದರೆ ಬಹಳ ದುಃಖವಾಗುತ್ತಿತ್ತು. ಇವರುಗಳ ನಡವಳಿಕೆಯನ್ನು ನೋಡಿದರೆ ಇವರುಗಳಿಂದ ನಮ್ಮ ದೇಶಕ್ಕೆ ಎಂತಹ ಅಪಮಾನವಾಗುತ್ತಿದೆ ಎಂಬ ಚಿಂತೆ ನಮ್ಮ ಮನಸ್ಸಿನಲ್ಲಿ ಸದಾಕಾಲದಲ್ಲಿಯೂ ಇತ್ತು. ನಾವುಗಳು ವಿದ್ಯಾರ್ಥಿಗಳಾಗಿ ಬಂದು ನಮ್ಮ ದೇಶದ ಗೌರವ ಕಳೆಯುತ್ತಿರುವುದರ ಜೊತೆಗೆ ನಮ್ಮ ಪ್ರಾಧ್ಯಾಪಕರೂ ಕೂಡ ಬಂದು ಇನ್ನಷ್ಟು ಗೌರವ ಕಳೆಯುತ್ತಿದ್ದಾರಲ್ಲಾ ಎಂಬುದನ್ನು ನೆನಸಿಕೊಂಡಾಗಲೆಲ್ಲಾ ಬಹಳ ನೋವಾಗುತ್ತಿತ್ತು.

ಮೇಲ್ಕಂಡ ವಿಷಯಗಳನ್ನು ಓದಿದ ಮೇಲೆ, ಇಂಡಿಯಾದ ಯಾವ ಅಧ್ಯಾಪಕರಿಗೂ ಗೌರವವಿಲ್ಲ ಎಂಬ ನಿರ್ಧಾರಕ್ಕೆ ಬರಬಾರದೆಂದು ವಾಚಕರನ್ನು ಕೇಳಿಕೊಳ್ಳುತ್ತೇನೆ. ಕೆಲವು ಪ್ರಸಿದ್ಧ ವಿದ್ವಾಂಸರುಗಳು ಅಮೆರಿಕಾ ದೇಶದಲ್ಲಿಯೂ ಒಳ್ಳೆಯ ಕೀರ್ತಿ ಪಡೆದಿದ್ದಾರೆ ಮತ್ತು ಗೌರವಿಸಲ್ಪಟ್ಟಿದ್ದಾರೆ. ಉದಾಹರಣೆಗೆ, ದೆಹಲಿ, ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರದ ಪ್ರೊಫೆಸರ್ ಭಗವತಿಯವರಿಗೆ ಅಲ್ಲಿ ಎಲ್ಲಾ ಕಡೆಯೂ ಒಳ್ಳೆಯ ಮನ್ನಣೆ ಇದೆ. ಅದೇ ರೀತಿ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿರುವ ಶ್ರೀ. ಚಂದ್ರಶೇಖರ್‌ರವರಿಗೂ ಒಳ್ಳೆಯ ಗೌರವವಿದೆ.

ಇಂತಹವರ ಸಂಖ್ಯೆ ಕೇವಲ ಹತ್ತಾರು. ಇಂತಹವರು ತಮ್ಮ ಪ್ರತಿಭೆಯನ್ನು ತಾವು ಅಭ್ಯಸಿಸಿರುವ ಶಾಸ್ತ್ರಗಳಲ್ಲಿ ತೋರಿಸಿರುವುದರಿಂದ ಅವರಿಗೆ ಒಳ್ಳೆ ವೇತನಕೊಟ್ಟು ಅಂತಹವರ ಸೇವೆಯನ್ನು ಕಳೆದುಕೊಳ್ಳಬಾರದೆಂದು ಅಮೆರಿಕನರು ಇರಿಸಿಕೊಂಡಿದ್ದಾರೆ. ಇಂತಹವರುಗಳನ್ನು ಬಿಟ್ಟರೆ, ಉಳಿದ ಪ್ರಾಧ್ಯಾಪಕರುಗಳಿಗೆ (ಇಂಡಿಯಾದಿಂದ ಹೋದವರಿಗೆ) ಯಾವ ರೀತಿಯ ಮನ್ನಣೆಯೂ ದೊರೆಯುವುದಿಲ್ಲ. ಅಮೆರಿಕನರಲ್ಲಿ ಮಾತ್ರ ಒಂದು ಭಾವನೆ ಕಂಡು ಬರುತ್ತದೆ. ಪ್ರಪಂಚದಲ್ಲೇ ತಮ್ಮ ದೇಶ ಉನ್ನತ ವಿದ್ಯಾಭ್ಯಾಸ ಮಟ್ಟ ಕಾಪಾಡಿಕೊಂಡು ಬಂದಿರುವಂತೆ ಮತ್ತಾವ ದೇಶವು ಕಾಪಾಡಿಕೊಂಡು ಬಂದಿಲ್ಲ ಎಂಬುದು ಅವರ ಭಾವನೆ. ಆದುದರಿಂದ ಇಂಡಿಯಾದಿಂದ ಹೋದವರು ಸಾಕಷ್ಟು ಜ್ಞಾನಾರ್ಜನೆ ಮತ್ತು ಪರಿಶ್ರಮ ಪಡೆಯದೆ ಇದ್ದರೆ ಅಲ್ಲಿ ಉಂಟಾಗುವ ಅವಮಾನವನ್ನು ಸಹಿಸಿಕೊಳ್ಳಬೇಕಾಗುತ್ತದೆ.

ಹಿಂದಿನ ಪುಟಗಳಲ್ಲಿ ಅಮೆರಿಕಾ ವಿಶ್ವವಿದ್ಯಾನಿಲಯಗಳಿಗೆ ಹೋದರೆ ಹೇಗೆ ನಮ್ಮ ಅಹಂಭಾವನೆ ಹೋಗಿ ನಮ್ಮಲ್ಲಿ ವಿದ್ಯಾಮಟ್ಟ ಹೆಚ್ಚಿಸಿಕೊಳ್ಳಬೇಕೆನ್ನುವ ಹಂಬಲ ಉಂಟಾಗುತ್ತದೆ ಎಂಬುದನ್ನು ವಿವರಿಸಲಾಗಿದೆ. ಇದಲ್ಲದೆ ಇನ್ನೂ ಕೆಲವು ಉತ್ತಮ ಪರಿಣಾಮಗಳು ಇಂಡಿಯಾದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ಮೇಲೆ ಉಂಟಾಗುತ್ತವೆ.

ಅಲ್ಲಿಯ ವಿಶ್ವವಿದ್ಯಾನಿಲಯಗಳ ಆಡಳಿತವರ್ಗ ಮತ್ತು ಪ್ರೊಫೆಸರುಗಳು ನಡೆದುಕೊಳ್ಳುವ ರೀತಿಯನ್ನು ನೋಡಿದರೆ ನಮ್ಮಗಳ ಮೇಲೆ ಮಹತ್ ಪರಿಣಾಮವಾಗುತ್ತದೆ. ಅಲ್ಲಿಯ ವಿಶ್ವವಿದ್ಯಾನಿಲಯ

ಗಳಲ್ಲಿ ಸಾಮಾನ್ಯವಾಗಿ ಹತ್ತು ಸಾವಿರದಿಂದ ಮೂವತ್ತು ಸಾವಿರದ ವರೆಗೂ ವಿದ್ಯಾರ್ಥಿಗಳಿರುತ್ತಾರೆ. ಒಂದೇ ಕಡೆ ಇಷ್ಟು ಜನ ವಿದ್ಯಾರ್ಥಿಗಳು ಓದುತ್ತಾರೆ. ಇಷ್ಟು ವಿದ್ಯಾರ್ಥಿಗಳಿಗೂ ಪಾಠ ಪ್ರವಚನಗಳಿಗೆ ಏರ್ಪಾಡು ಮಾಡುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಮೈಸೂರು ನಗರದಲ್ಲಿರುವ ಎಲ್ಲಾ ಕಾಲೇಜು ಗಳನ್ನು ಮಾನಸಗಂಗೋತ್ರಿಯ ಆವರಣದಲ್ಲಿಯೇ ಸ್ಥಾಪಿಸಿದರೆ ನಮ್ಮ ವಿಶ್ವವಿದ್ಯಾನಿಲಯವು ಅಲ್ಲಿಯ ಹಾಗೆ ಆಗುತ್ತದೆ. ಅದೇ ರೀತಿ ಬೆಂಗಳೂರಿನ ಎಲ್ಲಾ ಕಾಲೇಜುಗಳನ್ನು ಒಂದೇ ಆವರಣದಲ್ಲಿ ಸ್ಥಾಪಿಸಿದರೆ ಅಲ್ಲಿಯ ವಿಶ್ವವಿದ್ಯಾನಿಲಯದ ಹಾಗೇ ಆಗುತ್ತದೆ. ಆದುದರಿಂದ ಅಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಬಿ.ಎ., ಬಿ.ಎಸ್‌ಸಿ., ಬಿ.ಕಾಂ., ಬಿ.ಇ., ಎಂ.ಎ., ಎಂ.ಎಸ್.ಸಿ., ಎಂ.ಬಿ.ಎ., ಮತ್ತು ಪಿ.ಎಚ್‌ಡಿ. ತರಗತಿಗಳು ಇಷ್ಟಕ್ಕೂ ವೇಳಾಪಟ್ಟಿಯನ್ನು ಮಾಡ ಬೇಕು, ಅಧ್ಯಾಪಕರನ್ನು ನೇಮಿಸಬೇಕು, ಕೊಠಡಿಗಳನ್ನು ನಿಗದಿ ಮಾಡಬೇಕು ಮತ್ತು ಗದ್ದಲವಿಲ್ಲದೆ ಪಾಠಗಳು ನಡೆಯುವಂತೆ ಮಾಡಬೇಕು. ಜೊತೆಗೆ ನಮ್ಮಲ್ಲಿರುವ ಹಾಗೆ ಒಂದು ಸಲ ವೇಳಾಪಟ್ಟಿ ಮಾಡಿದರೆ ಒಂದು ವರ್ಷದವರೆಗೆ ಅದೇ ಇರುವುದಿಲ್ಲ. ಪ್ರತಿ $3\frac{1}{2}$ ತಿಂಗಳಿಗೊಮ್ಮೆ ಅಥವಾ 4 ತಿಂಗಳಿಗೊಮ್ಮೆ ಅವು ಪೂರ್ಣ ವಾಗಿ ಬದಲಾಗುತ್ತವೆ. ಇಷ್ಟನ್ನೂ ಒಬ್ಬ ರಿಜಿಸ್ಟ್ರಾರ್‌ರವರು ಮತ್ತು ಒಬ್ಬ ಅಥವ ಇಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ನಿರ್ವ ಹಿಸುತ್ತಾರೆ. ಒಂದು ಸಲ ವೇಳಾಪಟ್ಟಿ ಮಾಡಿದಮೇಲೆ ಅದರಲ್ಲಿ ಬದಲಾವಣೆ ಅನ್ನುವ ಮಾತೇ ಇಲ್ಲ. ಒಂದೇ ರೂಮಿ ನಲ್ಲಿ 2 ತರಗತಿಗಳು ಸೇರುವಂತೆ ಮಾಡಿ ಘರ್ಷಣೆಗೂ ಅವಕಾಶ

ರುವುದಿಲ್ಲ. ಸೆಪ್ಟಂಬರ್ ಸೆಮಿಸ್ಟರ್ ತಿಂಗಳಿನಲ್ಲಿ ಮೊದಲನೆ
ಥವಾ ಕ್ವಾರ್ಟರ್ ಪಾಠಗಳು ನಡೆಯಬೇಕಾದರೆ ಅದರ ಬಾಬ್ತು
ೇಳಾಪಟ್ಟಿ, ಅಧ್ಯಾಪಕವರ್ಗ, ಕೊಠಡಿಗಳ ವಿವರ ಎಲ್ಲಾ
ಜೂನ್ ತಿಂಗಳಿನಲ್ಲೇ ಸಿದ್ಧವಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ
ಮತ್ತು ಅಧ್ಯಾಪಕನಿಗೂ ಆ ವಿಶ್ವವಿದ್ಯಾನಿಲಯದ ಸಮಗ್ರ
ೇಳಾಪಟ್ಟಿಯನ್ನು 3 ತಿಂಗಳ ಮುಂಚೆಯೆ ಕೊಟ್ಟಿರುತ್ತಾರೆ.
ದು ಒಂದು ಪುಸ್ತಕದ ರೂಪದಲ್ಲಿರುತ್ತದೆ. ಪ್ರತಿ ವಿದ್ಯಾರ್ಥಿಯೂ
ತಾನು ತೆಗೆದುಕೊಳ್ಳಬೇಕಾದ ಪಾಠಗಳನ್ನು ಮೂರು ತಿಂಗಳ
ಮುಂಚೆಯೇ ತಿಳಿದುಕೊಂಡು ಸಿದ್ಧನಾಗಿರಬಹುದು. ಆತನು
ದ್ಯಾರ್ಥಿಯಾಗಿದ್ದುಕೊಂಡು ಬೇರೆ ಕಡೆ ಕೆಲಸ ಮಾಡಲು ಇದು
ಹಳ ಸಹಾಯಕವಾಗಿರುತ್ತದೆ. ಆ ಉದ್ದೇಶದಿಂದಲೇ ಅವರು
ಈ ರೀತಿ ಏರ್ಪಾಡು ಮಾಡಿದ್ದಾರೆ. ಆದರೆ ಅಲ್ಲಿ ಒಂದು ಅನು
ಕೂಲವಿದೆ. ಬೆಳಿಗ್ಗೆ 8 ಘಂಟೆಗೆ ವಿಶ್ವವಿದ್ಯಾನಿಲಯಗಳು ಕೆಲಸ
ಮಾಡಲು ಆರಂಭಿಸಿದರೆ ರಾತ್ರಿ 10½ ಘಂಟೆಯವರೆಗೂ ಕೆಲಸ
ಮಾಡುತ್ತವೆ. ಆದುದರಿಂದ ಬೆಳಗಿನ ಹೊತ್ತು ಕೆಲಸ ಮಾಡಲು
ಏರ್ಪಾಡು ಮಾಡಿಕೊಂಡಿರುವ ವಿದ್ಯಾರ್ಥಿಗಳು ಮಧ್ಯಾಹ್ನ
ಮತ್ತು ರಾತ್ರಿಯವೇಳೆ ನಡೆಯುವ ತರಗತಿಗಳನ್ನು ಚುನಾಯಿಸಿ
ಕೊಂಡು ಹೋಗಬಹುದು. ರಾತ್ರಿಯವೇಳೆ ಕೆಲಸ ಮಾಡುವ
ದ್ಯಾರ್ಥಿಗಳು ಬೆಳಗಿನ ತರಗತಿಗಳನ್ನು ಚುನಾಯಿಸಿಕೊಂಡು
ಹೋಗಬಹುದು. ನಮ್ಮಲ್ಲಿರುವ ಹಾಗೆ ವಿದ್ಯಾರ್ಥಿಗಳ
ಗದ್ದಲ ಎನ್ನುವ ಮಾತೇ ಇರುವುದಿಲ್ಲ. ಪಕ್ಕದಲ್ಲಿ ತರಗತಿ
ಡೆಯುತ್ತಿದ್ದರೆ ಇನ್ನೊಬ್ಬ ವಿದ್ಯಾರ್ಥಿ ರೂಮಿನ ಹತ್ತಿರ ನಿಂತು

ಕೊಂಡು ಮಾತೂ ಕೂಡ ಆಡುವುದಿಲ್ಲ. ಒಂದು ಕಟ್ಟಡದ ಎರಡು ಸಾವಿರ ವಿದ್ಯಾರ್ಥಿಗಳು ಬೇರೆ-ಬೇರೆ ತರಗತಿಗಳಲ್ಲಿದ್ದ ಸ್ವಲ್ಪವೂ ಶಬ್ದವಿರುವುದಿಲ್ಲ. ನೋಡಿದವರಿಗೆ ತರಗತಿಗಳು ನಡೆ ತ್ತಿವೆ ಎಂಬುದು ಕೂಡ ಗೊತ್ತಾಗುವುದಿಲ್ಲ. ಒಂದು ಘಂಟೆಯ ಮೇಲೆ ಗಂಟೆ ಬಾರಿಸಿದಾಗ ಮಾತ್ರ ಒಂದು ಕೊಠಡಿಯಿ ಮತ್ತೊಂದು ಕೊಠಡಿಗೆ ವಿದ್ಯಾರ್ಥಿಗಳು ಹೋಗುವಾಗ ತರಗತಿ ನಡೆಯುತ್ತಿವೆ ಎಂಬುದು ಗೊತ್ತಾಗುತ್ತದೆ. ಇಷ್ಟೆಲ್ಲವನ ನೋಡಿದಾಗ ವಿದ್ಯಾರ್ಥಿಗಳಲ್ಲಿರುವ ಶಿಸ್ತು ಮತ್ತು ಆಡಳಿತವಗ ದಕ್ಷತೆಯ ಅರಿವು ನಮಗೆ ಉಂಟಾಗುತ್ತದೆ.

ಅಧ್ಯಾಪಕವರ್ಗದವರು ನಡೆದುಕೊಳ್ಳುವ ರೀತಿಯಂತೂ ಬ ಮೆಚ್ಚುವಂತಹದ್ದು. ಆ ವಿಶ್ವವಿದ್ಯಾನಿಲಯಗಳಲ್ಲಿ ಕ್ಯಾ ಯಲ್ ರಜ ಎಂಬ ಹೆಸರೇ ಇಲ್ಲ. ಪ್ರತಿಯೊಬ್ಬ ಅಧ್ಯಾಪಕ ತನಗೆ ನಿಗದಿ ಮಾಡಿರುವ ವೇಳೆಯಲ್ಲಿ ಒಂದು ದಿನವೂ ತ ತನ್ನ ತರಗತಿಗಳನ್ನು ನಡೆಸುತ್ತಾನೆ. ಅಧ್ಯಾಪಕರು ಈ ದಿನ ಲಿಲ್ಲ, ಆದುದರಿಂದ ಪಾಠ ನಡೆಯುವುದಿಲ್ಲ ಎನ್ನುವ ಮಾತೆ ಇ ಅಥವಾ ಅಧ್ಯಾಪಕರು ಹತ್ತು ನಿಮಿಷ ಹೊತ್ತಾಗಿ ಬಂದರು ಅನ ಮಾತೂ ಇಲ್ಲ. ಅಧ್ಯಾಪಕರು ಬಂದರೆ ಅಥವಾ ಇಲ್ಲವೆ ಎಂಬುದ ಪರೀಕ್ಷಿಸಲು ಯಾವ ಅಧಿಕಾರಿಯೂ ಇಲ್ಲ. ಏಕೆಂದರೆ ಅಲ್ಲಿ ಪ್ರಿ ಪಾಲರುಗಳೂ ಇರುವುದಿಲ್ಲ ಅಥವಾ ಇತರ ಅಧಿಕಾರಿಗಳೂ ಇರ ದಿಲ್ಲ. ಆದರೆ ಅಧ್ಯಾಪಕರು ತಮ್ಮ ಕರ್ತವ್ಯವನ್ನು ಚಾ ತಪ್ಪದೆ ನಿರ್ವಹಿಸುತ್ತಾರೆ. ಒಂದು ದಿನ ತಮಗೆ ವಹಿಸಿರುವ ಕೆ ವನ್ನು ನಿರ್ವಹಿಸದೆ ಹೋದರೆ ಅದು ದ್ರೋಹ ಮಾಡಿದಂತೆ ಎಂ

ಅವರ ಮನೋಧರ್ಮ. ಅಲ್ಲಿಯ ಅಧ್ಯಾಪಕರುಗಳನ್ನೆಲ್ಲಾ ಸಾಮಾನ್ಯವಾಗಿ 9 ತಿಂಗಳ ಕರಾರಿನ ಮೇಲೆ ಅಥವಾ 3 ವರ್ಷದ ಕರಾರಿನ ಮೇಲೆ ಅಥವಾ 5 ವರ್ಷದ ಕರಾರಿನ ಮೇಲೆ ನೇಮಿಸಿರುತ್ತಾರೆ. 3 ವರ್ಷ ಅಥವಾ 5 ವರ್ಷ ಕರಾರಿನ ಮೇಲೆ ನೇಮಿಸುವ ಅಧ್ಯಾಪಕರುಗಳ ಸಂಖ್ಯೆ ಬಹಳ ಕಡಮೆ. 9 ತಿಂಗಳ ಕರಾರಿನ ಮೇಲೆ ನೇಮಿಸುವ ಅಧ್ಯಾಪಕರುಗಳ ಸಂಖ್ಯೆಯೇ ಬಹಳ ಹೆಚ್ಚು. ಹೆಸರು ವಾಸಿ ಪಡೆದಿರುವ ಮತ್ತು ಸುಪ್ರಸಿದ್ಧ ಪ್ರೊಫೆಸರ್‌ರವರುಗಳು ತಮ್ಮ ವಿಶ್ವವಿದ್ಯಾನಿಲಯವನ್ನು ಬಿಟ್ಟು ಬೇರೆ ಕಡೆಗೆ ಹೊರಟುಹೋಗುತ್ತಾರೆ ಎಂಬುದನ್ನು ತಿಳಿದು, ವಿಶ್ವವಿದ್ಯಾನಿಲಯವು ಅಂತಹವರನ್ನು ತನ್ನಲ್ಲಿಯೆ ಇರಿಸಿಕೊಳ್ಳಲು ಅವರಿಗೆ ಮಾತ್ರ 5 ವರ್ಷ ಮತ್ತು 3 ವರ್ಷ ಕರಾರಿನ ಸೌಲಭ್ಯ ಒದಗಿಸುತ್ತದೆ. ನಮ್ಮ ಹಾಗೆ ವರ್ಷದ ಮಧ್ಯದಲ್ಲಿ ಒಂದು ದಿನವೂ ಯಾರೂ ರಜಾ ತೆಗೆದುಕೊಳ್ಳುವಹಾಗಿಲ್ಲ. ಬೇಸಿಗೆಯಲ್ಲಿ ಮಾತ್ರ ರಜಾ ತೆಗೆದುಕೊಳ್ಳಬಹುದು. 9 ತಿಂಗಳ ಅವಧಿಯಲ್ಲಿ ಅಧ್ಯಾಪಕನಿಗೆ ವಹಿಸಿರುವ ಪಾಠ ಮಾಡಲೇಬೇಕು. ಏನೋ ಆಕಸ್ಮಾತ್ ಅಪಘಾತಕ್ಕೀಡಾಗಿ ಆಸ್ಪತ್ರೆ ಸೇರಿದರೆ ಮಾತ್ರ ಆತನಿಗೆ ರಜಾ ಕೊಡುತ್ತಾರೆ. ಇಲ್ಲದಿದ್ದರೆ ರಜ ಎನ್ನುವ ಹೆಸರೇ ಇಲ್ಲ.

ಅಧ್ಯಾಪಕವರ್ಗದಲ್ಲಿ ಸಾಮಾನ್ಯವಾಗಿ ಈ ಕೆಳಗೆ ಕಂಡಂತೆ ವಿವಿಧ ಸ್ಥಾನಗಳಿರುತ್ತವೆ: (1) ಲೆಕ್ಚರರ್, (2) ಅಸಿಸ್ಟೆಂಟ್ ಪ್ರೊಫೆಸರ್ (3) ಅಸೋಸಿಯೇಟ್ ಪ್ರೊಫೆಸರ್, ಮತ್ತು (4) ಪ್ರೊಫೆಸರ್. ಯಾವ ವರ್ಗಕ್ಕೆ ಸೇರಿರಲಿ ಎಲ್ಲರಿಗೂ ಸಮಾನವಾದ ಗೌರವ. ಏಕೆಂದರೆ ಎಲ್ಲರೂ ಡಾಕ್ಟರೇಟ್ ಪದವಿಯನ್ನು ಪಡೆ

ದಿರುತ್ತಾರೆ. ಅಸೋಸಿಯೇಟ್ ಪ್ರೊಫೆಸರ್ ಮತ್ತು ಪ್ರೊಫೆಸರ್ ಹುದ್ದೆಗಳು ಪಿ.ಎಚ್‌ಡಿ. ಪದವಿ ಪಡೆದ ಒಡನೆಯೆ ಸಿಗುವುದಿಲ್ಲ. ಹತ್ತಾರು ಪುಸ್ತಕಗಳನ್ನು ಬರೆದಿದ್ದು ಹತ್ತಾರು ವರ್ಷ ಅಧ್ಯಾಪಕ ನಾಗಿ ಸೇವೆ ಮಾಡಿದ್ದರೆ ಮಾತ್ರ ಅಸೋಸಿಯೇಟ್ ಮತ್ತು ಪ್ರೊಫೆಸರ್ ಹುದ್ದೆಗಳು ದೊರೆಯುತ್ತವೆ. ಯುವಕರಿಗೆ ಅಸೋಸಿ ಯೇಟ್ ಪ್ರೊಫೆಸರ್ ಹುದ್ದೆ ದೊರೆಯಬೇಕಾದರೆ ಬಹಳ ಪ್ರತಿಭಾ ಶಾಲಿಯಾಗಿರಬೇಕು. ಅವರು ಸಾಕಷ್ಟು ಗ್ರಂಥಗಳನ್ನು ರಚಿಸಿದ್ದರೆ ಮಾತ್ರ ಅವರು ಆ ಹುದ್ದೆಗೆ ಬರಬಲ್ಲರು. ಇಲ್ಲದಿದ್ದರೆ ಬರಲಾಗು ವುದಿಲ್ಲ.

ಎಲ್ಲಾ ಅಧ್ಯಾಪಕವರ್ಗದವರು ಪದವಿಪೂರ್ವ ಮತ್ತು ಸ್ನಾತ ಕೋತ್ತರ ತರಗತಿಗಳನ್ನು ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿರುವ ಹಾಗೆ ಕೆಲವರು ಮಾತ್ರ ಸ್ನಾತಕೋತ್ತರ ತರಗತಿಗಳನ್ನು ತೆಗೆದು ಕೊಳ್ಳಬೇಕು, ಉಳಿದವರು ಪದವಿಪೂರ್ವ ತರಗತಿಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂಬ ನಿಯಮವಿಲ್ಲ. ಅಲ್ಲಿ ಪ್ರತಿಯೊಂದು ಇಲಾಖೆಯಲ್ಲೂ ನಾಲ್ಕಾರು ಜನ ಪ್ರೊಫೆಸರುಗಳು, ಕೆಲವು ಅಸೋ ಸಿಯೇಟ್ ಪ್ರೊಫೆಸರುಗಳು ಮತ್ತು ಇತರರು ಇರುತ್ತಾರೆ. ಪ್ರೊಫೆ ಸರುಗಳೆಲ್ಲರೂ ಪದವಿಪೂರ್ವ ತರಗತಿ ಒಂದನ್ನು (ವಾರಕ್ಕೆ ನಾಲ್ಕು ಘಂಟೆಗಳ ಕಾಲ) ಮತ್ತು ಸ್ನಾತಕೋತ್ತರ ತರಗತಿಯನ್ನು (ವಾರಕ್ಕೆ ನಾಲ್ಕು ಘಂಟೆಗಳ ಕಾಲ) ತೆಗೆದುಕೊಳ್ಳುತ್ತಾರೆ ಪ್ರೊಫೆಸರುಗಳಿಗೆ ಮತ್ತು ಅಸೋಸಿಯೇಟ್ ಪ್ರೊಫೆಸರುಗಳಿಗೆ ಪದವಿಪೂರ್ವ ತರಗತಿ ಗಳನ್ನು ತೆಗೆದುಕೊಳ್ಳುವುದು ಅಂದರೆ ಒಂದು ಹೆಮ್ಮೆಯ ವಿಷಯ. ಏಕೆಂದರೆ ಪದವಿಪೂರ್ವ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಇನ್ನೂ

ವಿಷಯದ ಪೂರ್ಣ ಅರಿವು ಇಲ್ಲದಿರುವುದರಿಂದ ನೂರಾರು ಕುತೂಹಲಕಾರಿ ಪ್ರಶ್ನೆಗಳನ್ನು ಹಾಕುತ್ತಾರೆ. ಆದುದರಿಂದ ಆ ತರಗತಿಗಳಿಗೆ ಪಾಠ ಮಾಡುವುದರಿಂದ ತಮ್ಮ ಜ್ಞಾನಾಭಿವೃದ್ಧಿಗೆ ಸಹಾಯವಾಗಿ ತಮ್ಮ ಪುಸ್ತಕಗಳನ್ನು ಬರೆಯುವಾಗ ಮತ್ತಷ್ಟು ಸ್ಪಷ್ಟವಾಗಿ ಬರೆಯಬಹುದು ಎಂಬುದು ಅವರ ಅಭಿಪ್ರಾಯ. ನಾನು ಉದ್ದೇಶಪೂರ್ವಕವಾಗಿ ಕೆಲವು ಪ್ರೊಫೆಸರುಗಳಿಗೆ ಏತಕ್ಕೆ ನೀವು ಪದವಿಪೂರ್ವ ತರಗತಿಗಳಿಗೆ ಪಾಠ ತೆಗೆದುಕೊಳ್ಳುತ್ತೀರಿ ಎಂದು ಪ್ರಶ್ನೆ ಹಾಕಿದೆ. ಏಕೆಂದರೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ತೀರಾ ವ್ಯತಿರಿಕ್ತವಾದ ಮನೋಭಾವನೆ ಕಾಣುತ್ತೇವೆ. ಇಂಡಿಯಾದಲ್ಲಿ ನಮ್ಮ ಪ್ರೊಫೆಸರುಗಳಿಗೆ ಮತ್ತು ರೀಡರುಗಳಿಗೆ ಪದವಿಪೂರ್ವ ತರಗತಿಗಳನ್ನು ತೆಗೆದುಕೊಳ್ಳುವುದು ಅಂದರೆ ಏನೋ ಒಂದು ತರಹ ಬೇಸರ. ಅನೇಕರು ತಮ್ಮ ಸ್ಥಾನಕ್ಕೆ ಗೌರವ ತರುವುದಿಲ್ಲ ಎಂದೂ ಕೂಡ ಭಾವಿಸುತ್ತಾರೆ. ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಅನೇಕರು ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಇದ್ದು ಅಲ್ಲಿ ಪದವಿ ಪಡೆದು ಅಲ್ಲಿಯ ಪದ್ಧತಿ ನೋಡಿ ಬಂದಿದ್ದಾರೆ. ಆದರೂ ಇಂಡಿಯಾಕ್ಕೆ ಬಂದಮೇಲೆ ಏಕೆ ಈ ರೀತಿ ವರ್ತಿಸುತ್ತಾರೆ ಎಂಬುದು ನಮಗೆ ತಿಳಿಯುವುದಿಲ್ಲ. ಆ ದೇಶದಲ್ಲಿ ವಿಶ್ವವಿಖ್ಯಾತಿ ಪಡೆದಿರುವ ಪ್ರೊಫೆಸರುಗಳು ಕೂಡ ಪದವಿಪೂರ್ವ ತರಗತಿಗಳಿಗೆ ಪಾಠ ಹೇಳುವುದು ನೋಡಿ ನಮ್ಮ ಪ್ರೊಫೆಸರುಗಳೊಂದಿಗೆ ಹೋಲಿಸಿದರೆ ನಮಗೆ ಪರಮಾಶ್ಚರ್ಯವಾಗುತ್ತದೆ. ಉದಾಹರಣೆಗೆ ಪ್ರಪಂಚದಲ್ಲೇ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರೆಂದು ಹೆಸರು ಪಡೆದು ವಿಶ್ವವಿಖ್ಯಾತ ವಿಶ್ವವಿದ್ಯಾನಿಲಯಗಳಾದ ಚಿಕಾಗೋ ಮತ್ತು M. I. T. ಗಳಲ್ಲಿರುವ

ಪ್ರೊಫೆಸರುಗಳಾದ ಫ್ರೀಡ್‌ಮನ್‌ರವರು ಮತ್ತು ಸ್ಯಾಮುಯಲ್ ಸನ್‌ರವರು ಪದವಿಪೂರ್ವ ತರಗತಿಗಳಿಗೆ ತಪ್ಪದೆ ಪಾಠ ಹೇಳುತ್ತಾರೆ. ನೊಬೆಲ್ ಪ್ರಶಸ್ತಿ ವಿಜೇತ ಸ್ಯಾಮುಯಲ್‌ಸನ್‌ರವರು ಮೊದಲ ನೆಯ ಬಿ. ಎ. ತರಗತಿಗೆ ಪುಸ್ತಕ ಬರೆದಿದ್ದಾರೆ. ಇಂಗ್ಲಿಷ್‌ಭಾಷೆ ಯಲ್ಲಿ ಬೋಧನ ಮಾಡುವ ದೇಶಗಳಲ್ಲಿ ಅಲ್ಲದೆ ಬೇರೆ ದೇಶಗಳಲ್ಲೂ ಅವರ ಪುಸ್ತಕವನ್ನು ಪಠ್ಯಪುಸ್ತಕವನ್ನಾಗಿ ಇಟ್ಟಿದ್ದಾರೆ. ಚೈನಾ, ಫ್ರೆಂಚ್, ಜಪಾನ್ ಮತ್ತು ಸ್ಪ್ಯಾನಿಷ್ ಭಾಷೆಗಳಿಗೆ ಆ ಪುಸ್ತಕವನ್ನು ತರ್ಜುಮೆ ಮಾಡಿ ಚೈನಾ, ಫ್ರಾನ್ಸ್, ಜಪಾನ್ ಮತ್ತು ದಕ್ಷಿಣ ಅಮೆರಿಕದ ದೇಶಗಳಲ್ಲಿ ಉಪಯೋಗಿಸುತ್ತಾರೆ. ಇಂತಹ ಹೆಸರು ವಾಸಿಯಾದ ಪುಸ್ತಕ ಬರೆದಿರುವವರು ಪದವಿಪೂರ್ವ ತರಗತಿಗಳಿಗೆ ಪಾಠ ಹೇಳುತ್ತಾರೆ. ಇದನ್ನು ನೋಡಿ ನಮ್ಮ ದೇಶದಲ್ಲಿನ ಸ್ಥಿತಿಗತಿ ಗಳಿಗೆ ಹೋಲಿಸಿದರೆ ಬಹಳ ದುಃಖವಾಗುತ್ತದೆ.

ಅಸಿಸ್ಟೆಂಟ್ ಪ್ರೊಫೆಸರುಗಳು ಮತ್ತು ಲೆಕ್ಚರರ್‌ಗಳೂ ಸ್ನಾತ ಕೋತ್ತರ ತರಗತಿಗಳಿಗೆ ಪಾಠ ಹೇಳುವಂತೆ ಅವರು ಪ್ರೋತ್ಸಾ ಹಿಸುತ್ತಾರೆ. ಅವರ ಮುಖ್ಯ ಉದ್ದೇಶ ಏನೆಂದರೆ ಈಗಿನ ಕಾಲದಲ್ಲಿ ಪ್ರತಿಯೊಂದು ವಿಜ್ಞಾನಶಾಸ್ತ್ರದಲ್ಲೂ ವಿಪರೀತ ಬೆಳವಣಿಗೆಯಾಗಿದೆ. ಆದುದರಿಂದ ಪ್ರತಿಯೊಬ್ಬ ಅಧ್ಯಾಪಕನು ಆ ಶಾಸ್ತ್ರದ ಒಂದು ಭಾಗದಲ್ಲಿಯಾದರೂ ವಿಶೇಷ, ಪರಿಶ್ರಮ ಪಡೆದರೆ ಒಳ್ಳೆಯದಾಗು ತ್ತದೆ ಎಂದು. ವಾರಕ್ಕೆ ಎಷ್ಟು ಘಂಟೆಗಳ ಕಾಲ ಪಾಠ ತೆಗೆದುಕೊಳ್ಳ ಬೇಕು ಎಂಬುದರಲ್ಲಿ ಕೂಡ ತಾರತಮ್ಯವಿಲ್ಲ. ಎಲ್ಲಾ ವರ್ಗದ ಅಧ್ಯಾಪಕವರ್ಗದವರು ವಾರಕ್ಕೆ ಎಂಟು ಘಂಟೆಗಳ ಕಾಲ ಪಾಠ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಮಾತ್ರ ಕೆಲವರು 6 ಘಂಟೆಗಳ ಮಾತ್ರ ಪಾಠ ಮಾಡುತ್ತಾರೆ. ನಮ್ಮ ಹಾಗೆ ಲೆಕ್ಚರರುಗಳು 14ರಿಂದ

ಘಂಟೆಗಳು, ರೀಡರುಗಳು 10ರಿಂದ 12 ಘಂಟೆಗಳು ಪ್ರೊಫೆಸರು 6ರಿಂದ 8 ಘಂಟೆಯವರೆಗೆ ಮಾಡಬೇಕೆಂಬ ತಾರತಮ್ಯವೇ . ತಾರತಮ್ಯವಿರುವುದು ಆ ದೇಶದಲ್ಲಿ ಸಂಬಳ ಕೊಡುವುದರಲ್ಲಿ ತ್ರ, ಪಾಠ ಮಾಡುವುದರಲ್ಲಿ ಇಲ್ಲ. ನಾವು 14ರಿಂದ 16 ಟೆಗಳ ಕಾಲ ಪಾಠ ಮಾಡುತ್ತೇವೆ ಅಂದರೆ ಅವರು ನಮ್ಮನ್ನು ಶ್ಚ ಮಾಡುತ್ತಾರೆ. ಜೊತೆಗೆ ಪ್ರೊಫೆಸರುಗಳು, ಅಸೋಸಿಯೇಟ್ ಫೆಸರುಗಳು, ಅಸಿಸ್ಟೆಂಟ್ ಪ್ರೊಫೆಸರುಗಳು ಎಲ್ಲರೂ ಚ್.ಡಿ; ವಿದ್ಯಾರ್ಥಿಗಳಿಗೆ ಪ್ರಬಂಧ ಬರೆಯುವಾಗ ಸಲಹೆ ಡುತ್ತಿರುತ್ತಾರೆ. ಆದರೆ ಅವರಿಗೆ ಸಲಹೆ ಕೊಡುತ್ತಿದ್ದೇವೆ, ದರಿಂದ ನಮಗೆ ಕೆಲಸ ಹೆಚ್ಚು ಎಂದು ಯಾರು ಪಾಠ ಹೇಳು ರಲ್ಲಿ ಕಡಮೆ ಮಾಡಿಕೊಳ್ಳುವಂತಿಲ್ಲ. 8 ಘಂಟೆಗಳ ಕಾಲ ದು ವಾರಕ್ಕೆ) ಪಾಠ ಮಾಡಬೇಕು. ಅದೇ ರೀತಿ ಬೆಳಗಿನ ಂಟೆಯಲ್ಲಿ ಪಾಠ ಇರುತ್ತದೆ ಮತ್ತೆ ರಾತ್ರಿ 7 ಘಂಟೆಯಲ್ಲಿ ಠ ಇರುತ್ತದೆ. ಯಾವ ಪ್ರೊಫೆಸರೂ ಮರುಮಾತಾಡದೆ ತಿಗೆ ಬರುತ್ತಾರೆ. ರಿಜಿಸ್ಟ್ರಾರ್‌ರವರು ವೇಳಾಪಟ್ಟಿಯಲ್ಲಿ ರ್ಶಿಸಿದ ಮೇಲೆ ಆಯಿತು. ಬೇರೆ ಮಾತೇ ಇಲ್ಲ.

ತಮಗೆ ಪಾಠವಿರಲಿ, ಇಲ್ಲದಿರಲಿ ಪ್ರೊಫೆಸರುಗಳು ತಮ್ಮ ಠಡಿಗಳಲ್ಲಿ ಕುಳಿತುಕೊಂಡು ದುಡಿಯುವುದನ್ನು ನೋಡಿದರೆ ಗೆ ಪರಮಾಶ್ಚರ್ಯವಾಗುತ್ತದೆ. ರಾತ್ರಿ 10 ಘಂಟೆಯಾದರೂ ೀಕ ಪ್ರೊಫೆಸರುಗಳು ತಮ್ಮ ಕೊಠಡಿಗಳಲ್ಲಿ ಕುಳಿತುಕೊಂಡು ತ್ತಿರುತ್ತಾರೆ. ಭೌತಶಾಸ್ತ್ರ, ರಸಾಯನಶಾಸ್ತ್ರ ಇತ್ಯಾದಿ ಾಗದ ಪ್ರೊಫೆಸರುಗಳಂತೂ ರಾತ್ರಿ 1 ಘಂಟೆ ಮತ್ತು 2 ಘಂಟೆ

ಯಲ್ಲೂ ಕೂಡ ತಮ್ಮ ಪ್ರಯೋಗಶಾಲೆಗಳಲ್ಲಿ ಕೆಲಸ ಮಾಡುವುದನ್ನು ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ಅವರುಗಳ ಕೊಠಡಿಗಳಲ್ಲಿ ಅವರುಗಳು ಇಟ್ಟಿರುವ ಪುಸ್ತಕಗಳನ್ನು ನೋಡಲು ಸಂತೋಷವಾಗುತ್ತದೆ. ಪ್ರತಿಯೊಬ್ಬರೂ ತಮ್ಮ ಸ್ವಂತ ಲೈಬ್ರರಿಯೆಂದು 500ರಿಂದ 2000 ಪುಸ್ತಕಗಳವರೆಗೆ ಇಟ್ಟುಕೊಂಡಿರುತ್ತಾರೆ. ಇಂತಹ ವ್ಯವಸ್ಥೆಯನ್ನು ನೋಡಿದರೆ ಅವರ ದಕ್ಷತೆ ಮತ್ತು ಪ್ರಾಮಾಣಿಕತೆಗೆ ನಾವು ತಲೆಬಾಗಲೇಬೇಕು. ನಾವುಗಳೂ ಕೂಡ ಅವರ ಹಾಗೆಯೇ ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಬೆಳೆಯಿಸಿಕೊಂಡರೆ ನಮ್ಮ ವಿಶ್ವವಿದ್ಯಾನಿಲಯಗಳು ಯಾವ ಮಟ್ಟಕ್ಕೆ ಬರಬಲ್ಲವು ಎಂಬುದನ್ನು ವಾಚಕರೇ ತಿಳಿದುಕೊಳ್ಳುವರೆಂದು ಭಾವಿಸುವೆನು.

ನಮ್ಮ ವಿಶ್ವವಿದ್ಯಾನಿಲಯಕ್ಕೂ ಮತ್ತು ಅಲ್ಲಿಯ ವಿಶ್ವವಿದ್ಯಾನಿಲಯಗಳಿಗೂ ಇರುವ ಒಂದು ಮುಖ್ಯ ವ್ಯತ್ಯಾಸವೇನೆಂದರೆ, ಅಲ್ಲಿಯ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷೆಗಳ ನಿಯಂತ್ರಣಾಧಿಕಾರಿ ಎಂಬ ಹುದ್ದೆಯೇ ಇರುವುದಿಲ್ಲ. ಜೊತೆಗೆ ಜವಾನರೆಂಬ ಹೆಸರೇ ಇಲ್ಲ. ಪ್ರತಿಯೊಬ್ಬ ಅಧ್ಯಾಪಕನು ತಾನು ತೆಗೆದುಕೊಳ್ಳುವ ತರಗತಿಗಳಿಗೆ ಸಂಬಂಧಪಟ್ಟಂತೆ ಪರೀಕ್ಷೆ ಫಲಿತಾಂಶವನ್ನು ತಾನೇ ಪ್ರಕಟಿಸುತ್ತಾನೆ. ಆತನ ರೂಮಿನ ಮುಂದೆ ಟೈಪ್ ಮಾಡಿ 1 ಚೀಟಿ ಅಂಟಿಸಿಬಿಡುತ್ತಾನೆ. ನಾವುಗಳು ಪರೀಕ್ಷೆ ಆದ 3 ಅಥವಾ 4 ದಿನಗಳೊಳಗಾಗಿ ಹೋಗಿ ನೋಡಿದರೆ ನಮ್ಮ ಫಲಿತಾಂಶ ಗೊತ್ತಾಗುತ್ತದೆ. ಅದರ ಪ್ರತಿಯೊಂದನ್ನು Registrarರವರ ಕಚೇರಿಗೆ ಕಳುಹಿಸುತ್ತಾನೆ. Registrarರವರ ಕಚೇರಿಯಲ್ಲಿ

ಂದು ವಾರದೊಳಗಾಗಿ ನಮಗೆ ಅಂಕಗಳ ಪಟ್ಟಿಯನ್ನು (Marks Card) ಕೊಟ್ಟುಬಿಡುತ್ತಾರೆ. ಅಲ್ಲಿಗೆ ಪೂರೈಸಿತು. ವಿದ್ಯಾರ್ಥಿ ಪುನಃ ಅಂಕಗಳ ಎಣಿಕೆಗೆ ಅರ್ಜಿ ಹಾಕುವಹಾಗಿಲ್ಲ ಅಥವಾ ನನಗೆ ಅನ್ಯಾಯವಾಗಿದೆ ಎಂದು ಯಾರಲ್ಲಿಯೂ ಹೋಗಿ ಗಲಾಟೆ ಮಾಡುವಹಾಗಿಲ್ಲ, ಕೋರ್ಟಿಗಂತೂ ಹೋಗುವಹಾಗಿಲ್ಲ.

ವೈಸ್ ಛಾನ್ಸಲರ್ ಕಚೇರಿಯಿಂದ ಹಿಡಿದು ಯಾವ ಕಚೇರಿಯಲ್ಲೂ ಜವಾನರಿಲ್ಲ. ಪ್ರೊಫೆಸರ್ ಆಗಿರಲಿ ಅಥವಾ ವೈಸಛಾನ್ಸಲರ್ ಆಗಿರಲಿ ತನಗೆ ಏನಾದರೂ ಕೆಲಸ ಆಗಬೇಕಾದರೆ ತಾನೇ ಹೋಗಿ ಅಲ್ಲಿರುವ ಗುಮಾಸ್ತರುಗಳು ಮತ್ತು ಟೈಪಿಸ್ಟ್‌ಗಳನ್ನು ಕೇಳಬೇಕು. ಆಗ ಅವರು ಮಾಡುತ್ತಾರೆ. ತಮ್ಮ ಕೊಠಡಿಗಳಿಂದ ಎದ್ದು ಹೋಗಿ ಗುಮಾಸ್ತರಿರುವ ಕಡೆಗೆ ತಾವೇ ಹೋಗಿ ಕೆಲಸ ಮಾಡಿಕೊಂಡು ಬರುತ್ತಾರೆ. ಅದೇ ರೀತಿ ನಾವು ವಿದ್ಯಾರ್ಥಿಗಳು ಯಾವ ಕಛೇರಿಗೇ ಹೋಗಲಿ ಬಹಳ ಸೌಜನ್ಯದಿಂದ ನಮ್ಮನ್ನು ಕಾಣುತ್ತಾರೆ ಮತ್ತು ಕೂಡಲೇ ಕೆಲಸ ಮಾಡಿಕೊಡುತ್ತಾರೆ. ಇಲ್ಲಿ ಹೇಳುವ ಹಾಗೆ ಆಗ ಬಾ, ಈಗ ಬಾ ಎನ್ನುವ ಮಾತೇ ಇಲ್ಲ. ಇಂತಹ ವಾತಾವರಣದಲ್ಲಿದ್ದು ಬಂದು ನಮ್ಮ ಪ್ರೊಫೆಸರುಗಳು ಇಲ್ಲಿಗೆ ಬಂದಮೇಲೆ ನಡೆದುಕೊಳ್ಳುವ ರೀತಿ ನೋಡಿದರೆ ನಮಗೆ ಬಹಳ ಆಶ್ಚರ್ಯವಾಗುತ್ತದೆ. ಕಚೇರಿಗಳಲ್ಲಿ ಬೆಳಗ್ಗೆ 8 ಘಂಟೆಗೆ ಕೆಲಸ ಪ್ರಾರಂಭಿಸಿದರೆ ಮಧ್ಯಾಹ್ನ 12ರ ತನಕ ಎಲ್ಲಿಯೂ ಹೋಗುವಹಾಗಿಲ್ಲ. ಪುನಃ ಮಧ್ಯಾಹ್ನ 1ಘಂಟೆಗೆ ಪ್ರಾರಂಭಿಸಿದರೆ ಸಾಯಂಕಾಲ 5 ಘಂಟೆಯವರೆಗೆ ಎಲ್ಲಿಯೂ ಹೋಗುವಹಾಗಿಲ್ಲ. ಮೇಲಾಧಿಕಾರಿಗಳು ಕೆಲಸ ಮಾಡುತ್ತಿದ್ದಾರಾ ಎಂದು ತಿರುಗಿಕೂಡಾ

ನೋಡುವುದಿಲ್ಲ. ಆದರೆ ಒಬ್ಬ ನೌಕರನೂ ತನ್ನ ಜಾಗ ಬಿಟ್ಟು ಕದಲಿರುವುದಿಲ್ಲ. ಇಂತಹ ಪರಿಸ್ಥಿತಿಯನ್ನು ನೋಡಿದಾಗ ನಮ್ಮ ದೇಶದಲ್ಲಿ ನಮ್ಮಗಳಿಗೆ ಯಾವ ಕಾಲಕ್ಕೆ ಇಂತಹ ಜ್ಞಾನೋದಯ ಉಂಟಾಗುತ್ತದೆ ಎಂಬ ಯೋಚನೆ ಬರುತ್ತದೆ.

ಇದೇ ರೀತಿ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಉಪಾಹಾರಗೃಹವಾಗಲೀ ಅಥವಾ ಇನ್ನಾವುದೇ ಸ್ಥಳವಾಗಲಿ ಅಲ್ಲಿ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಬಹಳ ಸಂಯಮದಿಂದ ವರ್ತಿಸುತ್ತಾರೆ. ಅಧ್ಯಾಪಕ ಅಥವಾ ವಿದ್ಯಾರ್ಥಿ ಯಾರಾದರೂ ವಿಶ್ವವಿದ್ಯಾನಿಲಯದ ಯಾವುದಾದರೂ ಭಾಗದಲ್ಲಿ ಸೌಜನ್ಯ ತಪ್ಪಿ ವರ್ತಿಸಿದರೆ ಅಥವಾ ವಿಶ್ವವಿದ್ಯಾನಿಲಯದ ನಿಯಮಗಳನ್ನು ಪಾಲಿಸದೆಹೋದರೆ ಕೂಡಲೆ ಪೋಲಿಸಿನವರು ಬಂದು ಕತ್ತಿನ ಪಟ್ಟಿ ಹಿಡಿದುಕೊಂಡು ಆ ಅಧ್ಯಾಪಕನನ್ನು ಅಥವಾ ವಿದ್ಯಾರ್ಥಿಯನ್ನು ಎಳೆದುಕೊಂಡು ಹೋಗುತ್ತಾರೆ. ಸರಿಯಾದ ಬುದ್ಧಿ ಕಲಿಸುತ್ತಾರೆ. ವಿಶ್ವವಿದ್ಯಾನಿಲಯದ ಎಲ್ಲಾ ಕಟ್ಟಡಗಳ ಹತ್ತಿರವೂ ಅಲ್ಲಲ್ಲಿ ಪೋಲಿಸರು ಇರುತ್ತಾರೆ. ಸುಮ್ಮನೆ ಅವರ ಪಾಡಿಗೆ ಕಾರಿನಲ್ಲಿ ಕುಳಿತುಕೊಂಡೋ ಅಥವಾ ನಿಂತುಕೊಂಡೋ ವಿದ್ಯಾರ್ಥಿಗಳನ್ನು ಪರೀಕ್ಷಿಸುತ್ತಿರುತ್ತಾರೆ. ಯಾವನಾದರೂ ಒಬ್ಬ ವಿದ್ಯಾರ್ಥಿ ಅಸಭ್ಯವಾಗಿ ವರ್ತಿಸಿದರೆ ಕೂಡಲೇ ಅವನು ಪೋಲಿಸರ ಕೈಗೆ ಸಿಕ್ಕಿ ಬೀಳುತ್ತಾನೆ.

ಇದುವರೆಗೆ ಯಾವರೀತಿ ಒಳ್ಳೆಯ ನಡವಳಿಕೆಗಳನ್ನು ಅಮೆರಿಕದ ವಿಶ್ವವಿದ್ಯಾನಿಲಯಗಳ ಅಧ್ಯಾಪಕವರ್ಗದವರು ಮತ್ತು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ ಎಂಬುದನ್ನು

ರಿಸಲಾಗಿದೆ. ಆದರೆ ಅವರಲ್ಲಿ ಕೆಟ್ಟ ನಡವಳಿಕೆ ಇಲ್ಲವೇ ಇಲ್ಲ
ವ ತೀರ್ಮಾನಕ್ಕೆ ವಾಚಕರು ಬರಬಾರದು ಎಂದು ಕೆಲವು
ರ್ಶನಗಳನ್ನು ಕೊಡುವೆನು. ಸಮಾಜ ಎಂದಮೇಲೆ ಯಾವ
ವಾದರೂ ಅದರಲ್ಲಿ ಲೋಪದೋಷಗಳಿರುತ್ತವೆ. ಅದರಂತೆಯೇ
ರಿಕದ ಸಮಾಜದಲ್ಲೂ ಕೆಲವರು ಕೆಲವು ಸಲ ಕೆಟ್ಟ ನಡವಳಿಕೆ
ನ್ನು ಆಚರಿಸುತ್ತಾರೆ. ಆದರೆ ಅಂತಹವರ ಸಂಖ್ಯೆ ತೀರಾ ಕಡಮೆ
ತ್ತು ಕೆಟ್ಟ ನಡವಳಿಕೆಯವರಿಗೆ ಉಗ್ರಶಿಕ್ಷೆಯಾಗುತ್ತದೆ. ನಮ್ಮ
ಾಜದಲ್ಲಿರುವ ಹಾಗೆ ತಪ್ಪು ಮಾಡಿದವನು ನುಣುಚಿಕೊಳ್ಳುವ
ಲ್ಲ.

ಅಧ್ಯಾಪಕವರ್ಗದವರೂ ಕೂಡ ಕೆಲವು ಸಲ ತಪ್ಪು ನಡವಳಿಕೆಗೆ
ಣರಾಗಿ ಅಪಮಾನಕ್ಕೆ ಒಳಗಾಗಿದ್ದಾರೆ. ನಾನಿದ್ದ ಅವಧಿ
ಲ್ಲಿ ಕೆನಡಾದಲ್ಲಿ ಇಂತಹ ಒಂದು ಘಟನೆ ನಡೆಯಿತು. ಕೆನಡಾದ
ದು ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಅಧ್ಯಾಪಕಮನಃಶ್ಶಾಸ್ತ್ರ
ಾಖೆಯಲ್ಲಿ (Psychology) ಸೇರಿಕೊಂಡಿದ್ದನು. ಆತ
ರಿಕಾದ ಸಂಯುಕ್ತ ಸಂಸ್ಥಾನಗಳ ಒಂದು ವಿಶ್ವವಿದ್ಯಾ
ಯದಲ್ಲಿ ಪಿಎಚ್.ಡಿ. ಪದವಿ ಪಡೆದಿರುವುದಾಗಿ ಹೇಳಿಕೊಂಡು,
ಡಾದಲ್ಲಿ ಹುದ್ದೆಯಲ್ಲಿದ್ದನು. ಸುಮಾರು 2 ವರ್ಷಗಳ
ಲ ಇದೇ ರೀತಿ ಇದ್ದನು. ಆದರೆ ನಿಜವಾಗಿಯೂ ಈತನಿಗೆ
ಚ್.ಡಿ. ಬಂದಿರಲಿಲ್ಲ. ಈತನು ಮತ್ತೊಬ್ಬನ ಸರ್ಟಿಫಿಕೇಟು
ಲನ್ನು ತೋರಿಸಿ ಬಿಟ್ಟು ಕೆಲಸಕ್ಕೆ ಸೇರಿದ್ದನು. ಅದೃಷ್ಟವಶಾತ್
ತ್ತೊಬ್ಬ ಅಧ್ಯಾಪಕನ ಹೆಸರು ಮತ್ತು ಉಪನಾಮ (initials)
ಇವನ ಹೆಸರು ಮತ್ತು ಉಪನಾಮ (initials) ಕ್ಕೂ

ವ್ಯತ್ಯಾಸವಿರಲಿಲ್ಲ. ಮತ್ತೊಬ್ಬ ಅಧ್ಯಾಪಕನು ಕೂಡ ಮನಃ ಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದು ಅಮೆರಿಕಾದ ಸಂಯುಕ್ತ ಸಂಸ್ಥಾನಗಳ ಒಂದು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನಾಗಿದ್ದನು. ಇವರ ಸರ್ಟಿಫಿಕೇಟ್ ನಕಲನ್ನು ಹೇಗೋ ಪಡೆದು ಕೆನಡಾ ದಲ್ಲಿದ್ದವನು ಹುದ್ದೆಗೆ ಸೇರಿಕೊಂಡಿದ್ದನು. ಒಂದು ದಿನ ಅಕಸ್ಮಾತ್ ಕೆನಡಾದಲ್ಲಿದ್ದವನು ಸಿಕ್ಕಿಬಿದ್ದನು. ಕೆನಡಾದಲ್ಲಿ ಆ ವಿಶ್ವವಿದ್ಯಾ ನಿಲಯದ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರು ಒಂದು ನಿಯತ ಕಾಲಿಕೆಯನ್ನು ಓದುತ್ತಿದ್ದರು. ಆಗ ಆ ನಿಯತಕಾಲಿಕೆಯಲ್ಲಿ ಒಂದು ಲೇಖನ ಇತ್ತು. ಆ ಲೇಖನ ಬರೆದವನ ಹೆಸರು ಮತ್ತು ತಮ್ಮ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನಾಗಿದ್ದವನ ಹೆಸರು ಒಂದೇ ಇತ್ತು. ಆದರೆ ಅಧ್ಯಾಪಕನು ಯಾವ ವಿಶ್ವವಿದ್ಯಾನಿಲಯ ದಲ್ಲಿದ್ದಾನೆ ಎಂಬುದರ ವಿಷಯದಲ್ಲಿ ಮಾತ್ರ ವ್ಯತ್ಯಾಸವಿತ್ತು. ಇದನ್ನು ನೋಡಿ ಆಶ್ಚರ್ಯವಾಗಿ ಇಲಾಖೆಯ ಮುಖ್ಯಸ್ಥರು ಕೆನಡಾದಲ್ಲಿದ್ದ ಅಧ್ಯಾಪಕನನ್ನು ಕರೆದು ಏಕೆ ಲೇಖನದಲ್ಲಿ ತಪ್ಪು ವಿಳಾಸ ಬಿದ್ದಿದೆ ಎಂದು ಕೇಳಿದರು. ಆಗಲೂ ಅಧ್ಯಾಪಕನು ನಿಜಾಂಶ ತಿಳಿಸಲಿಲ್ಲ. ಏನೋ ಅಚಾತುರ್ಯದಿಂದ ತಪ್ಪು ಬಿದ್ದಿರಬಹು ದೆಂದು ಜವಾಬುಕೊಟ್ಟನು. ಆದರೆ ಇಲಾಖೆಯ ಮುಖ್ಯಸ್ಥರಿಗೆ ಸಮಾಧಾನವಾಗದೆ ಗುಟ್ಟಾಗಿ ಅಮೆರಿಕಾದ ಸಂಯುಕ್ತ ಸಂಸ್ಥಾನ ಗಳಲ್ಲಿ ಇನ್ನೊಬ್ಬ ಅಧ್ಯಾಪಕನು ಎಲ್ಲಿ ಕೆಲಸ ಮಾಡುತ್ತಿದ್ದನೋ ಆ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದರು. ನಿಜಾಂಶ ತರಿಸಿ ಕೊಂಡರು. ಅದೇರೀತಿ ನಿಯತಕಾಲಿಕೆಯ ಪ್ರಕಾಶಕರಿಗೂ ಪತ್ರ ಬರೆದು ನಿಜಾಂಶ ತರಿಸಿಕೊಂಡರು. ಈ ಮಧ್ಯೆ, ಕೆನಡಾದಲ್ಲಿದ್ದ

ಧ್ಯಾಪಕನಿಗೆ ಪತ್ರವ್ಯವಹಾರ ನಡೆಯುತ್ತಿರುವುದು ಹೇಗೋ
ಳಿದು, ನಾಪತ್ತೆಯಾದನು. ಒಂದು ವಾರವಾದರೂ ತರಗತಿಗ
ನ್ನು ತೆಗೆದುಕೊಳ್ಳುವುದಕ್ಕೆ ಬರಲಿಲ್ಲ. ಆವನ ಮನೆಯಲ್ಲೂ
ಧ್ಯಾಪಕನು ಇರಲಿಲ್ಲ. ಕೂಡಲೇ ಕೆನಡಾ ವಿಶ್ವವಿದ್ಯಾನಿಲಯ
ವರು ದ್ರೋಹದ ಆಪಾದನೆಯ ಮೇಲೆ ಅಧ್ಯಾಪಕನ ವಿಷಯದಲ್ಲಿ
ೋಲೀಸರಿಗೆ ದೂರಿತ್ತರು. ಜೊತೆಗೆ ಕೆನಡಾ, ಅಮೆರಿಕದ
ಂಯುಕ್ತ ಸಂಸ್ಥಾನಗಳು ಮತ್ತು ಮೆಕ್ಸಿಕೋ ದೇಶಗಳಲ್ಲೆಲ್ಲಾ
ಲಿವಿಷನ್ ಕೇಂದ್ರಗಳ ಮೂಲಕ ಈ ದ್ರೋಹದ ಆಪಾದನೆಯ
ಷಯದಲ್ಲಿ ಪ್ರಕಟಣೆ ಹೊರಡಿಸಿದರು. ಎಲ್ಲಾ ಪ್ರಮುಖ
ತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿದರು. ನಿಜವಾಗಿ ಪಿಎಚ್.ಡಿ.
ದವಿ ಪಡೆದು ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿದ್ದ ಅಧ್ಯಾ
ಕನ ಭಾವಚಿತ್ರವನ್ನೂ ಮತ್ತು ಸುಳ್ಳು ದಾಖಲೆ ಕೊಟ್ಟು
ನಡಾದಲ್ಲಿ ಸೇರಿಕೊಂಡಿದ್ದ ಅದೇ ಹೆಸರಿನ ಅಧ್ಯಾಪಕನ ಭಾವ
ತ್ರವನ್ನೂ ವಿವರಗಳೊಂದಿಗೆ ಪ್ರಕಟಿಸಿದರು. 3 ದಿನಗಳು ಒಂದೇ
ಮನೆ ಟೆಲಿವಿಷನ್‌ಗಳಲ್ಲಿ ಇವರ ಭಾವಚಿತ್ರಗಳು ಮತ್ತು
ೋಸದ ಪ್ರಕಟಣೆಯ ವಿಷಯಗಳು ತೋರಿಸಲ್ಪಟ್ಟವು. ಜೊತೆಗೆ
ನಡಾದ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರವರು ಇನ್ನು ಮುಂದೆ
ಲ್ಲಿಯೂ ಮೋಸ ಮಾಡಿದ ಅಧ್ಯಾಪಕನಿಗೆ ಕೆಲಸ ಕೊಡಬಾರ
ೆಂದು ಪ್ರಕಟಣೆ ಹೊರಡಿಸಿದರು. ಈ ಪ್ರಕಟಣೆ ಹೊರಟ
ಂದು ವಾರದೊಳಗಾಗಿ ನಾಪತ್ತೆಯಾಗಿದ್ದ ಅಧ್ಯಾಪಕನು ಕೆನಡಾದ
ಂದು ನಿರ್ಜನ ಪ್ರದೇಶದಲ್ಲಿ ಪೋಲೀಸರ ಕೈಗೆ ಸಿಕ್ಕಿಬಿದ್ದನು.
ವನು ಆತ್ಮಹತ್ಯೆ ಮಾಡಿಕೊಳ್ಳುವುದರಲ್ಲಿ ಇದ್ದನು. ಆದರೆ

ಪೋಲಿಸರು ಅವನನ್ನು ಜಾಗರೂಕತೆಯಿಂದ ಬಂಧಿಸಿ ನ್ಯಾಯಾಲಯದಲ್ಲಿ ಅವನಿಗೆ ಶಿಕ್ಷೆ ವಿಧಿಸಿದರು. ಈ ವಿಷಯ ಇಷ್ಟು ವಿವರವಾಗಿ ಬರೆದ ಉದ್ದೇಶ ಏನೆಂದರೆ ನಮ್ಮ ವಿಶ್ವ ನಿಲಯಗಳಲ್ಲೂ ಇಂತಹ ಘಟನೆಗಳಾಗಿವೆ. ಆದರೆ ನಮ್ಮ ವಿದ್ಯಾನಿಲಯದವರು ಎಂತಹ ಕ್ರಮ ಕೈಗೊಂಡರು ಎಂಬ ವಾಚಕರು ತಿಳಿದುಕೊಳ್ಳಲಿ ಎಂದು. ನಮ್ಮ ವಿಶ್ವವಿದ್ಯಾನಿ ಗಳಲ್ಲಿ ಕೆಲವು ಅಧ್ಯಾಪಕರು ಹೊರದೇಶದ ವಿಶ್ವವಿದ್ಯಾನಿಲಯ ಹೋಗಿ ಬಂದಮೇಲೆ ಯಾವ ವಿಧವಾದ ಪದವಿಯನ್ನು ಪ ವಾಪಸ್ಸು ಬಂದರೂ, ನಮ್ಮ ವಿಶ್ವವಿದ್ಯಾನಿಲಯಗಳಿಗೆ ಪಡೆದು ಬಂದಿದ್ದೇವೆ ಎಂದು ಸುಳ್ಳು ಪತ್ರ ಬರೆದುಕೊಟ್ಟ ಇದು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ ಗೊತ್ತ ವಿದೇಶದ ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದು ಸಮಾಚಾ ಕೊಂಡಿದ್ದಾರೆ. ಆದರೂ ಅದನ್ನು ಬಹಿರಂಗಪಡಿಸದೆ ಕಾರಣಗಳಿಗಾಗಿ ಅಧ್ಯಾಪಕರಿಗೆ ರಕ್ಷಣೆ ಕೊಟ್ಟು ಹಾಗೆ ಕೊಂಡಿದ್ದಾರೆ.

ಇದಲ್ಲದೆ ನಮ್ಮ ಅಧ್ಯಾಪಕರುಗಳನ್ನು ಪರೀಕ್ಷೆಯ ಫಲಿ ಪ್ರಕಟಿಸುವ ಕಾರ್ಯಕ್ಕೆ ನೇಮಿಸಿದಾಗ ನಮ್ಮ ಸ್ನೇಹಿತರ ವರು ತೇರ್ಗಡೆಯಾಗಿದ್ದ ವಿದ್ಯಾರ್ಥಿಗಳನ್ನು ಅನುತ್ತೀರ್ಣ ಮಾಡಿಸಿ, ಅನುತ್ತೀರ್ಣರಾಗಿದ್ದವರನ್ನು ಮೊದಲನೆ ದರ ತೇರ್ಗಡೆಯಾದರೆಂದು ಪ್ರಕಟಿಸಿ ಪರೀಕ್ಷೆ ಫಲಿತಾಂಶ ಹೊರಡಿಸಿದರು. ಆನಂತರ ನಿಜವಾಗಿ ತೊಂದರೆಗೊಳಗಾದ ವಿ ಗಳು ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಮೊರೆಹೊ

ದಯಾಳುವಾದ ಉನ್ನತ ಅಧಿಕಾರಿಯು ಒಂದು ವಿಚಾರಣಾ ಸಮಿತಿಯನ್ನು ನೇಮಿಸಿ, ನಮ್ಮ ಅಧ್ಯಾಪಕರು ಮಾಡಿದ್ದ ಮೋಸದ ಕಾರ್ಯವನ್ನು ಪತ್ತೆ ಹಚ್ಚಿದರು. ಅನಂತರ ನಿಜಸ್ಥಿತಿಯಲ್ಲಿ ಮತ್ತೆ ಫಲಿತಾಂಶಗಳನ್ನು ಪ್ರಕಟಿಸಿ ಅನ್ಯಾಯಕ್ಕೆ ಒಳಗಾಗಿದ್ದ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಟ್ಟರು. ಆದರೆ ಈ ಕಾರ್ಯವನ್ನು ಎಸಗಿದ ಅಧ್ಯಾಪಕರಿಗೆ ಮಾತ್ರ ಶಿಕ್ಷೆಯಾಗಲಿಲ್ಲ. ಅದರ ಬದಲು ಆ ಅಧ್ಯಾಪಕರಿಗೆ ಬಡ್ತಿ ಕೊಟ್ಟು ಪುರಸ್ಕಾರ ಮಾಡಲಾಯಿತು.

ಮತ್ತೊಬ್ಬ ಅಧ್ಯಾಪಕರು ತಮಗೆ ಬೇಕಾದ ವಿದ್ಯಾರ್ಥಿಯೊಬ್ಬನಿಗೆ ಪರೀಕ್ಷೆಯಲ್ಲಿ ಪಾಸು ಮಾಡಿಸಿ ಅಂಕಗಳನ್ನು ಹಾಕಿ ಕಳುಹಿಸಿದರು. ಆದರೆ ಆ ವಿದ್ಯಾರ್ಥಿಯು ಉತ್ತರ ಬರೆದಿದ್ದ ಪುಸ್ತಕವು ಅವರ ಹತ್ತಿರಕ್ಕೆ ಹೋಗೇ ಇರಲಿಲ್ಲ. ಆ ವಿದ್ಯಾರ್ಥಿ ಬರೆದಿದ್ದ ಪುಸ್ತಕವು ಮತ್ತೊಬ್ಬ ಅಧ್ಯಾಪಕರ ಹತ್ತಿರ ಹೋಗಿದ್ದಿತು. ಆ ಪುಸ್ತಕವನ್ನು ನೋಡಿ ಅಂಕವನ್ನು ಹಾಕಿದ್ದ ಅಧ್ಯಾಪಕರು ವಿದ್ಯಾರ್ಥಿಯನ್ನು ಅನುತ್ತೀರ್ಣನಾಗುವಂತೆ ಮಾಡಿದ್ದರು. ಈ ವಿಷಯವನ್ನು ಪ್ರಾಮಾಣಿಕರಾದ ಕೆಲವು ಅಧ್ಯಾಪಕರು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತಂದರು. ವಿಶ್ವವಿದ್ಯಾನಿಲಯ ವಿಚಾರಣೆ ನಡೆಸಿತು. ಆದರೆ ಅದರಿಂದ ಹೊರಬಿದ್ದ ಫಲಿತಾಂಶ ಮಾತ್ರ ಅಪ್ರಯೋಜನಕಾರಿ.

ಹೀಗೆ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಎಂತಹ ಮಹತ್ತರವಾದ ತಪ್ಪುಗಳಾದರೂ ಅದಕ್ಕೆ ಶಿಕ್ಷೆಯ ಭೀತಿ ಇಲ್ಲದಿರುವುದರಿಂದಲೇ ನಮ್ಮಲ್ಲಿ ಧರ್ಮಕ್ಕೆ ಬೆಲೆ ಇಲ್ಲದೆ ಹೋಗಿದೆ. ಬಾಯಿಯಲ್ಲಿ

ಮಾತ್ರ ನಮ್ಮ ಅಧಿಕಾರಿಗಳು ಮತ್ತು ನಾಯಕರುಗಳು ಧರ್ಮ, ಪ್ರಾಮಾಣಿಕತೆ, ದೇಶಭಕ್ತಿ ವಿಷಯವಾಗಿ ಮಾತನಾಡುತ್ತಾರೆ. ಆದರೆ ತಮ್ಮ ಕೈಗೆ ಅಪ್ರಾಮಾಣಿಕತೆಯ ಘಟನೆಗಳು ಸಿಕ್ಕಿದಾಗಲೂ, ತಮಗೆ ಏನೂ ಗೊತ್ತಿಲ್ಲದವರಂತೆ ನಟಿಸುತ್ತಾರೆ. ಇದರಿಂದ ನಮ್ಮ ಸಮಾಜದಲ್ಲಿ ಪ್ರಾಮಾಣಿಕತೆಗೆ ಮಹತ್ವ ಕಡಮೆಯಾಗುತ್ತಾ ಬಂದಿದೆ.

ಅಮೆರಿಕದ ಸಮಾಜದಲ್ಲಾಗಲೀ, ಕೆನಡಾದ ಸಮಾಜದಲ್ಲಾಗಲೀ ಅಥವಾ ನಮ್ಮ ಸಮಾಜದಲ್ಲಾಗಲೀ ಕೆಟ್ಟ ನಡವಳಿಕೆಯ ಜನ ಇದ್ದೇಇರುತ್ತಾರೆ. ಆದರೆ ಆ ಸಮಾಜಗಳಲ್ಲಿ ಕೆಟ್ಟ ನಡವಳಿಕೆಯ ಜನರನ್ನು ಶಿಕ್ಷೆ ಮಾಡದೆ ಬಿಟ್ಟರೆ ತಾವು ದೇಶದ್ರೋಹ ಮಾಡಿದಂತಾಗುತ್ತದೆ ಎಂದು ಕೂಡಲೇ ತಕ್ಕ ಕಾರ್ಯಕ್ರಮ ಕೈಗೊಳ್ಳುತ್ತಾರೆ. ಆದುದರಿಂದ ದಿನಚರಿಯ ವ್ಯವಹಾರಗಳಲ್ಲಿ ಆ ದೇಶಗಳಲ್ಲಿ ಉನ್ನತ ಮಟ್ಟದ ಪ್ರಾಮಾಣಿಕತೆಯನ್ನು ಕಾಣುತ್ತೇವೆ. ಆದರೆ ನಮ್ಮ ದೇಶದಲ್ಲಿ ಕೆಟ್ಟ ನಡವಳಿಕೆಯ ಜನರಿಗೆ ಎಲ್ಲೂ ಇಲ್ಲದ ಪ್ರೋತ್ಸಾಹ ದೊರೆಯುತ್ತಿರುವುದರಿಂದ ನಮ್ಮ ಸಮಾಜ ಅಧೋಗತಿಗೆ ಇಳಿಯುತ್ತಿದೆ. ಅವರಿಗೆ ಸಿಗುತ್ತಿರುವ ಪ್ರೋತ್ಸಾಹ ನೋಡಿ ಇದುವರೆಗೆ ಪ್ರಾಮಾಣಿಕತೆಯಿಂದ ನಡೆಯುತ್ತಿದ್ದವರೂ ಕೂಡ, ಕೆಟ್ಟ ನಡವಳಿಕೆಗಳನ್ನು ಆಚರಿಸಲು ಪ್ರಾರಂಭಿಸಿದ್ದಾರೆ.

ಅಧ್ಯಾಪಕರುಗಳ ನಡವಳಿಕೆ ವಿಷಯದಲ್ಲಿ ಕೆಲವು ಬಾರಿ ಅಮೆರಿಕನರಲ್ಲಿಯೂ ಕೂಡ ಜಿಗುಪ್ಸೆ ಕಂಡುಬರುತ್ತದೆ. ಅದರಲ್ಲಿಯೂ ನೀಗ್ರೋ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರುಗಳನ್ನು ಸಾಮಾನ್ಯವಾಗಿ ಟೀಕಿಸುತ್ತಿರುತ್ತಾರೆ. ತಮಗೆ ಅಂಕಗಳನ್ನು ಕೊಡುವಾಗ

ಉದ್ದೇಶ ಪೂರ್ವಕವಾಗಿ ಕಡಿಮೆ ಅಂಕಗಳನ್ನು ಕೊಟ್ಟು ವರ್ಣ ದ್ವೇಷ ತೋರಿಸುತ್ತಾರೆ ಎಂಬುದು ಅವರ ಟೀಕೆ. ನಮ್ಮಲ್ಲಿ ನಮ್ಮ ವಿದ್ಯಾರ್ಥಿಗಳು ಜಾತಿಯ ಆಧಾರದ ಮೇಲೆ ನಮ್ಮ ಅಧ್ಯಾಪಕರುಗಳು ನಂಬರು ಹಾಕಿ ತೇರ್ಗಡೆ ಮಾಡಿಸುತ್ತಾರೆ; ಎಂದು ಆಪಾದಿಸುವ ರೀತಿಯಲ್ಲಿಯೆ ನೀಗ್ರೋ ವಿದ್ಯಾರ್ಥಿಗಳು ಆಪಾದಿಸುತ್ತಾರೆ. ಆದರೆ ಈ ಆಪಾದನೆಗೆ ನಾನು ನಿರ್ದಿಷ್ಟವಾದ ಘಟನೆಗಳನ್ನು ನಿದರ್ಶನವಾಗಿ ಕೊಡಲಾರೆ. ಆದರೆ ಅಮೆರಿಕದ ಅಧ್ಯಾಪಕರುಗಳು ಪರದೇಶಿ ವಿದ್ಯಾರ್ಥಿಗಳ ವಿಷಯದಲ್ಲಿ ನಡೆದುಕೊಳ್ಳುವ ರೀತಿ ನೋಡಿದರೆ ಅನೇಕ ಅಧ್ಯಾಪಕರುಗಳಲ್ಲಿ ಅಂತಹ ಭಾವನೆ ಇಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಆ ದೇಶಕ್ಕೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ ವಿವಿಧ ಜನಾಂಗಗಳಿಗೆ ಸೇರಿದವರು ಬರುತ್ತಾರೆ. ಅವರುಗಳನ್ನು ಪರೀಕ್ಷಿಸುವಾಗ ಸಾಮಾನ್ಯವಾಗಿ ಅಮೆರಿಕದ ಪ್ರೊಫೆಸರುಗಳು ನಿಷ್ಪಕ್ಷಪಾತ ದೃಷ್ಟಿಯಿಂದ ಇರುತ್ತಾರೆ. ಏಕೆಂದರೆ ಇಂಡಿಯಾದವರಾಗಲೀ, ಅರಬ್ಬರಾಗಲೀ, ಯೂರೋಪಿಯನರಾಗಲೀ, ಆಫ್ರಿಕನರಾಗಲೀ ಅಥವ ಚೈನಾದವರಾಗಲೀ, ಒಳ್ಳೆವಿದ್ಯಾರ್ಥಿಗಳಾಗಿದ್ದರೆ ಬಹಳ ಪ್ರೋತ್ಸಾಹ ಕೊಡುತ್ತಾರೆ. ಹಾಗಿಲ್ಲದೆ ವಿದ್ಯಾರ್ಜನೆಯಲ್ಲಿ ಸಾಕಷ್ಟು ಪರಿಶ್ರಮ ತೋರದಿದ್ದರೆ ಯಾವ ವಿದ್ಯಾರ್ಥಿಯೇ ಆಗಲಿ ಅವನನ್ನು ಬಿಟ್ಟು ಹೋಗು ಅನ್ನುತ್ತಾರೆ. ನಮ್ಮ ದೇಶದ ವಿದ್ಯಾರ್ಥಿಗಳ ವಿಷಯದಲ್ಲೂ ಅದೇ ರೀತಿ ನಡೆದುಕೊಳ್ಳುತ್ತಾರೆ. ಅಮೆರಿಕನರನ್ನೂ ವಿಶ್ವವಿದ್ಯಾನಿಲಯ ಬಿಟ್ಟು ಹೋಗು ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾರೆ. ಆದರೆ ಅಲ್ಲೊಂದು ಇಲ್ಲೊಂದು ಸಾರಿ ಇಂತಹ ಪಕ್ಷಪಾತ ಮನೋಭಾವ

ವುಳ್ಳ ಅಧ್ಯಾಪಕರನ್ನು ಕಾಣಬಹುದು.

ನಮ್ಮ ಸಮಾಜದ ದೃಷ್ಟಿಯಿಂದ ನೋಡಿದರೆ ನನಗೆ ಕೆಲವು ಅಮೆರಿಕನ್ ಅಧ್ಯಾಪಕರುಗಳ ನಡವಳಿಕೆ ಸರಿಯಿಲ್ಲ ವೆಂದು ಕಂಡುಬರುತ್ತದೆ. ಆದರೆ ಅಮೆರಿಕನ್ ಸಮಾಜದ ದೃಷ್ಟಿ ಯಿಂದ ನೋಡಿದರೆ ಆ ನಡವಳಿಕೆಗಳಿಗೆ ಅವರಲ್ಲಿ ಯಾವ ಆಕ್ಷೇಪ ಣೆಯೂ ಇಲ್ಲವೆಂದು ತಿಳಿದು ಬರುತ್ತದೆ.

ತರಗತಿಗಳಲ್ಲಿ ಉಪಾಧ್ಯಾಯರುಗಳು (ಕೆಲವರು ಮಾತ್ರ) ಮೇಜುಗಳ ಮೇಲೆ ಕಾಲು ಚಾಚಿಕೊಂಡು ಪಾಠ ಹೇಳುತ್ತಿರು ತ್ತಾರೆ. ಕೆಲವು ಅಧ್ಯಾಪಕರುಗಳು ತರಗತಿಗಳಿಗೆ ಚಡ್ಡಿಗಳನ್ನು ಹಾಕಿಕೊಂಡು ಮತ್ತು ಬನೀನುಗಳನ್ನು ಧರಿಸಿಕೊಂಡು ಬಂದು ಬಿಡುತ್ತಾರೆ. ವಿದ್ಯಾರ್ಥಿಗಳಿಗೆ ತಮ್ಮೊಡನೆಯೆ ಮಧ್ಯ ಕುಡಿಯಲು ಪ್ರೋತ್ಸಾಹಿಸುತ್ತಾರೆ. ಅವರ ಸಮಾಜದಲ್ಲಿ ಮಧ್ಯ ಕುಡಿಯು ವುದು ಅಂದರೆ, ನಾವುಗಳು ಕಾಫಿ, ಟೀ ಕುಡಿದಂತೆ. ಇದಲ್ಲದೆ ತರಗತಿಗಳಲ್ಲೇ ವಿದ್ಯಾರ್ಥಿಗಳೂ ಕೂಡ ಸಿಗರೇಟುಗಳನ್ನು ಸೇದಲು ಅವಕಾಶ ಕೊಡುತ್ತಾರೆ. ಆದರೆ ಅನೇಕ ಅಧ್ಯಾಪಕರುಗಳು ಇಂತಹ ನಡವಳಿಕೆಗಳನ್ನು ಟೀಕಿಸುತ್ತಾರೆ. ಆದರೆ ಸಂಪೂರ್ಣವಾಗಿ ಇಂತಹ ನಡವಳಿಕೆಗಳನ್ನು ತಪ್ಪಿಸಲು ಅಲ್ಲಿಯೂ ಸಾಧ್ಯವಾಗಿಲ್ಲ. ಇದನ್ನು ನೋಡಿಕೊಂಡುಬಂದ ನಮ್ಮಲ್ಲಿ ಕೆಲವು ಅಧ್ಯಾಪಕರು ಗಳು ಇಂತಹ ಅನಿಷ್ಟ ನಡವಳಿಕೆಗಳನ್ನು ನಮ್ಮ ವಿದ್ಯಾರ್ಥಿ ಗಳಲ್ಲೂ ಪ್ರೋತ್ಸಾಹಿಸಿದ್ದಾರೆ.

ಮತ್ತೊಂದು ಕುತೂಹಲಕಾರಿಯಾದ ನಡವಳಿಕೆಯನ್ನು ಅಮೆರಿಕನ್ ಸಮಾಜದಲ್ಲಿ ಕಾಣುತ್ತೇವೆ. ಯಾರೇ ಆಗಲಿ

ಮತ್ತೊಬ್ಬನನ್ನು ಸರ್ (Sir) ಎಂದು ನಾವುಗಳು ಇಲ್ಲಿ ಕರೆಯು ವಂತೆ ಕರೆಯುವುದಿಲ್ಲ. ಎಲ್ಲಾ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರು ಗಳನ್ನು ಹೆಸರು ಹಿಡಿದು ಕೂಗುತ್ತಾರೆ. ಆದರೆ ಜೊತೆಗೆ Mr. ಅಥವಾ Professor ಎಂಬ ಎರಡು ಪದಗಳನ್ನು ಉಪಯೋಗಿಸು ತ್ತಾರೆ. ವೈಸ್‌ಛಾನ್ಸಲರ್ (ಅಲ್ಲಿ ಪ್ರೆಸಿಡೆಂಟ್ ಎಂದು ಕರೆಯು ತ್ತಾರೆ) ಹೋಗುತ್ತಿದ್ದರೂ ಆತನಿಗೆ ವಿದ್ಯಾರ್ಥಿಗಳು ಹೆಸರು ಹಿಡಿದು ಮಾತನಾಡಿಸುತ್ತಾರೆ. ಏಕೆ ಈ ರೀತಿ ಮಾಡುತ್ತೀರಿ ಎಂದು ಅನೇಕ ಅಧ್ಯಾಪಕರನ್ನು ವಿಚಾರಿಸಿದೆ. ಅದಕ್ಕೆ ನಮ್ಮ ಸಮಾಜ ದಲ್ಲಿ ಎಲ್ಲಾ ಪ್ರಜೆಗಳಿಗೂ ಒಂದೇ ರೀತಿಯ ಗೌರವ. ಆದುದರಿಂದ ನಾವು ಯಾವ ಅಧಿಕಾರದಲ್ಲಿದ್ದರೂ ನಮ್ಮನ್ನು ಯಾರೂ ಸರ್ ಎಂದು ಕೂಗುವುದಿಲ್ಲ ಎಂದರು.

ಹಾಗೆಯೇ ನಮ್ಮಲ್ಲಿರುವ ಹಾಗೆ ಸಮಾರಂಭಗಳನ್ನು ನಡೆಸಿ ಅರ್ಹತೆ ಇಲ್ಲದ ಮನುಷ್ಯರನ್ನು ಹೊಗಳುತ್ತಾ ಹೋಗುವುದಿಲ್ಲ. ವಿಶ್ವವಿದ್ಯಾನಿಲಯಗಳಿಗೆ ಸುಪ್ರಸಿದ್ಧ ವಿದ್ವಾಂಸರುಗಳು ಆಗಿಂದಾಗ್ಗೆ ಬರುತ್ತಿರುತ್ತಾರೆ. ಅವರುಗಳ ಭಾಷಣ ಕೇಳಲು ಇಷ್ಟವಿದ್ದವರು ಮಾತ್ರ ಬರಬಹುದು. ಯಾವ ಬಲಾತ್ಕಾರವೂ ಇಲ್ಲ. ವಿಶ್ವ ವಿದ್ಯಾನಿಲಯದಲ್ಲಿ ಯಾವ ತರಗತಿಗಳನ್ನು ಬಿಡುವುದಿಲ್ಲ. ಭಾಷಣ ಕಾರರು ಒಂದು ಸಭಾಂಗಣದಲ್ಲಿ ಮಾತನಾಡುತ್ತಾರೆ. ಅನೇಕ ಸಂದರ್ಭಗಳಲ್ಲಿ ಮೂವತ್ತು ಸಾವಿರ ವಿದ್ಯಾರ್ಥಿಗಳು ಇರುವ ವಿಶ್ವ ವಿದ್ಯಾನಿಲಯಗಳಲ್ಲಿ 300 ಜನ ಸಭಿಕರನ್ನೂ ಕೂಡ ಕಾಣುವುದಿಲ್ಲ. ಭಾಷಣಕಾರರನ್ನು ಸಭೆಗೆ ಪರಿಚಯ ಮಾಡಿಕೊಡುವಾಗಲೂ ಅಷ್ಟೆ ; ಒಂದೆರಡು ವಾಕ್ಯಗಳನ್ನು ಹೇಳಿ ಭಾಷಣ ಮಾಡುವಂತೆ

ಆರಂಭವಾಗುವುದಕ್ಕೆ ಮೊದಲು ಒಂದು ಬಾರಿ ಒಂದು ಪ್ರಕಟಣೆ ಮಾಡುತ್ತಾರೆ. ಜಾಗ ಸಿಗದಿದ್ದವರು ಸಭಾಂಗಣ ಬಿಟ್ಟುಹೋಗ ಬೇಕು ಎಂದು. ಪುನಃ ಮರುಮಾತಿಲ್ಲ. ವಿದ್ಯಾರ್ಥಿಗಳು ಸುಮ್ಮನೆ ಸಭಾಂಗಣ ಬಿಟ್ಟುಹೊರಟು ಹೋಗುತ್ತಾರೆ. ಇದನ್ನು ನೋಡಿದಾಗ ಲೆಲ್ಲಾ ಎಂತಹ ಸಮಾಜವನ್ನು ಕಟ್ಟಿದ್ದಾರೆ ಎಂದು ನನಗೆ ಆಶ್ಚರ್ಯ ವಾಗುತ್ತಿತ್ತು. ನಮ್ಮಲ್ಲಿ ಇಂತಹ ಒಂದು ಪುಕ್ಕಟೆಯಾದ ಸಮಾರಂಭ ಏರ್ಪಡಿಸಿ ಯಾವ ವಿಶ್ವವಿದ್ಯಾನಿಲಯದ ಅಧಿಕಾರಿಯೇ ಆಗಲಿ ಜಾಗ ಸಿಗದವರು ಹೊರಗೆ ಹೋಗಿ ಎಂದು ಹೇಳಲು ಸಾಧ್ಯವೆ ಎಂಬುದನ್ನು ನೆನಸಿಕೊಂಡಾಗ, ನನಗೆ ಅಮೆರಿಕನ್ ವಿದ್ಯಾರ್ಥಿ ಗಳನ್ನು ನೋಡಿ ಬಹಳ ಸಂತೋಷವಾಗುತ್ತಿತ್ತು.

ವಿದ್ಯಾರ್ಥಿಗಳಿಗೆ ಖಾಯಿಲೆ ಬಂದರೆ ಅಥವ ಅನಾರೋಗ್ಯ ಉಂಟಾದರೆ (ವಿಶ್ವವಿದ್ಯಾನಿಲಯದವರು) ಬಹಳ ಉತ್ತಮವಾದ ವೈದ್ಯಕೀಯ ಸಹಾಯವನ್ನು ಅತಿ ಸುಲಭ ದರದಲ್ಲಿ ಒದಗಿಸುವ ಏರ್ಪಾಡು ಮಾಡಿದ್ದಾರೆ. ವೈದ್ಯರುಗಳು, ನರ್ಸ್‌ಗಳು ಮತ್ತು ಆಸ್ಪತ್ರೆಯ ಇತರ ನೌಕರರು ಬಹಳ ಸೌಜನ್ಯದಿಂದ ವರ್ತಿಸುತ್ತಾರೆ. ಆಸ್ಪತ್ರೆಗಳಿಗೆ ಹೋದಾಗ ಇಂಡಿಯಾದಿಂದ ಬಂದಿದ್ದ 4 ಜನ ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಅವರ ಅನುಭವ ಪಡೆಯುವ ಅವ ಕಾಶ ದೊರೆಯಿತು. ಅವರ ಪೈಕಿ ಮೈಸೂರಿನವರು ಒಬ್ಬರು ಇಲ್ಲಿಂದ ಎಂ.ಬಿ.ಬಿ.ಎಸ್. ಪದವಿ ಪಡೆದು ಕೆಲವು ವರ್ಷ ಇಂಡಿ ಯಾದ ಆಸ್ಪತ್ರೆಗಳಲ್ಲಿ ಕೆಲಸ ಮಾಡಿ ಅನಂತರ ಅಲ್ಲಿಗೆ ಮುಂದಿನ ವ್ಯಾಸಂಗಕ್ಕಾಗಿ ಬಂದಿದ್ದರು. ಆ ದೇಶದಲ್ಲಿ ಅಲ್ಲಿಯ M.D. ಡಿಗ್ರಿ

ಪಡೆದ ಹೊರತು ಯಾರೂ ಡಾಕ್ಟರ್ ಕೆಲಸ ಮಾಡುವ ಹಾಗಿಲ್ಲ. ಬ್ರಿಟನ್ನಿನ F.R.C S. ಪದವಿ ಪಡೆದಿದ್ದರೂ ಅಮೆರಿಕಾದ ಎಂ.ಡಿ. ಪದವಿ ಪಡೆದಿದ್ದರೆ ಮಾತ್ರ ಅಲ್ಲಿ ಕೆಲಸ ಮಾಡಲು ಸಾಧ್ಯವೆ ಹೊರತು, ಇಲ್ಲದಿದ್ದರೆ ಇಲ್ಲ. ಇದನ್ನು ತಿಳಿದುಕೊಂಡ ಮೇಲೆ ನಾನು ನನ್ನ ಸ್ನೇಹಿತರುಗಳನ್ನು ನಿಜವಾಗಿ ಆಸ್ಪತ್ರೆಗಳಲ್ಲಿ ಏನು ಕೆಲಸ ಮಾಡುವಿರಿ ಎಂದು ಕೇಳಿದೆ. ಈ ಮಾತನ್ನು ಕೇಳಿದೊಡನೆ ಅವರುಗಳಲ್ಲಿ ಕಣ್ಣೀರು ಬಂದಿತು. ಏಕೆಂದರೆ ಇಂಡಿಯಾದಿಂದ ಹೊರಡುವಾಗ ನಾವು ಅಮೆರಿಕಾದ ಆಸ್ಪತ್ರೆಗಳಲ್ಲಿ ಡಾಕ್ಟರ್ ಆಗಿ ಕೆಲಸ ಮಾಡುತ್ತೇವೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಅಲ್ಲಿಗೆ ಹೋದ ಮೇಲೆ ಪರಿಸ್ಥಿತಿಯೆ ಸಂಪೂರ್ಣವಾಗಿ ಬದಲಾಗುತ್ತದೆ. ಇವರುಗಳನ್ನು ಸಾಮಾನ್ಯವಾಗಿ ತಿಂಗಳಿಗೆ 300 ರಿಂದ 400 ಡಾಲರು ಸಂಭಾವನೆ ಮೇಲೆ ನೇಮಿಸಿಕೊಂಡಿರುತ್ತಾರೆ. ಅಂದರೆ ಆ ದೇಶವಲ್ಲಿ 300 ಡಾಲರುಗಳನ್ನು ಆಸ್ಪತ್ರೆ ಜವಾನನಿಗೆ ಕೊಡುತ್ತಾರೆ. ಇದೇ ಸಂಭಾವನೆಗೆ ಆ ದೇಶದಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದವರಾರೂ ಸಿಗುವುದಿಲ್ಲ. ಆದುದರಿಂದ ಇಂಡಿಯಾ ದವರನ್ನು ನೇಮಿಸಿಕೊಳ್ಳುವುದು ತುಂಬಾ ಅಗ್ಗ ಎಂಬ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತಾರೆ. ಜೊತೆಗೆ ಒಂದೆರಡು ವರ್ಷ ಇವರನ್ನು ಅಲ್ಲಿಯ ವೈದ್ಯಕೀಯ ಪ್ರೊಫೆಸರ್‌ಗಳು ಪರೀಕ್ಷಿಸಿ ಅನಂತರ ಇವರಿಗೆ ಓದಲು ಅವಕಾಶ ಕೊಡುತ್ತಾರೆ. ಇಲ್ಲದಿದ್ದರೆ ಆಸ್ಪತ್ರೆಯಲ್ಲಿ ಕೆಲಸ ಮಾಡಿ ಅನುಭವ ಪಡೆದಷ್ಟೇ ಲಾಭ, ಇವರು ಗಳು ವಾಪಸ್ಸು ಬರಬೇಕಾಗುತ್ತದೆ. ಆಸ್ಪತ್ರೆಗಳಲ್ಲಿ ಇವರ ಕೈಯಲ್ಲಿ ನರ್ಸ್‌ಗಳು ಮಾಡುವ ಕೆಲಸ ಮಾಡಿಸುತ್ತಾರೆ. ಜೊತೆಗೆ ಅಲ್ಲಿಯ

ವೈದ್ಯರುಗಳಿಗೆ ಸಹಾಯಕರಾಗಿ ಕೆಲಸ ಮಾಡಿಕೊಂಡಿರುತ್ತಾರೆ. ಇವರ ಪರಿಸ್ಥಿತಿಯನ್ನು ನೋಡಿ ನಾನು ನನ್ನ ಸ್ನೇಹಿತರಿಗೆ ಕೇಳಿದೆ. "ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಅಥವ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೀವುಗಳು ಬಂದರೆ ಗ್ರಾಮಗಳಿಂದ ಬರುವ ಅವಿದ್ಯಾವಂತ ಬಡಜನರು ಎದ್ದು ನಿಂತುಕೊಂಡು ದೇವ ರಿಗೆ ಕೈ ಮುಗಿಯುವ ಹಾಗೆ, ನಿಮಗೆ ಕೈ ಮುಗಿಯುತ್ತಾರೆ. ಆದರೆ ಅಲ್ಲಿ ಕೆಲವು ವೈದ್ಯರುಗಳಿಗೆ ನಮ್ಮ ಜನರನ್ನು ತಿರುಗಿ ನೋಡುವಷ್ಟು ಕರುಣೆಯೂ ಇರುವುದಿಲ್ಲ. ಈಗ ಅಮೆರಿಕಾದಲ್ಲಿ ನಾವುಗಳು ಯಾವ ಕೆಲಸ ಬೇಕಾದರೂ ಮಾಡಲು ಸಿದ್ಧವಾಗಿದ್ದೇವೆ. ಇದೇ ಮನೋಭಾವನೆಯನ್ನು ನಮ್ಮ ದೇಶದಲ್ಲಿ ತೋರಿಸಿದರೆ ಹೇಗಿರು ತ್ತದೆ ಎಂದು ಪ್ರಶ್ನಿಸಿದೆ". ಆಗ ನನ್ನ ಸ್ನೇಹಿತರಿಂದ ಮಾತೇ ಹೊರಡಲಿಲ್ಲ. ಏನೋ ಅಮೆರಿಕಾಕ್ಕೆ ಬಂದ ಮೇಲೆ ನಮಗಿರುವ ವಿದ್ಯಾಭ್ಯಾಸದ ಮಟ್ಟ ಎಷ್ಟು ಎಂಬುದು ತಿಳಿಯಿತು ಮತ್ತು ಬುದ್ಧಿ ಬಂದಿತು ಎಂದು ಹೇಳಿ ಸುಮ್ಮನಾದರು. ಇಂತಹ ಪರಿ ಸ್ಥಿತಿಯನ್ನು ಅನುಭವಿಸಬೇಕಾದುದರಿಂದಲೇ ವೈದ್ಯಕೀಯ ವಿಷಯ ಗಳಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಹೋಗುವವರು ಒಂದು ಪದವಿ ಯನ್ನು ಪಡೆಯಲು ಆರೇಳು ವರ್ಷ ಕಾಲ ಆ ದೇಶದಲ್ಲಿ ಹೋರಾ ಡುತ್ತಿರುತ್ತಾರೆ.

ಇದುವರೆಗೆ ಅಮೆರಿಕಾದ ವಿಶ್ವವಿದ್ಯಾನಿಲಯಗಳಲ್ಲಿರುವಾಗ ಇಂಡಿ ಯಾದ ವಿದ್ಯಾರ್ಥಿಗಳ ಮೇಲೆ ಶೈಕ್ಷಣಿಕವಾಗಿ ಮತ್ತು ಸಾಮಾಜಿಕ ವಾಗಿ ಎಂತಹ ಪರಿಣಾಮಗಳುಂಟಾಗುತ್ತವೆ ಎಂಬುದನ್ನು ವಿಶ್ಲೇ

ಷಣೆ ಮಾಡಲಾಯಿತು. ಮುಂದಿನ ಅಧ್ಯಾಯದಲ್ಲಿ ಇಂಡಿಯಾದ ವಿದ್ಯಾರ್ಥಿಗಳು ಅಮೆರಿಕಾದಲ್ಲಿರುವಾಗ ಯಾವ ರೀತಿ ನಡೆದು ಕೊಂಡು ಅಲ್ಲಿಯ ಸಮಾಜದ ಮೇಲೆ ತಮ್ಮ ಪ್ರಭಾವ ಬೀರುತ್ತಾರೆ ಎಂಬುದನ್ನು ಚರ್ಚಿಸೋಣ.

ಅಧ್ಯಾಯ ೫

ಅಮೆರಿಕಾದಲ್ಲಿರುವಾಗ ಇಂಡಿಯಾದ ವಿದ್ಯಾರ್ಥಿಗಳ ನಡವಳಿಕೆ ಮತ್ತು ಅದರ ಪರಿಣಾಮಗಳು

ಕೆಲವು ಇಂಡಿಯಾದ ವಿದ್ಯಾರ್ಥಿಗಳು ತಮ್ಮ ನಡವಳಿಕೆಯಿಂದ ನಮ್ಮ ದೇಶಕ್ಕೆ ಕೆಟ್ಟ ಹೆಸರು ತಂದಿರುವರಲ್ಲದೆ ಅಮೆರಿಕನರಲ್ಲಿಯೂ ಇಂಡಿಯಾದ ವಿಷಯದಲ್ಲಿ ಕಹಿ ಭಾವನೆ ಉಂಟಾಗುವಂತೆ ಮಾಡಿದ್ದಾರೆ. ನಮ್ಮ ದೇಶದ ಕೆಲವು ವಿದ್ಯಾರ್ಥಿಗಳು ಇಂಡಿಯಾದ ಸಮಾಜವನ್ನು ಅಮೆರಿಕನರ ಎದುರಿಗೆ ಹೀಯಾಳಿಸುವುದರ ಮೂಲಕ ಒಂದು ಅದ್ಭುತವನ್ನು ಸಾಧಿಸಿದಂತೆ ಎಂದು ಭಾವಿಸುತ್ತಾರೆ. ಅಮೆರಿಕನರ ಮೆಚ್ಚುಗೆಯನ್ನು ಪಡೆಯುವುದಕ್ಕಾಗಿ ಮತ್ತು ಅವರಿಂದ ಹಣ ಪಡೆಯುವುದಕ್ಕಾಗಿ ನಮ್ಮ ವಿದ್ಯಾರ್ಥಿ ಸ್ನೇಹಿತರನೇಕರು ತುಂಬಾ ಕೀಳು ಮಾರ್ಗಕ್ಕೆ ಇಳಿದು ನಮ್ಮ ದೇಶದ ಗೌರವಕ್ಕೆ ಕಳಂಕ ತಂದಿದ್ದಾರೆ. ಈ ಅಧ್ಯಾಯದಲ್ಲಿ ಅಂತಹವರು ಅನುಸರಿಸುವ ಮಾರ್ಗಗಳಾವುವು ಮತ್ತು ಅದರಿಂದುಂಟಾಗಿರುವ ದುಷ್ಪರಿಣಾಮಗಳೇನು ಎಂಬುದನ್ನು ಕುರಿತು ಚರ್ಚಿಸಲಾಗಿದೆ.

ಅಮೆರಿಕಾಕ್ಕೆ ಹೋದ ಮೇಲೆ ನಮ್ಮಲ್ಲಿ ಕೆಲವರಿಗೆ ಅಲ್ಲಿಯ ನಿತ್ಯಜೀವನ ಮತ್ತು ಸಾಮಾಜಿಕ ನಡವಳಿಕೆಗಳನ್ನು ನೋಡಿದ ಮೇಲೆ ಅಲ್ಲಿಯೇ ಇರಬೇಕೆಂಬ ಆಶೆ ಬರುತ್ತದೆ. ಆದರೆ ಅಲ್ಲಿ

ವಿದ್ಯಾರ್ಥಿಯಾಗಿ ಹೋದವನಿಗೆ ವಿದ್ಯಾಭ್ಯಾಸದ ಅವಧಿ ಮುಗಿದ ಮೇಲೆ ಇರಲು ಅವಕಾಶ ಕೊಡುವುದಿಲ್ಲ. ನಿಮ್ಮ ದೇಶಗಳಿಗೆ ವಾಪಸ್ಸು ಹೋಗಿ ನಿಮ್ಮ ವಿದ್ಯೆಯ ಸದುಪಯೋಗಪಡಿಸಿಕೊಂಡು ನಿಮ್ಮ ದೇಶದ ಅಭಿವೃದ್ಧಿಯನ್ನು ಸಾಧಿಸಿರಿ ಎಂದು ನಮ್ಮಗಳಿಗೆ ಅಮೆರಿಕನ್ ಪ್ರೊಫೆಸರುಗಳು ಹೇಳುತ್ತಲೇ ಇರುತ್ತಾರೆ. ಆದುದ ರಿಂದ ಪ್ರತಿ 6 ತಿಂಗಳಿಗೊಮ್ಮೆ ನಾವು ಏನು ಮಾಡುತ್ತಿದ್ದೇವೆ ಅಥವ ಎಷ್ಟರ ಮಟ್ಟಿನ ಪ್ರಗತಿ ಸಾಧಿಸುತ್ತಿದ್ದೇವೆ ಎಂದು ಅಮೆರಿಕಾದ ವಿದೇಶಾಂಗ ಇಲಾಖೆಯ ಅಧೀನದಲ್ಲಿರುವ ವಲಸೆ ಗಾರರ ಶಾಖೆಗೆ (Immigration department) ವಿಶ್ವವಿದ್ಯಾ ನಿಲಯದವರು ತಿಳಿಸುತ್ತಲೇ ಇರುತ್ತಾರೆ. ನಾವುಗಳು ನಮ್ಮ ವಿದ್ಯಾಭ್ಯಾಸದಲ್ಲಿ ಪ್ರಗತಿ ತೋರಿಸದೆ ಹೋದರೆ ವಿಶ್ವವಿದ್ಯಾನಿಲಯ ದವರು ವಾಪಸ್ಸು ಹೋಗಿ ಎನ್ನುತ್ತಾರೆ. ಈ ಸಮಾಚಾರ ವಲಸೆ ಗಾರರ ಇಲಾಖಾ ಅಧಿಕಾರಿಗಳಿಗೂ ಹೋಗುತ್ತದೆ. ಆಗ ಅವರು ಬಂದು ನಮ್ಮನ್ನು ತನಿಖೆ ಮಾಡುತ್ತಾರೆ. ನಾವು ಯಾವುದೇ ಉದ್ಯೋಗದಲ್ಲಿ ಇಲ್ಲದಿದ್ದರೆ ಅಥವ ವಿದ್ಯಾಭ್ಯಾಸ ಮಾಡದಿದ್ದರೆ ದೇಶದಿಂದ ಹೊರಕ್ಕೆ ಕಳುಹಿಸುತ್ತಾರೆ. ಜೊತೆಗೆ ನಾವುಗಳು ಆ ದೇಶದಲ್ಲಿದ್ದುಕೊಂಡು ಅವರೊಡನೆ ಕೆಲಸಗಳಿಗೆ ಪೈಪೋಟಿ ನಡೆಸು ವುದು ಸ್ವಲ್ಪವೂ ಅಮೆರಿಕನರಿಗೆ ಇಷ್ಟವಿಲ್ಲ. ಏನೋ ನಮ್ಮಗಳಲ್ಲಿ ಬಹಳ ಮೇಧಾವಿಗಳಿದ್ದರೆ ಅವರೇ ನಮ್ಮನ್ನು ಆಹ್ವಾನಿಸಿ ಇರಿಸಿ ಕೊಳ್ಳುತ್ತಾರೆ. ಇಲ್ಲದಿದ್ದರೆ ನಾವುಗಳು ಹೋದರೆ ಸಾಕು ಎನ್ನು ತ್ತಾರೆ. ಇದರಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ಅನೇಕ ಇಂಡಿಯಾದ

ವಿದ್ಯಾರ್ಥಿಗಳು ನಮ್ಮ ದೇಶದ ಮೇಲೆ ಇಲ್ಲದ ಅಪಪ್ರಚಾರ ಮಾಡುತ್ತಿರುತ್ತಾರೆ.

"ಇಂಡಿಯಾ ದೇಶಕ್ಕೆ ವಾಪಸ್ಸು ಹೋದರೆ ನಮಗೆ ತಿನ್ನುವುದಕ್ಕೆ ಅನ್ನವಿಲ್ಲ, ಮಾಡುವುದಕ್ಕೆ ಕೆಲಸವಿಲ್ಲ, ಆದುದರಿಂದ ಇಲ್ಲಿಯೇ ಇದ್ದುಕೊಂಡು ನಮಗೆ ಓದಲು ಅವಕಾಶ ಕೊಡಿ" ಎಂದು ಅಲ್ಲಿಯ ಪ್ರೊಫೆಸರುಗಳನ್ನು ನಾನಾ ವಿಧವಾಗಿ ಕಾಡಿಸುತ್ತಾರೆ. ಬುದ್ಧಿವಂತರಾದ ಪ್ರೊಫೆಸರುಗಳು ಮತ್ತು ಇಂಡಿಯಾ ದೇಶವನ್ನು ನೋಡಿರುವವರು ಇಂತಹವರುಗಳ ಮಾತಿಗೆ ಮರುಳಾಗದೆ ವಾಪಸ್ಸು ನಿಮ್ಮ ದೇಶಕ್ಕೆ ಹೋಗಿ ಅನ್ನುತ್ತಾರೆ. ಆದರೆ ಕೆಲವರು ಇವರುಗಳ ಹೊಗಳಿಕೆಗೆ ಮನಸೋತು, ಇಂಡಿಯಾದ ವಿದ್ಯಾರ್ಥಿಗಳು ಇರಲು ಇನ್ನೇನಾದರೂ ಅವಕಾಶ ಮಾಡಿಕೊಡುತ್ತಾರೆ. ನಮ್ಮ ವಿದ್ಯಾರ್ಥಿಗಳಲ್ಲಿ ಕೆಲವರು ತಮ್ಮ ಕೆಲಸ ಸಾಧಿಸಿಕೊಳ್ಳಲು ಅಮೆರಿಕನ್ ಪ್ರೊಫೆಸರುಗಳ ಮುಂದೆ ಮತ್ತು ನಾಗರಿಕರ ಮುಂದೆ ಅಮೆರಿಕನ್ ಸಮಾಜವನ್ನು ಮನಸಾರೆ ಹೊಗಳಿ ಹಿಂದೂ ಸಮಾಜವನ್ನು ಆದಷ್ಟು ತೆಗಳುತ್ತಾರೆ. ಆಗ ಅಮೆರಿಕನರು ಇಂತಹವರಿಗೆ ವಾಣಿಜ್ಯಶಾಸ್ತ್ರ ಅಥವ ಅರ್ಥಶಾಸ್ತ್ರ ಓದಲು ಆಗದಿದ್ದರೆ ಚರಿತ್ರೆ ಓದಲು ಹೋಗು ಅಥವ ಸಮಾಜಶಾಸ್ತ್ರ ಓದಲು ಹೋಗು ಎಂದು ಶಿಫಾರಸ್ಸು ಮಾಡಿ ಆ ಇಲಾಖೆಗಳಲ್ಲಿ ಜಾಗ ಕೊಡಿಸುತ್ತಾರೆ. ಇದೇ ರೀತಿ ಕಠಿಣವಾದ ಗಣಿತಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಇತ್ಯಾದಿ ಭಾಗಗಳಲ್ಲಿರುವ ವಿದ್ಯಾರ್ಥಿಗಳಿಗೆ ಆ ಭಾಗಗಳಲ್ಲಿ ಓದಲು ಆಗದಿದ್ದರೆ ಬೇರೆ ಯಾವುದಾದರೂ ಭಾಗದಲ್ಲಿ ಓದಲು ಏರ್ಪಾಡು ಮಾಡಿಕೊಡುತ್ತಾರೆ. ಇದಾವುದೂ

ಆಗದಿದ್ದರೆ ಅಲ್ಲಿಯ ಪ್ರಯೋಗ ಶಾಲೆಗಳಲ್ಲಿ ಅಥವ ಪುಸ್ತಕ ಭಂಡಾರದಲ್ಲಿ ಅಥವಾ ಅಲ್ಲಿಯ ಯಾವುದಾದರೂ ವಾಣಿಜ್ಯ ಸಂಸ್ಥೆಯಲ್ಲಿ ಅಥವ ಕಾರಖಾನೆಯಲ್ಲಿ ಒಂದು ಸಣ್ಣ ಕೆಲಸ ಕೊಡಿಸುತ್ತಾರೆ. ಇದರಿಂದ ಇವರಿಗೆ ತಿಂಗಳಿಗೆ 150 ರಿಂದ 200 ಡಾಲರುಗಳವರೆಗೆ ಸಂಭಾವನೆ ಬರುತ್ತದೆ. ಜೀವನ ನಡೆಸಲು ಸಾಕಾಗುತ್ತದೆ. 7 ವರ್ಷಗಳ ತನಕ ಯಾವುದಾದರೂ ಒಂದು ಬ್ಯಾಚುಲರ್ ಅಥವ ಮಾಸ್ಟರ್ ತರಗತಿಯಲ್ಲಿ ಸೇರಿಕೊಂಡು ದೇಶದಿಂದ ಹೊರಕ್ಕೆ ಅಟ್ಟುವುದನ್ನು ತಪ್ಪಿಸಿಕೊಳ್ಳುತ್ತಾರೆ. ಏಕೆಂದರೆ ಒಂದು ಸಲ ವಿದ್ಯಾರ್ಥಿಯಾಗಿ ಹೋದವನು 7 ವರ್ಷಗಳ ತನಕ ಅಲ್ಲಿರಬಹುದು. ಅದನ್ನು ಮೀರಿದ ಮೇಲೆ ಹೊರಗೆ ಅಟ್ಟುತ್ತಾರೆ. ಅಷ್ಟರೊಳಗೆ ಯಾವುದಾದರೂ ಪದವಿ ಪಡೆದು ಅಲ್ಲಿಯೇ ಯಾವುದಾದರೂ ಕೆಲಸ ಹುಡುಕಿಕೊಳ್ಳಬೇಕು. ಇಲ್ಲದಿದ್ದರೆ ಅಮೆರಿಕನ್ ಸ್ತ್ರೀ ಒಬ್ಬಳನ್ನು ಮದುವೆಯಾಗಿ ಅಲ್ಲಿಯೇ ಇರಲು ಏರ್ಪಾಡು ಮಾಡಿಕೊಳ್ಳಬೇಕು. ಇಂತಹವರುಗಳಿಂದ ನಮ್ಮ ದೇಶಕ್ಕೆ ಎಷ್ಟು ಅಪಮಾನವಾಗುತ್ತದೆ ಎಂದು ಹೇಳತೀರದು.

ನಮ್ಮ ದೇಶದವರಲ್ಲಿ ಇನ್ನೂ ಕೆಲವು ಬುದ್ಧಿವಂತರು ಮತ್ತೊಂದು ಮಾರ್ಗ ಹುಡುಕುತ್ತಾರೆ. ಅಲ್ಲಿ ಅನೇಕ ಪಂಥಗಳಿಗೆ ಸೇರಿದ ಚರ್ಚುಗಳಿವೆ. ಅವುಗಳಿಗೆ ಸಾಕಷ್ಟು ಕಾಣಿಕೆಗಳು ಬರುತ್ತಿರುತ್ತವೆ. ಚರ್ಚ್‌ನ ಅಧಿಕಾರಿಗಳು ತಮಗೆ ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ಪರದೇಶದಿಂದ ಬಂದ ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಉಪಯೋಗಿಸುತ್ತಾರೆ. ಇದರ ಉಪಯೋಗ ಪಡೆದುಕೊಂಡು ಜೀವಿಸಬೇಕು ಎನ್ನುವವರು ಚರ್ಚ್‌ನ ಅಧಿಕಾರಿಗಳ

ಮುಂದೆ ಹೋಗಿ ಮನಸಾರೆ ಕ್ರೈಸ್ತ ಧರ್ಮವನ್ನೂ ಮತ್ತು ಅಮೆರಿಕನ್ ಸಮಾಜದ ನಡೆವಳಿಕೆಗಳನ್ನು ಹೊಗಳುತ್ತಾರೆ. ಅದೇ ಸಮಯದಲ್ಲಿ ಹಿಂದೂ ಧರ್ಮದಲ್ಲಿರುವ ಜಾತಿ ಪದ್ಧತಿಯನ್ನು ಎತ್ತಿ ತೋರಿಸಿ ಹಿಂದೂ ಧರ್ಮವನ್ನು ಮನಸಾರೆ ತೆಗಳುತ್ತಾರೆ. ಹಿಂದೂ ಧರ್ಮದಲ್ಲಿ ಜಾತಿ ಪದ್ಧತಿ, ಅಸ್ಪೃಶ್ಯತೆ ಮತ್ತು ಇನ್ನು ಕೆಲವು ನಡವಳಿಕೆಗಳು ಇರುವುದರಿಂದಲೇ ತಾವು ಇಂಡಿಯಾಕ್ಕೆ ಹೋಗಲು ಇಷ್ಟಪಡುವುದಿಲ್ಲ ಎಂದು ಹೇಳಿ, ಅವರನ್ನು ಉಬ್ಬಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಾರೆ.

ಇಂಡಿಯಾದಿಂದ ಹೋದ ವಿದ್ಯಾರ್ಥಿಗಳಲ್ಲಿ ಅನೇಕರು ಸ್ವಾಭಿಮಾನಿಗಳು, ದೇಶ ಭಕ್ತರು ಆಗಿರುತ್ತಾರೆ. ಆದರೆ ಅವರುಗಳು ಮೇಲೆ ಹೇಳಿದಂತಹ ಸಣ್ಣ ಬುದ್ಧಿಯುಳ್ಳ ಕೆಲವು ಸ್ನೇಹಿತರ ಅಪಪ್ರಚಾರವನ್ನು ತಡೆಯಲು ಶಕ್ತರಾಗಿರುವುದಿಲ್ಲ. ಏಕೆಂದರೆ ಇವರುಗಳಿಗೆ (ಸ್ವಾಭಿಮಾನಿಗಳು ಮತ್ತು ದೇಶಭಕ್ತರು) ಸದಾ ಕಾಲದಲ್ಲಿಯೂ ಒಂದು ಪ್ರಮುಖ ಚಿಂತೆ ಇರುತ್ತದೆ. ಎಷ್ಟು ಹೊತ್ತಿಗೆ ತಾವು ಪದವಿಯನ್ನು ಪಡೆದು ಆ ದೇಶದ ಜನರ ಎದುರಿಗೆ ಮರ್ಯಾದೆ ಉಳಿಸಿಕೊಂಡರೆ ಸಾಕೆಂದು ಇವರುಗಳು ಹಗಲಿರುಳು ದುಡಿಯುತ್ತಿರುತ್ತಾರೆ. ಆದುದರಿಂದ ಸಣ್ಣ ಬುದ್ಧಿಯ ಜನರು ಮಾಡುವ ಅಪಪ್ರಚಾರವನ್ನು ತಡೆಗಟ್ಟಲು ಹೋಗದೆ ತಮ್ಮ ಕಾರ್ಯದಲ್ಲೆ ತಾವು ಮಗ್ನರಾಗಿರುತ್ತಾರೆ. ಜೊತೆಗೆ ಸಣ್ಣ ಬುದ್ಧಿಯುಳ್ಳ ಜನರು ನಾನಾ ತಂತ್ರಗಳನ್ನು ಉಪಯೋಗಿಸಿಕೊಂಡು ಅಪಪ್ರಚಾರದಲ್ಲಿ ತೊಡಗಿರುತ್ತಾರೆ. ಆದುದರಿಂದ ಅಂತಹವರನ್ನು ವಿರೋಧಿಸುವುದೂ ಕಷ್ಟವಾಗುತ್ತದೆ.

ಇದರ ಜೊತೆಗೆ ಇಂಡಿಯಾದಿಂದ ಬರುವ ಮುಸಲ್ಮಾನ ವಿದ್ಯಾರ್ಥಿಗಳ ಅಪಪ್ರಚಾರವನ್ನು ಎದುರಿಸುವುದು ಮತ್ತೊಂದು ಪ್ರಮುಖ ಸಮಸ್ಯೆಯಾಗಿರುತ್ತದೆ. ಒಂದಲ್ಲ ಒಂದು ಸಮಯ ಹಿಂದೂ ವಿದ್ಯಾರ್ಥಿಗಳಿಂದಾಗುವ ಅಪಪ್ರಚಾರವನ್ನಾದರೂ ಎದುರಿಸಬಹುದು. ಆದರೆ ಮುಸಲ್ಮಾನ ವಿದ್ಯಾರ್ಥಿಗಳಿಂದ ಆಗುವ ಅಪಪ್ರಚಾರವನ್ನೂ ತಡೆಗಟ್ಟಲಂತೂ ಸಾಧ್ಯವೆ ಇಲ್ಲವಾಗಿದೆ. ಇಂಡಿಯಾದಿಂದ ಅನುಮತಿ ಪಡೆದು ಅಲ್ಲಿ ಓದುವುದಕ್ಕೆ ಬರುವ ಮುಸಲ್ಮಾನ ವಿದ್ಯಾರ್ಥಿಗಳ ಪೈಕಿ 100ಕ್ಕೆ 98 ಜನರು ತಾವು ಇಂಡಿಯಾದ ನಾಗರಿಕರೆಂದೂ ಕೂಡ ಹೇಳಿಕೊಳ್ಳುವುದಿಲ್ಲ. ಅಲ್ಲಿಗೆ ಬಂದು ಸೇರಿದೊಡನೆಯೆ ಅವರ ಸ್ನೇಹವೆಲ್ಲಾ ಪಾಕಿಸ್ತಾನ ಅಥವ ಅರಬ್ ದೇಶಗಳ ವಿದ್ಯಾರ್ಥಿಗಳೊಡನೆ. ನಮ್ಮೆದುರಿಗೆ ಅನೇಕಜನರ ಮುಂದೆ ತಾವು ಪಾಕಿಸ್ತಾನಿಗಳೆಂದು ಕರೆದುಕೊಳ್ಳುತ್ತಾರೆ. ಅವಕಾಶ ಸಿಕ್ಕಿದಾಗಲೆಲ್ಲಾ ಇಂಡಿಯಾದ ಮೇಲೆ ಎಷ್ಟು ಅಪಪ್ರಚಾರ ಮಾಡಬಹುದೋ ಅಷ್ಟನ್ನು ಇವರು ಮಾಡುತ್ತಾರೆ. ಇವರ ಮೊದಲ ಮಾತು ಅಂದರೆ ಇಂಡಿಯಾ ದೇಶದಲ್ಲಿ ಹಿಂದುಗಳಿಗೆ ಅಲ್ಲದೆ ಬೇರೆಯವರಿಗೆ ಸ್ಥಾನವಿಲ್ಲ. ಮುಸಲ್ಮಾನರನ್ನಂತೂ ದ್ವೇಷದಿಂದ ಕಾಣುತ್ತಾರೆ ಎಂದು ಅಳುತ್ತಾ ಅವರುಗಳ ಮುಂದೆ ಹೇಳಿಕೊಳ್ಳುತ್ತಾರೆ. 1947 ರಲ್ಲಿ ದೇಶ ವಿಭಜನೆಯಾದಾಗ ತಮ್ಮ ತಂದೆ, ತಾಯಿಗಳನ್ನೆಲ್ಲಾ ಹಿಂದುಗಳು ಕೊಂದುಬಿಟ್ಟರೆಂದೂ, ತಮ್ಮಗಳಿಗೆ ಈಗ ಇರಲು ಮನೆ ಇಲ್ಲ, ತಿನ್ನಲು ಅನ್ನವಿಲ್ಲ, ಆದರೂ ಹೇಗೋ ಕಷ್ಟಪಟ್ಟು ಇಲ್ಲಿಯವರೆಗೆ ಬಂದಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ. ಜೊತೆಗೆ ಆಗಿ

ನಿಂದಲೇ ಪ್ರಾರಂಭ ಮಾಡುತ್ತಾರೆ ; ನಮಗೆ ಹೇಗಾದರೂ ಮಾಡಿ ಅಮೆರಿಕಾ ದೇಶದಲ್ಲಿ ಇರಲು ಅವಕಾಶ ಕೊಡಿ ಎಂದು ಕೇಳಿಕೊಳ್ಳು ತ್ತಾರೆ. ಇಂಡಿಯಾಕ್ಕೆ ಪಿ.ಎಚ್ ಡಿ. ಪದವಿ ಪಡೆದು ಹೋದರೂ ತಮಗೆ ಕೆಲಸ ಸಿಗುವುದಿಲ್ಲ, ಆದುದರಿಂದಲೇ ತಾವು ಇಲ್ಲಿರಬೇಕೆಂದು ಇಷ್ಟಪಡುವುದು ಎಂದು ಹೇಳಿಕೊಳ್ಳುತ್ತಾರೆ. ಸ್ವಲ್ಪ ದಿನಗಳಾದ ಮೇಲೆ ಇವರುಗಳು ಇರುವ ಊರಿನಲ್ಲಿ ಕೆಲವು ಪ್ರಮುಖರ ಸ್ನೇಹ ಬೆಳೆಯಿಸಿಕೊಳ್ಳುತ್ತಾರೆ. ಇಂಡಿಯಾದಿಂದ ಬರುವಾಗಲೇ ತೀರ್ಮಾನ ಮಾಡಿಕೊಂಡು ಬಂದಿರುತ್ತಾರೆ. ಆಧಷ್ಟು ದಿನ ಅಮೆರಿಕಾದಲ್ಲಿ ಇರಲು ಪ್ರಯತ್ನಿಸುವುದು, ಸಾಧ್ಯವಾದರೆ ಅಲ್ಲಿಯೇ ಇದ್ದು ಬಿಡು ವುದು ಎಂದು. ಅದಕ್ಕೋಸ್ಕರ ಕೆಲವು ಅಮೆರಿಕನ್ ಕುಟುಂಬ ಗಳಿಗೆ ಪತ್ರ ಬರೆಯಲು ಏರ್ಪಾಡು ಮಾಡುತ್ತಾರೆ. ಈ ಪತ್ರಗಳಲ್ಲಿ ಅವರು ಇಂಡಿಯಾದಲ್ಲಿ ಯಾವ ರೀತಿ ಮುಸಲ್ಮಾನರಿಗೆ ತೊಂದರೆ ಕೊಡಲಾಗುತ್ತಿದೆ ಎಂದು ವರ್ಣಿಸಿರುತ್ತಾರೆ. ಜೊತೆಗೆ ಅಮೆರಿಕನ್ ಕುಟುಂಬದವರೇ ತಮ್ಮ ಹುಡುಗರಿಗೆ ತಂದೆ, ತಾಯಿಗಳೆಂದು ಹೊಗಳಿ, ತಮ್ಮ ಹುಡುಗರು ಅಮೆರಿಕಾದಲ್ಲಿರುವ ತನಕ ಸಹಾಯ ಮಾಡಬೇಕೆಂದು ಬರೆಸುತ್ತಾರೆ. ಸ್ವಾಭಾವಿಕವಾಗಿ ಇಂತಹ ಪತ್ರಗಳು ಬಂದ ಮೇಲೆ ಸಾಮಾನ್ಯ ಅಮೆರಿಕನ್ ಕುಟುಂಬಗಳು ಇವರ ಹೊಗ ಳಿಕೆಗೆ ಮರುಳಾಗುತ್ತಾರೆ. ಸಹಾಯಮಾಡಲು ಆರಂಭಿಸುತ್ತಾರೆ.

ಇದಾದ ಮೇಲೆ ಮತ್ತೊಂದು ವಿಧಾನ ಅನುಸರಿಸುತ್ತಾರೆ. ಆಗಿಂದಾಗ್ಗೆ ರಜಾ ದಿನಗಳಲ್ಲಿ ಅಮೆರಿಕನ್ ಕುಟುಂಬಗಳು ಇವರನ್ನ ಮಧ್ಯಾಹ್ನದ ವೇಳೆ ಅಥವ ಸಾಯಂಕಾಲದ ವೇಳೆ ಊಟ, ತಿಂಡಿ ಗಾಗಿ ಕರೆಯುತ್ತಿರುತ್ತಾರೆ. ಅಂತಹ ಸಂದರ್ಭಗಳನ್ನು ಇವರು

ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಆಗ ಅಮೆರಿಕನರು ಇಂಡಿಯಾದ ಸಾಮಾಜಿಕ ನಡವಳಿಕೆಗಳ ವಿಷಯವಾಗಿ ಹಲವಾರು ಪ್ರಶ್ನೆಗಳನ್ನು ಹಾಕುತ್ತಿರುತ್ತಾರೆ. ಇವರು ಉತ್ತರ ಕೊಡುವಾಗ ಇಂಡಿಯಾ ದೇಶಕ್ಕೆ ಎಷ್ಟು ದ್ರೋಹ ಬಗೆಯಬಹುದೋ ಅಷ್ಟನ್ನು ಮಾಡುತ್ತಾರೆ. ಮುಸಲ್ಮಾನರ ನಡವಳಿಕೆಗೂ ಮತ್ತು ಅಮೆರಿಕನರ ನಡವಳಿಕೆಗೂ ಯಾವ ವ್ಯತ್ಯಾಸವಿಲ್ಲವೆಂತಲೂ, ಆದರ ಬದಲು ಅವರಿಬ್ಬರ ಮನೋಧರ್ಮ ಒಂದೇ ಅಂತಲು ಹೇಳಿಕೊಳ್ಳುತ್ತಾರೆ. (1) ಕ್ರೈಸ್ತರಲ್ಲಿ ಜಾತಿ ಪದ್ಧತಿ ಇಲ್ಲದ ಹಾಗೆ ಮುಸಲ್ಮಾನರಲ್ಲೂ ಇಲ್ಲವೆಂದೂ' ಆದರೆ ಹಿಂದುಗಳಲ್ಲಿ ಜಾತಿಪದ್ಧತಿ ತುಂಬಿ ತುಳುಕಾಡುತ್ತದೆ ಎಂದು ಹೇಳುತ್ತಾರೆ. (2) ಆಹಾರದ ವಿಷಯದಲ್ಲೂ ತಾವಿಬ್ಬರು ಒಂದೇ ಅಂದುಕೊಳ್ಳುತ್ತಾರೆ. ತಾವೂ ಕೂಡ ಹಂದಿಮಾಂಸ ಒಂದನ್ನು ಬಿಟ್ಟು ಉಳಿದ ಎಲ್ಲವನ್ನೂ ತಿನ್ನುತ್ತೇವೆ ಅನ್ನುತ್ತಾರೆ. (ಅಲ್ಲಿ ಇರುವ ಮುಸಲ್ಮಾನರು ಹಂದಿ ಮಾಂಸವನ್ನು ತಿಂದು ತಾವು ಮುಂದುವರಿದವರೆಂದು ಹೇಳಿಕೊಳ್ಳುತ್ತಾರೆ.) (3) ಕ್ರೈಸ್ತರಲ್ಲಿ ವಿಗ್ರಹಾರಾಧನೆ ಇಲ್ಲ. ಅದರಂತೆ ತಾವೂ ಕೂಡ ವಿಗ್ರಹಾರಾಧಕರಲ್ಲವೆಂದೂ, ಆದರೆ ಹಿಂದುಗಳಲ್ಲಿ ವಿಗ್ರಹಾರಾಧನೆ ಇಲ್ಲದೆ ಪೂಜೆಯೆ ಇಲ್ಲವೆಂದು ಹೇಳಿಕೊಳ್ಳುತ್ತಾರೆ. (4) ಕ್ರೈಸ್ತರಲ್ಲಿ ಎಷ್ಟು ಬಾರಿ ಬೇಕಾದರೂ ವಿವಾಹ ವಿಚ್ಛೇದನ ಮಾಡಿಕೊಳ್ಳುವಂತೆ ತಾವೂ ಕೂಡ ವಿವಾಹ ವಿಚ್ಛೇದನ ಅನುಸರಿಸುತ್ತೇವೆ ಅನ್ನುತ್ತಾರೆ. ಆದರೆ, ಹಿಂದೂಗಳಿಗೆ ವಿವಾಹ ವಿಚ್ಛೇದನ ಅಂದರೆ ರೇಗಿ ಬೀಳುತ್ತಾರೆ ಅನ್ನುತ್ತಾರೆ. (5) ಹಿಂದುಗಳು ಇಂಡಿಯಾದಲ್ಲಿ ಎಲ್ಲಾ

ಉನ್ನತ ಹುದ್ದೆಗಳನ್ನು ಆಕ್ರಮಿಸಿಕೊಂಡು ಮುಸಲ್ಮಾನರಿಗೆ ಕೇವಲ ನಾಲ್ಕನೆ ದರ್ಜೆ ನೌಕರಿಗಳನ್ನು ಮಾತ್ರ ಕೊಟ್ಟು ಅವಮಾನ ಗೊಳಿಸುತ್ತಾರೆ; ಅನ್ನುತ್ತಾರೆ. (6) ಜೊತೆಗೆ ತನ್ನ ಆಷಾಡಭೂತಿ ತನ ತೋರಿಸಲು ಭಾನುವಾರಗಳಲ್ಲಿ ಅವರುಗಳೊಂದಿಗೆ ಚರ್ಚಿಗೆ ಹೋಗುತ್ತಾರೆ.

ಮೇಲ್ಕಂಡ ರೀತಿಯಲ್ಲಿ ಹಿಂದೂ ಸಮಾಜವನ್ನು ಅವಹೇಳನ ಮಾಡಿದರೆ ಸಾಮಾನ್ಯ ಅಮೆರಿಕನರಿಗೆ ಇವರನ್ನು ಕಂಡರೆ ಅನುಕಂಪ ಉಂಟಾಗುತ್ತದೆ. ಇವರಿಗೆ ಬೇಕಾದುದು ಅದೆ. ಅವರಿಂದ ಆದಷ್ಟು ದುಡ್ಡನ್ನು ಪಡೆಯಲು ಯತ್ನಿಸುತ್ತಾರೆ. ವಿಶ್ವವಿದ್ಯಾನಿಲಯದಲ್ಲಿ ಅನುತ್ತೀರ್ಣರಾದರೂ ಯೋಚಿಸುವುದಿಲ್ಲ. ಅಮೆರಿಕನ್ ಕುಟುಂಬ ಗಳನ್ನು ಹಿಡಿದುಕೊಂಡು ಯಾವುದೋ ಒಂದು ಕೆಲಸ ಹುಡುಕಿ ಕೊಂಡು ಜೀವನ ತಳ್ಳಲು ಏರ್ಪಾಡು ಮಾಡಿಕೊಳ್ಳುತ್ತಾರೆ. ಇವರುಗಳಿಗೆ ಅನೇಕ ಸಲ ಅಲ್ಲಿಯ ಸಮಾಜದಲ್ಲಿ ದೊರಕುವ ಪ್ರೋತ್ಸಾಹವನ್ನು ನೋಡಿದರೆ ನಮ್ಮಗಳ ಮನಸ್ಸಿಗೆ ಎಷ್ಟು ದುಃಖ ವಾಗುತ್ತದೆ ಎಂದು ವರ್ಣಿಸಲಸಾಧ್ಯ.

ಇದರ ಜೊತೆಗೆ ಮತ್ತೊಂದು ಕಾರ್ಯಕ್ಕೆ ಇವರು ಬಹಳ ನಿಗಾ ಕೊಡುತ್ತಾರೆ. ಇವರುಗಳು ಓದುವ ಕಡೆ ಯಾರಾದರೂ ಹಿಂದೂ ವಿದ್ಯಾರ್ಥಿನಿ ಒಂಟಿಯಾಗಿ ಓದುತ್ತಿದ್ದರೆ ಮೊದಲು ಆಕೆಯನ್ನು ಆದಷ್ಟು ಜಾಗ್ರತೆ ಹಾಳುಮಾಡಬೇಕೆಂಬುದು ಇವರ ಮನೋಧರ್ಮ. ತಾವು ಇಂಡಿಯಾದವರು ಅನ್ನುವ ನೆಪದಲ್ಲಿ ಅವಳೊಡನೆ ಸ್ನೇಹ ಬೆಳೆಸುವುದು. ಸ್ವಲ್ಪ ದಿನಗಳಾದಮೇಲೆ ಅವಳನ್ನು ಅಮೆರಿಕನ್ ತರುಣಿಯರಂತೆ ಕ್ಲಬ್ಬುಗಳಿಗೆ ಮತ್ತು ನೃತ್ಯ

ಮಾಡುವ ಸ್ಥಳಗಳಿಗೆ ಕರೆದುಕೊಂಡು ಹೋಗುವುದು, ಅನಂತರ ಅವಳು ಸಂಪೂರ್ಣವಾಗಿ ಇವರ ಬಲೆಗೆ ಬಿದ್ದ ಮೇಲೆ ಮುಸಲ್ಮಾನ ಜಾತಿಗೆ ಸೇರಿಕೊಳ್ಳದಿದ್ದರೆ ನಿನ್ನನ್ನು ಮದುವೆಯಾಗುವುದಿಲ್ಲ ಅನ್ನುವುದು. ಹೀಗೆ ಮಾಡಿ ಹಿಂದೂ ತರುಣಿಯರನ್ನು ಮತಾಂತರ ಗೊಳಿಸಲು ತಮ್ಮ ಕೈಲಾದ ಯತ್ನವೆಲ್ಲವನ್ನೂ ಮಾಡುತ್ತಾರೆ. ಅನಂತರ ಅವಳನ್ನು ಮದುವೆಯಾದರೂ ಆಗುತ್ತಾರೆ. ಇಲ್ಲದಿದ್ದರೆ ಆಕೆಯ ಜೀವನ ಹಾಳುಮಾಡಿ ತಾವು ಬೇರೆ ಕಡೆಗೆ ಹೊರಡುತ್ತಾರೆ.

ಆದರೆ ವಾಚಕರು ಒಂದು ವಿಷಯವನ್ನು ಮಾತ್ರ ಗಮನದಲ್ಲಿಡ ಬೇಕೆಂದು ಪ್ರಾರ್ಥನೆ. ಮುಸಲ್ಮಾನರ ಪೈಕಿಯೂ ಕೂಡ ಕೆಲವರು ಒಳ್ಳೆಯವರು ಇರುತ್ತಾರೆ. ಆದರೆ ಅವರ ಸಂಖ್ಯೆ ತೀರಾ ಕಡಿಮೆ ಎನ್ನಬಹುದು. ಉತ್ತರ ಇಂಡಿಯಾದ ವಿವಿಧ ಭಾಗಗಳಿಂದ ಬರುವ ಮುಸಲ್ಮಾನರಂತೂ ಮೇಲೆ ಹೇಳಿದ ನಡವಳಿಕೆಗಳನ್ನು ಅನುಸರಿಸುವುದರಲ್ಲಿ ಅಗ್ರಗಣ್ಯರು. ಇದ್ದುದರಲ್ಲಿ ದಕ್ಷಿಣ ಇಂಡಿಯಾ ದಿಂದ ಬಂದ ಮುಸಲ್ಮಾನ ವಿದ್ಯಾರ್ಥಿಗಳ ಪೈಕಿ ಕೆಲವರಾದರೂ ದೇಶ ಭಕ್ತಿ ಉಳ್ಳವರಾಗಿದ್ದು, ಬೇರೆಯವರ ಎದುರಿಗಾದರೂ ತಮ್ಮಲ್ಲಿ ರುವ ದ್ವೇಷವನ್ನು ತೋರಿಸಿಕೊಳ್ಳುವುದಿಲ್ಲ. ಉತ್ತರ ಇಂಡಿಯಾ ದವರಂತೂ ನಿರ್ದಾಕ್ಷಿಣ್ಯವಾಗಿ ಇಂಡಿಯಾದ ಮೇಲೆ ದ್ವೇಷ ಸೂಚಿಸಿರುತ್ತಾರೆ.

ಇತಂಹ ಪ್ರವೃತ್ತಿಯನ್ನು ನೋಡಿದಾಗ ಉಳಿದ ಇಂಡಿಯಾದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಎಂತಹ ಪರಿಣಾಮ ಉಂಟಾಗ ಬಹುದು ಎಂಬುದನ್ನು ವಾಚಕರೇ ಊಹಿಸಿಕೊಳ್ಳಬಲ್ಲರೆಂದು ನಂಬುತ್ತೇನೆ.

ನಮ್ಮ ದೇಶದಲ್ಲಿ ನಮ್ಮ ನಾಯಕರುಗಳು ಮುಸಲ್ಮಾನರ ವಿಷಯದಲ್ಲಿ ಸಹನೆಯಿಂದ ಇರುವಂತೆ ಮಾಡಲು ಎಷ್ಟೊಂದು ರೀತಿಯಲ್ಲಿ ಯತ್ನ ಮಾಡುತ್ತಿದ್ದಾರೆ ಎಂಬುದನ್ನು ನೋಡಿರುವ ನಮಗೆ, ಮುಸಲ್ಮಾನ ವಿದ್ಯಾರ್ಥಿಗಳು ಅಮೆರಿಕಾದಲ್ಲಿ ನಡೆದು ಕೊಳ್ಳುವ ರೀತಿ ನೋಡಿದರೆ ನಿಜವಾಗಿಯೂ ನಮ್ಮ ಸರಕಾರ ವನ್ನು ನಿಂದಿಸಬೇಕೆಂಬ ಮನಸ್ಸು ಬರುತ್ತದೆ. 1965ರಲ್ಲಿ ಪಾಕಿ ಸ್ತಾನ ಮತ್ತು ಇಂಡಿಯಾಗಳ ನಡುವೆ ಯುದ್ಧವಾದಾಗ ಅಲ್ಲಿದ್ದ ಮುಸಲ್ಮಾನ್ ವಿದ್ಯಾರ್ಥಿಗಳ ನಡವಳಿಕೆಯನ್ನು ನೋಡಿದವರಿಗೆ ಗೊತ್ತು, ಇವರುಗಳಲ್ಲಿ ಇಂಡಿಯಾ ಕಂಡರೆ ಎಷ್ಟು ಅಭಿಮಾನವಿದೆ ಎಂದು. ಪ್ರತಿನಿತ್ಯ ಸಾಯಂಕಾಲ C. B. S; N. B. C. ಮತ್ತು A.B.C. ಟೆಲಿವಿಷನ್ ಸಂಸ್ಥೆಗಳು ಅಮೆರಿಕಾ, ಕೆನಡಾ, ಮೆಕ್ಸಿಕೋ ಆದ್ಯಂತ ಪಾಕಿಸ್ತಾನ ಮತ್ತು ಇಂಡಿಯಾ ಯುದ್ಧಕ್ಕೆ ಸಂಬಂಧಪಟ್ಟಂತೆ ಚಿತ್ರಗಳನ್ನು ಮತ್ತು ವಾರ್ತೆಗಳನ್ನು ಪ್ರದರ್ಶಿಸು ತ್ತಿದ್ದವು. N.B.C. ಮತ್ತು A.B.C. ಸಂಸ್ಥೆಗಳಂತೂ ಪಾಕಿ ಸ್ತಾನದ ಪರ ಪ್ರಚಾರ ಮಾಡುತ್ತಿದ್ದವು. ಇದ್ದುದರಲ್ಲಿ C.B.S. ಸಂಸ್ಥೆ ಸ್ವಲ್ಪ ನಿಜಾಂಶ ಪ್ರಕಟಣೆ ಮಾಡುತ್ತಿತ್ತು. ಅಲ್ಲಿದ್ದ ಮುಸಲ್ಮಾನ್ ವಿದ್ಯಾರ್ಥಿಗಳ ಪೈಕಿ ನೂರಕ್ಕೆ 98 ಜನ ಪಾಕಿಸ್ತಾನ ಇನ್ನೇನು ಗೆದ್ದುಬಿಟ್ಟಿತು ಎಂದು ಸಂತೋಷದಿಂದ ಟೆಲಿವಿಷನ್‌ಗಳ ಮುಂದೆಯೆ ನಲಿದಾಡುತ್ತಿದ್ದರು. ಯಾವ ಅಮೆರಿಕನ್ ಪ್ರಜೆ ಮುಂದೆ ಹೋದರೂ ಪಾಕಿಸ್ತಾನದ ಪರ ಹೊಗಳಿಕೆ ಮತ್ತು ಪ್ರಚಾರವೇ ಆಗಿತ್ತು.

ಲಾಲ್‌ಬಹದ್ದೂರ್ ಶಾಸ್ತ್ರಿಯವರು ಜನವರಿ 1966ರಲ್ಲಿ ನಿಧನ

ರಾವರು ಎಂಬ ಸುದ್ದಿಯನ್ನು ಪ್ರಸಾರ ಮಾಡಿದ ಒಡನೆಯೇ ಇಂಡಿಯಾದ ಅನೇಕ ಮುಸಲ್ಮಾನ್ ವಿದ್ಯಾರ್ಥಿಗಳು ಪಾಕಿಸ್ತಾನ ವಿದ್ಯಾರ್ಥಿಗಳೊಡನೆ ಮತ್ತು ಅರಬ್ಬರೊಡನೆ ಸೇರಿಕೊಂಡು ಭೋಜನಕೂಟಗಳನ್ನು ಏರ್ಪಡಿಸಿದರು. ಹೀಗಿದೆ ನಮ್ಮ ದೇಶದಿಂದ ಬರುವ ನಮ್ಮ ಸ್ನೇಹಿತರುಗಳ ನಡವಳಿಕೆ. ಇದರ ಜೊತೆಗೆ ಇವರು ಸ್ಥಳೀಯ ಪತ್ರಿಕೆಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳು ಹೊರಡಿಸುವ ಪತ್ರಿಕೆಗಳಲ್ಲಿ ಇಂಡಿಯಾದ ಸ್ಥಿತಿಗತಿಗಳನ್ನು ಕುರಿತು ಕೀಳು ಮಟ್ಟದ ಲೇಖನಗಳನ್ನು ಬರೆಯುತ್ತಾರೆ. ಇವರು ಎಂತಹ ಅಪಪ್ರಚಾರ ಮಾಡುತ್ತಾರೆ ಎಂಬುವಕ್ಕೆ ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಕಟವಾಗುವ ಪ್ರಮುಖ ದಿನಪತ್ರಿಕೆ ನ್ಯೂಯಾರ್ಕ್ ಟೈಮ್ಸ್‌ನ ಜುಲೈ 12, 1970ರ ಸಂಚಿಕೆಯನ್ನು ವಾಚಕರು ಪರೀಕ್ಷಿಸಿದರೆ ಸಾಕು. ಅಂದಿನ ಸಂಚಿಕೆಯಲ್ಲಿ ಕೊನೆ ಪುಟದಲ್ಲಿ ಅಮೆರಿಕಾದಲ್ಲಿರುವ ಮುಸಲ್ಮಾನರು ಸೇರಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಇಂಡಿಯಾದ ಎಲ್ಲಾ ಕಡೆಯೂ ಮುಸಲ್ಮಾನರು ಕೊಲ್ಲಲ್ಪಡುತ್ತಿದ್ದಾರೆ. ಇದಕ್ಕೆ ಸಾಕ್ಷಿ ಇಂಡಿಯಾದ ಪ್ರಧಾನಿ ಇಂದಿರಾಗಾಂಧಿ ಮತ್ತು ಶ್ರೀ ಚವಾಣರು ಕೊಟ್ಟಿರುವ ಹೇಳಿಕೆಗಳೇ ನಿದರ್ಶನ ಎಂದು ಸಾರಿದ್ದಾರೆ; ಆದುದರಿಂದ ಅಮೆರಿಕಾದಲ್ಲಿ ಮತ್ತು ಇತರ ಕಡೆ ಇರುವ ಮುಸಲ್ಮಾನರು ಇಂಡಿಯಾದ ಮುಸಲ್ಮಾನರನ್ನು ಹಿಂದೂಗಳ ರಾಕ್ಷಸೀ ಕೃತ್ಯದಿಂದ ಪಾರು ಮಾಡಬೇಕು ಮತ್ತು ಇದಕ್ಕಾಗಿ ಹೋರಾಡಬೇಕು ಎಂದು ಪ್ರಕಟಿಸಿದ್ದಾರೆ. ಈ ಲೇಖನಗಳಿಗೆ ಅಲ್ಲಿರುವ ಜನರಿಂದ ಎಲ್ಲೂ ಇಲ್ಲದ ಪ್ರಚಾರ. ಆದರೆ ಇವರುಗಳ ವಿಷಯವನ್ನು ಚೆನ್ನಾಗಿ ತಿಳಿದು

ಕೊಂಡಿರುವವರು ಅಂದರೆ ನಿಜವಾಗಿಯೂ ವಿದ್ವಾಂಸರೆಂದು ಕರೆಯಿಸಿಕೊಳ್ಳುವ ಅಮೆರಿಕನ್ ಪ್ರೊಫೆಸರುಗಳು. ಇವರುಗಳು ಏನೇ ಪ್ರಚಾರ ಮಾಡಿದರೂ ವಿಶ್ವವಿದ್ಯಾನಿಲಯಗಳಲ್ಲಿರುವ ಹಿರಿಯ ಪ್ರೊಫೆಸರುಗಳು ಇಂಡಿಯಾವನ್ನು ಬಹಳ ಗೌರವದಿಂದ ಕಾಣು ತ್ತಾರೆ. ಕಳೆದ 22 ವರ್ಷಗಳಲ್ಲಿ ಇಂಡಿಯಾ ಇಷ್ಟೊಂದು ತೊಂದರೆ ಗಳನ್ನು ಅನುಭವಿಸಿದರೂ ಪ್ರಜಾಪ್ರಭುತ್ವದ ಮಾರ್ಗ ಬಿಡದೆ ಇಷ್ಟರಮಟ್ಟಿನ ಪ್ರಗತಿಯನ್ನು ಸಾಧಿಸಿರುವುದಕ್ಕೆ ಬಹಳ ಸಂತೋಷ ಪಡುತ್ತಾರೆ. ಆದರೆ ಅಮೆರಿಕನ್ ಜನಸಾಮಾನ್ಯರಿಗೆ ಇಂಡಿಯಾದ ಸಮಸ್ಯೆಗಳ ಅರಿವು ಇಲ್ಲದಿರುವುದರಿಂದ ಅವರುಗಳು ಸುಲಭವಾಗಿ ಅಪಪ್ರಚಾರಕ್ಕೆ ಕಿವಿಗೊಡುತ್ತಾರೆ.

ನಿಷ್ಠಾವಂತರಾದ ಮತ್ತು ದೇಶ ಪ್ರೇಮಿಗಳಾದ ಕೆಲವು ಇಂಡಿ ಯಾದ ವಿದ್ಯಾರ್ಥಿಗಳು ತಮ್ಮ ಸ್ನೇಹಿತರಿಂದ ಉಂಟಾಗುವ ಅಪ ಪ್ರಚಾರವನ್ನು ಸಹನೆಯಿಂದ ಎದುರಿಸಬೇಕಾಗುತ್ತದೆ. ಇದರ ಜೊತೆಗೆ ತಮ್ಮ ಸ್ನೇಹಿತರು, ಕೆಟ್ಟ ನಡವಳಿಕೆಗಳನ್ನು ಅವರುಗಳ ಜೀವನದಲ್ಲಿ ಅಳವಡಿಸಿಕೊಂಡು ಕಡೆಗೆ ಇಂಡಿಯಾ ದೇಶಕ್ಕೆ ವಾಪಸ್ಸು ಬರದೆ, ಅಲ್ಲೇ ಇದ್ದುಕೊಂಡು ಹೇಗೋ ಜೀವನ ನಡೆಸುವುದನ್ನು ಕಂಡು ಮರುಕಪಡಬೇಕಾಗುತ್ತದೆ.

ನಮ್ಮ ತಂದೆ ತಾಯಿಗಳು ನಮ್ಮನ್ನು ವಿದೇಶಗಳಲ್ಲಿ ವ್ಯಾಸಂಗ ಮಾಡಲು ಕಳುಹಿಸುವಾಗ ಸಾಲ ಮಾಡಿ ನಮಗೆ ಹಣ ಒದಗಿಸು ತ್ತಾರೆ. ನಮ್ಮಗಳ ವಿಷಯದಲ್ಲಿ ಬಹಳ ಪ್ರೇಮ ಇಟ್ಟುಕೊಂಡು ನಾವು ವಿದ್ಯಾವಂತರಾಗಿ ಬಂದಮೇಲೆ ನಾವು ಉನ್ನತ ರೀತಿಯಲ್ಲಿ ನಡೆದುಕೊಳ್ಳುತ್ತೇವೆ ಎಂದು ಅವರು ಭರವಸೆ ಇಟ್ಟುಕೊಂಡಿರು

ತ್ತಾರೆ. ನಮ್ಮಲ್ಲಿ ಕೆಲವರು ಲಗ್ನವಾದ ಮೇಲೆ ಹೋಗುತ್ತೇವೆ. ಅಂತಹ ಸಂದರ್ಭಗಳಲ್ಲಿ ನಮ್ಮ ಪತ್ನಿಯರು ಇಲ್ಲೇ ಉಳಿದುಕೊಂಡು ನಮ್ಮ ಬರುವಿಕೆಗಾಗಿ ಕಾತುರದಿಂದ ಇರುತ್ತಾರೆ. ಇಷ್ಟೆಲ್ಲ ನಮಗೆ ತಿಳಿದಿದ್ದರೂ ನಮ್ಮಲ್ಲಿ ಕೆಲವರು ಆ ದೇಶದಲ್ಲೇ ಉಳಿದುಬಿಟ್ಟು ಎಲ್ಲರಿಗೂ ನಿರಾಶೆಯನ್ನುಂಟುಮಾಡುತ್ತೇವೆ. ಇದಕ್ಕೆ ಮುಖ್ಯ ಕಾರಣ ನಮ್ಮ ನಡವಳಿಕೆ ಮತ್ತು ನಮ್ಮಲ್ಲಿರುವ ಮನೋ ದೌರ್ಬಲ್ಯ.

ಹಿಂದೆ ತಿಳಿಸಿರುವಂತೆ ನಾವುಗಳು ಹೋದ ಒಡನೆಯೆ ಅನೇಕ ರೀತಿ ಸಮಸ್ಯೆಗಳಿಗೆ ಒಳಗಾಗುತ್ತೇವೆ. ಅಂತಹ ಸಂದರ್ಭದಲ್ಲಿ ಏನಾದರೂ ಮಾಡಿ ಪದವಿ ತರಬೇಕೆಂದು ನಮ್ಮಲ್ಲಿ ಕೆಲವರು ಆರು ಅಥವಾ ಏಳು ವರ್ಷಗಳು ಉಳಿದುಕೊಳ್ಳುತ್ತೇವೆ. ನಾವು ಮನೆಯ ಬಂಧನಗಳಿಲ್ಲದೆ ಅಲ್ಲಿ ವಾಸಿಸುವುದರಿಂದ ಅಲ್ಲಿಯ ಸಮಾಜದ ಮುಷ್ಕಟಗಳಿಗೆ ಸುಲಭವಾಗಿ ಮಾರು ಹೋಗುತ್ತೇವೆ. ಆ ಸಮಾಜ ದಲ್ಲಿ ವಿದ್ಯೆ ಕಲಿತು ನಮ್ಮ ಜ್ಞಾನಾರ್ಜನೆಯನ್ನು ಅಭಿವೃದ್ಧಿ ಪಡಿಸಿ ಕೊಳ್ಳಲು ಎಷ್ಟು ಪ್ರೋತ್ಸಾಹವಿದೆಯೋ ಅಷ್ಟೇ ಪ್ರೋತ್ಸಾಹ ನಮ್ಮ ಜೀವನವನ್ನು ಹಾಳುಮಾಡಿಕೊಳ್ಳಲು ಇದೆ. ನಾವುಗಳು ಅನುತ್ತೀರ್ಣರಾದಾಗ ಮನಸ್ಸಿಗೆ ಬಹಳ ದುಗುಡವಾಗುತ್ತದೆ. ಏಕ್ಕು ತೋಚದಂತಾಗುತ್ತದೆ. ಅವಮಾನ ನಮ್ಮನ್ನು ಬಾಧಿಸು ತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ನಾವು ಕೆಲವು ಅಮೆರಿಕನ್ ಸ್ನೇಹಿತರನ್ನು ಆಶ್ರಯಿಸುತ್ತೇವೆ. ಅವರುಗಳು ನಮ್ಮನ್ನು ಸುಲಭ ವಾಗಿ ಅವರ ಸಮಾಜದ ನಡುವಳಿಕೆಗಳಿಗೆ ಸರಿ ಹೊಂದುಕೊಳ್ಳು ವಂತೆ ಬಲಾತ್ಕರಿಸುತ್ತಾರೆ. ಮೊದಲು ಅವರು ತಾವು ಕಲಿತಿರುವಂತೆ

ನಮಗೂ ಮದ್ಯ ಸೇವನೆ ಮಾಡಲು ಪ್ರೋತ್ಸಾಹಿಸುತ್ತಾರೆ. ಸಾಮಾನ್ಯವಾಗಿ ಅವರುಗಳಲ್ಲಿ ಮದ್ಯ ಕುಡಿಯದೆ ಇರುವವರನ್ನು ನೋಡುವುದು ಬಹಳ ಅಪರೂಪ. ಅವರ ಪ್ರತಿನಿತ್ಯದ ಜೀವನ ಮದ್ಯ ಸೇವನೆಯಿಂದ ಆರಂಭವಾಗುತ್ತದೆ. ವಿದ್ಯಾರ್ಥಿಗಳಲ್ಲಂತೂ ಈ ಚಟ ಬಹಳವಾಗಿರುತ್ತದೆ. 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಗಳು ಕುಡಿಯಬಾರದೆಂಬ ನಿಯಮವಿದೆ. ಆದರೆ ಅನೇಕರು ಕದ್ದು ಕುಡಿಯುತ್ತಾರೆ. ಜೊತೆಗೆ ನಮ್ಮೊಡನೆ ಮಾಸ್ಟರ್ ತರಗತಿ ಗಳಲ್ಲಿ ಓದುವವರಿಗೆ ಸಾಮಾನ್ಯವಾಗಿ 21 ವರ್ಷಕ್ಕಿಂತ ಹೆಚ್ಚಿಗೆ ವಯಸ್ಸಾಗಿರುತ್ತದೆ. ಆದುದರಿಂದ ಅವರು ಯಾವ ನಿರ್ಬಂಧವೂ ಇಲ್ಲದೆ ಮನಸ್ಸಿಗೆ ಬಂದಂತೆ ಕುಡಿಯುತ್ತಿರುತ್ತಾರೆ. ಆದುದರಿಂದ ನಮ್ಮಲ್ಲಿ ಅನೇಕರು ಮೊದಲು ಮದ್ಯ ಕುಡಿಯುವ ಚಟಕ್ಕೆ ಒಳಗಾಗುತ್ತೇವೆ.

ಇದಾದ ಮೇಲೆ ಮತ್ತೊಂದು ದುಶ್ಚಟಕ್ಕೆ ಬೀಳುತ್ತೇವೆ. ಅಲ್ಲಿಯ ಸಮಾಜದಲ್ಲಿ ಲೈಂಗಿಕ ವಿಷಯದಲ್ಲಿ ಸ್ವೇಚ್ಛಾ ಪ್ರವೃತ್ತಿಗೆ ಅವಕಾಶವಿದೆ. ಹೆಣ್ಣು ಮಕ್ಕಳೂ ಕೂಡ ಕುಡಿಯುವುದು ಮತ್ತು ಧೂಮಪಾನ ಮಾಡುವ ಅಭ್ಯಾಸವನ್ನು ಚೆನ್ನಾಗಿ ಬೆಳೆಯಿಸಿಕೊಂಡಿ ರುತ್ತಾರೆ. ಅಲ್ಲಿಯ ಅನೇಕ ಯುವಕರು ಹೆಣ್ಣು ಮಕ್ಕಳೊಡನೆ ಸ್ವೇಚ್ಛೆಯಿಂದ ವರ್ತಿಸುತ್ತಾರೆ. ಹೆಣ್ಣು ಮಕ್ಕಳನ್ನು ತಮ್ಮ ಕಡೆಗೆ ಆಕರ್ಷಿಸಿಕೊಳ್ಳಲು ತಮ್ಮ ಖರ್ಚಿನಿಂದ ಹೆಣ್ಣು ಮಕ್ಕಳಿಗೆ ಮನ ಸಾರೆ ಕುಡಿಸುತ್ತಾರೆ. ಅನಂತರ ಅವರು ಮೈ ಮರೆತಾಗ ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳುತ್ತಾರೆ. ಹೆಣ್ಣು ಮಕ್ಕಳ ಮೇಲಾ ಗಲೀ ಅಥವ ಗಂಡು ಮಕ್ಕಳ ಮೇಲಾಗಲೀ ತಂದೆ ತಾಯಂದಿರ

ಹತೋಟಿ ಸ್ವಲ್ಪವೂ ಇರುವುದಿಲ್ಲ. ಸಮಾಜದ ಕಟ್ಟಳೆಗಳಂತೂ ಇಲ್ಲವೇ ಇಲ್ಲ. ಪ್ರತಿ ರಾತ್ರಿ ನರ್ತನ ಮಾಡುವ ನೆಪದಲ್ಲಿ ಇವರುಗಳು ಕ್ಲಬ್ಬುಗಳಲ್ಲಿ ಅಥವ ನರ್ತನ ಶಾಲೆಗಳಲ್ಲಿ ಒಟ್ಟಾಗಿ ಸೇರುತ್ತಾರೆ. ಅಲ್ಲಿ ಇರುವುದು ಎರಡು ಮುಖ್ಯ ಕಾರ್ಯಗಳು: (1) ಮನಸಾರೆ ಮದ್ಯ ಕುಡಿಯುವುದು; (2) ಕಾಮ ಪ್ರಚೋದನೆಯ ಕಾರ್ಯಗಳಲ್ಲಿ ತೊಡಗುವುದು. ಇಂತಹ ಸ್ಥಳಗಳಿಗೆ ನಮ್ಮ ಸ್ನೇಹಿತರಲ್ಲಿ ಕೆಲವರನ್ನು ಅಮೇರಿಕನ್ ಸ್ನೇಹಿತರು ಕರೆದೊಯ್ಯುತ್ತಾರೆ. ಇದರ ಪರಿಣಾಮ ಏನೆಂದರೆ ನಾವುಗಳೂ ಕೂಡ ಅದೇ ರೀತಿ ಪಶುಗಳಂತೆ ವರ್ತಿಸುವುದನ್ನು ಕಲಿಯುತ್ತೇವೆ. ವಿಶ್ವವಿದ್ಯಾನಿಲಯದ ಆವರಣಗಳಲ್ಲಿ, ಪುಸ್ತಕ ಭಂಡಾರಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲೇ ಯುವಕ ಯುವತಿಯರು ಸಾಕಷ್ಟು ಕಾಮ ಪ್ರಚೋದನೆಯ ಕಾರ್ಯಗಳಲ್ಲಿ ತೊಡಗುತ್ತಾರೆ. ಅದರ ವಿಷಯ ಹೆಚ್ಚಿಗೆ ಬರೆಯದಿರುವುದು ಕ್ಷೇಮವೆಂದು ನಾನು ಇಲ್ಲಿಗೆ ನಿಲ್ಲಿಸುತ್ತೇನೆ. ಇನ್ನು ಕ್ಲಬ್ಬುಗಳಲ್ಲಿ ಮತ್ತು ನರ್ತನ ಗೃಹಗಳಲ್ಲಿ ಎಷ್ಟರ ಮಟ್ಟಿಗೆ ಇರುತ್ತಾರೆ ಎಂಬುದನ್ನು ವಾಚಕರೇ ಊಹಿಸಿಕೊಳ್ಳಿ. ಇಂತಹ ಸಹವಾಸವನ್ನು ನಮ್ಮಲ್ಲಿ ಕೆಲವರು ಬೆಳೆಯಿಸಿಕೊಳ್ಳುವುದರಿಂದಲೇ ಕಡೆಯಲ್ಲಿ ನಾವು ಇಂಡಿಯಾಕ್ಕೆ ವಾಪಸ್ಸು ಹೋಗಬಾರದೆಂಬ ನಿರ್ಧಾರಕ್ಕೆ ಬರುತ್ತೇವೆ. ಮದುವೆಯಾಗುವುದಕ್ಕೆ ಮುನ್ನವೇ ಎಲ್ಲಾ ರೀತಿಯ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಲು ಅವಕಾಶವಿರುವುದರಿಂದ ನಮ್ಮಗಳಲ್ಲಿ ಕೆಲವರು ಮನಸ್ಸಿಲ್ಲದಿದ್ದರೂ ಕಡ್ಡಾಯವಾಗಿ ಅಲ್ಲಿಯ ಸ್ತ್ರೀ ಒಬ್ಬಳನ್ನು ಲಗ್ನವಾಗಬೇಕಾಗುತ್ತದೆ. ಆಗ ನಮ್ಮ ಮನೆಯವರನ್ನೆಲ್ಲಾ ಮರೆತು, ಲಗ್ನವಾದ ಹೆಂಡತಿಯನ್ನು

ಮರೆತು, ಮಕ್ಕಳನ್ನು ಮರೆತು ಕಡೆಗೆ ಯಾವುದೋ ಒಂದು ಹುದ್ದೆ ಹುಡುಕಿಕೊಂಡು ಜೀವನ ಸಾಗಿಸಲು ಪ್ರಾರಂಭಿಸುತ್ತೇವೆ. ನಮ್ಮ ತಂದೆ ತಾಯಿಗಳ ಭರವಸೆಯನ್ನೆಲ್ಲಾ ಮಣ್ಣುಪಾಲು ಮಾಡುತ್ತೇವೆ. ನಮ್ಮನ್ನು ಲಗ್ನವಾಗಿದ್ದ ಹೆಂಡತಿಯು ಸದಾಕಾಲ ಕಣ್ಣೀರು ಹಾಕಿಕೊಂಡು ಇಲ್ಲಿ ತಂದೆ ತಾಯಿಗಳ ಆಶ್ರಯದಲ್ಲಿ ಜೀವನ ಸಾಗಿಸುವಂತೆ ಮಾಡುತ್ತೇವೆ. ಇದರಿಂದಲೇ ನಮ್ಮ ದೇಶದಲ್ಲಿ ಅನೇಕ ಸಂಸಾರಗಳು ಸಂಕಟ ಅನುಭವಿಸುತ್ತಿರುವುದು, ನಾವು ಕಲಿತ ವಿದ್ಯೆಯ ಬಲದಿಂದ ಸಮಾಜದ ಪರಿಣಾಮಗಳನ್ನು ಎದುರಿಸುವುದರ ಬದಲು ಅಲ್ಲಿಯ ವಾತಾವರಣಕ್ಕೆ ಬಲಿಯಾಗುತ್ತೇವೆ.

ಇದುವರೆಗೆ ಯಾವ ರೀತಿ ಇಂಡಿಯಾದ ಕೆಲವು ವಿದ್ಯಾರ್ಥಿಗಳು ಅಮೆರಿಕಾದಲ್ಲಿ ನಡೆದುಕೊಳ್ಳುತ್ತಾರೆ ಎಂದು ವರ್ಣಿಸಲಾಗಿದೆ. ನಮ್ಮ ಸಮಾಜವನ್ನು ನಾವೇ ದೂಷಿಸಲು ಹೊರಡುವುದರಿಂದ ಅಮೆರಿಕನರಿಗೆ ನಮ್ಮನ್ನು ಕಂಡರೆ ಇನ್ನೆಷ್ಟು ಗೌರವವಿರುತ್ತದೆ ಎಂಬುದನ್ನು ವಾಚಕರೇ ಊಹಿಸಬಲ್ಲರು ಎಂದು ಭಾವಿಸುತ್ತೇನೆ. ಮೊದಲೇ ಸಾಮಾನ್ಯ ಅಮೆರಿಕನರಿಗೆ ನಮ್ಮ ದೇಶವನ್ನು ಕಂಡರೆ ಒಂದು ರೀತಿಯ ತುಚ್ಛ ಭಾವನೆ ಇದೆ. ಬ್ರಿಟಿಷ್ ಸಾಮ್ರಾಜ್ಯದ ಭಾಗವಾಗಿ ಇಂಡಿಯಾ ಉಳಿದುಕೊಂಡಿದ್ದಾಗ ಇಂಡಿಯಾಕ್ಕೆ ಬಂದುಹೋದ ಪಾಶ್ಚಿಮಾತ್ಯ ಲೇಖಕರಲ್ಲಿ ಅನೇಕರು ಇಂಡಿಯಾದ ವಿಷಯವಾಗಿ ಕೀಳು ಮಟ್ಟದ ಲೇಖನಗಳನ್ನು ಮತ್ತು ಪುಸ್ತಕಗಳನ್ನು ಬರೆದು ಪ್ರಚಾರಮಾಡಿ ಅಮೆರಿಕರ ಮನಸ್ಸಿನಲ್ಲಿ ಸಾಕಷ್ಟು ಕೆಟ್ಟ ಅಭಿಪ್ರಾಯ ಮೂಡಿಸಿದ್ದಾರೆ. ಇದರ ಜೊತೆಗೆ ನಮ್ಮ ಸ್ನೇಹಿತರುಗಳು ತಮ್ಮ ನಡವಳಿಕೆಯಿಂದ ನಮ್ಮ ದೇಶದ ಗೌರವ

ವನ್ನು ಮತ್ತಷ್ಟು ಕುಂದಿಸಿದ್ದಾರೆ ಎಂದು ಬರೆಯಲು ತುಂಬಾ ವಿಷಾದವಾಗುತ್ತದೆ.

ಇಂತಹ ದುಷ್ಪರಿಣಾಮಕ್ಕೆ ನಮ್ಮ ಸ್ನೇಹಿತರಲ್ಲಿ ಕೆಲವರು ಕಾರಣರಾದರೂ, ಪ್ರತಿಭಾವಂತರಾದ ಮತ್ತು ನಿಷ್ಠಾವಂತರಾದ ಕೆಲವು ಇಂಡಿಯಾದ ವಿದ್ಯಾರ್ಥಿಗಳು ಅಮೆರಿಕಾದಲ್ಲಿ ಒಂದು ಸದಭಿಪ್ರಾಯ ಮಾತ್ರ ಮೂಡಿಸಲು ಕಾರಣರಾಗಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತದೆ. ಪ್ರಪಂಚದಲ್ಲಿ ಹಿಂದುಳಿದಿರುವ ಅನೇಕ ರಾಷ್ಟ್ರಗಳಿಂದ ಅಮೆರಿಕಾಕ್ಕೆ ವಿದ್ಯಾರ್ಥಿಗಳು ಬರುತ್ತಾರೆ. ಆದರೆ ಹಿಂದುಳಿದ ರಾಷ್ಟ್ರಗಳ ವಿದ್ಯಾರ್ಥಿಗಳ ಪೈಕಿ ಇಂಡಿಯಾದ ವಿದ್ಯಾರ್ಥಿಗಳೇ ಅತ್ಯಂತ ಬುದ್ಧಿವಂತರು ಎಂಬ ಮನ್ನಣೆಯನ್ನು ಅನೇಕ ಅಮೆರಿಕನ್ ಪ್ರೊಫೆಸರುಗಳಿಂದ ಪಡೆದಿದ್ದಾರೆ. ಅದರ ಪರಿಣಾಮವಾಗಿಯೆ ಈಗಲೂ ಸುಮಾರು ಹತ್ತು ಸಾವಿರ ಇಂಡಿಯಾದ ವಿದ್ಯಾರ್ಥಿಗಳಿಗೆ ಅಮೆರಿಕಾದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಓದಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಅಧ್ಯಾಯ ೬

ಉಪ ಸಂಹಾರ

ಹಿಂದಿನ ಅಧ್ಯಾಯಗಳಲ್ಲಿ ಇಂಡಿಯಾದ ವಿಧ್ಯಾರ್ಥಿಗಳು ಯಾವ ರೀತಿ ಸ್ನಾತಕೋತ್ತರ ವಿದ್ಯಾಭ್ಯಾಸದ ಸಮಸ್ಯೆಗಳನ್ನು ಎದುರಿಸುತ್ತಾರೆ ಎಂದು ವಿವರಿಸಲಾಗಿದೆ. ವಿದ್ಯಾಭ್ಯಾಸಕ್ಕಾಗಿ ಇಂಡಿಯಾದಿಂದ ಬಂದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ಮೇಲೆ ಯಾವ ರೀತಿ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳಾಗುತ್ತವೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಇಷ್ಟೆಲ್ಲಾ ವಿವರಗಳನ್ನು ಈ ಪುಸ್ತಕದಲ್ಲಿ ಬರೆದು ಯಾರ ಮನಸ್ಸನ್ನೂ ನೋಯಿಸಬೇಕೆಂಬುದು ನನ್ನ ಉದ್ದೇಶವಲ್ಲ. ಅದರ ಬದಲು ಸತ್ಯ ಸಂಗತಿಗಳನ್ನು ನಮ್ಮ ಸಮಾಜಕ್ಕೆ ತಿಳಿಸಿ ನಮ್ಮ ದೇಶದ ಗೌರವ ಕಾಪಾಡಬೇಕೆಂಬುದೆ ನನ್ನ ಮುಖ್ಯ ಉದ್ದೇಶ. ಅಮೆರಿಕಾ ದೇಶದಿಂದ ವಾಪಸ್ಸು ಬಂದ ಮೇಲೆ ನಮ್ಮಲ್ಲಿ ಅನೇಕರು ಆದರ್ಶ ಜೀವನ ನಡೆಸುವುದರ ಬದಲು, ದುಶ್ಚಟಗಳಿಂದ ಕೂಡಿದ ಜೀವನ ನಡೆಸುತ್ತಾರೆ. ಇವರುಗಳನ್ನೆಲ್ಲಾ ನೋಡಿದಾಗಲೆಲ್ಲಾ ನನ್ನಲ್ಲಿ ಒಂದು ಭಾವನೆ ಬರುತ್ತಿತ್ತು. ಅಮೆರಿಕ ದೇಶಕ್ಕೆ ಹೋಗಿ ಬಂದರೆ ನಮ್ಮ ಸಮಾಜದ ಗೌರವವನ್ನು ಕಾಪಾಡಿಕೊಂಡು ಆದರ್ಶ ಜೀವನ ಸಾಗಿಸಲು ಸಾಧ್ಯವಿಲ್ಲವೇ ಎಂದು. ಅದಕ್ಕೆ ಉತ್ತರವನ್ನು ನಾನೇ ಕಂಡು ಹಿಡಿದುಕೊಂಡೆ. ಯಾವ ಸಮಾಜದಲ್ಲಿದ್ದರೂ ನಮಗೆ ಬೇಕಾಗಿರುವುದು ಧೃಡ ಮನಸ್ಸು ಮತ್ತು ನಮ್ಮ ಸಂಸ್ಕೃತಿಯಲ್ಲಿ

ನಮಗೆ ಅಚಲ ನಂಬಿಕೆ. ಇವೆರಡೂ ಇಲ್ಲದಿದ್ದರೆ ನಾವು ಎಲ್ಲಿದ್ದರೂ ಮನುಷ್ಯತ್ವವನ್ನು ಕಳೆದುಕೊಳ್ಳುತ್ತೇವೆ, ನಮ್ಮ ಕೆಲವು ಸ್ನೇಹಿತರು ವಾಪಸ್ಸು ಬಂದ ಮೇಲೆ ಆ ಸಮಾಜದ ವಾತಾವರಣವನ್ನೇ ಇಲ್ಲಿಯೂ ಬೆಳೆಸಲು ಸಾಕಷ್ಟು ಶ್ರಮವಹಿಸಿದ್ದಾರೆ. ಅದರ ಫಲ ಈಗ ನಮ್ಮ ಸಮಾಜದಲ್ಲೂ ಆರಂಭವಾಗಿದೆ. ನಮ್ಮ ನಗರಗಳಲ್ಲಿರುವ ವಿಲಾಸಿ ಹೋಟೆಲುಗಳೇ ಇದಕ್ಕೆ ಸಾಕ್ಷಿ.

ಆದರೆ ನಾವು ಅಮೆರಿಕಾದಲ್ಲಿರುವಂತೆ ಒಳ್ಳೆಯ ವಿದ್ಯಾಭ್ಯಾಸ ಪದ್ಧತಿಯನ್ನು ಬೆಳೆಸುವುದಕ್ಕೆ ಯತ್ನಿಸಲಿಲ್ಲ. ಅವರ ಹಾಗೆ ಕಷ್ಟಪಟ್ಟು ದುಡಿಯುವುದನ್ನಾಗಲೀ, ಅವರಲ್ಲಿರುವ ಹಾಗೆ ಪ್ರಾಮಾಣಿಕತೆ ಮತ್ತು ದೇಶ ಭಕ್ತಿಗಳನ್ನಾಗಲೀ ನಮ್ಮ ಜೀವನದಲ್ಲಿ ಮತ್ತು ಸಮಾಜದಲ್ಲಿ ಅಳವಡಿಸಿಕೊಳ್ಳಲಿಲ್ಲ. ಆದರ ಬದಲು ಅವರ ಸಮಾಜದ ದುಷ್ಟಟಗಳನ್ನು ಸುಲಭವಾಗಿ ಅನುಕರಣೆ ಮಾಡಿ, ಆಚರಣೆಗೆ ತಂದು, ನಮ್ಮ ವಿದ್ಯಾರ್ಥಿಗಳಲ್ಲೂ ಪಶುತ್ವ ಭಾವನೆಗಳು ವೃದ್ಧಿಯಾಗಲು ಎಷ್ಟು ಬೇಕೋ ಅಷ್ಟನ್ನು ಮಾಡಿದ್ದೇವೆ. ಈಗಲಾದರೂ ನಮ್ಮ ಸಮಾಜದ ಹಿರಿಯರುಗಳು, ವಿದ್ವಾಂಸರುಗಳು, ವಿಚಾರಪರರು ಮತ್ತು ದೇಶಪ್ರೇಮಿಗಳು ಎಚ್ಚೆತ್ತುಕೊಂಡು ಸಮಾಜದಲ್ಲಿ ಬೆಳೆಯುತ್ತಿರುವ ದುಶ್ಚಟಗಳನ್ನು ತಡೆ ಹಿಡಿಯದಿದ್ದರೆ ಇನ್ನು ಕೆಲವೇ ವರ್ಷಗಳಲ್ಲಿ ಇಂಡಿಯಾವು ಪ್ರಾಚ್ಯ ದೇಶಗಳಲ್ಲಿ, ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಬೆಳೆಸಿ ಉಳಿಸಿಕೊಂಡು ಹೋಗುವ ದೇಶವಾಗಿ ಮಾರ್ಪಾಡಾಗುತ್ತದೆ. ಒಂಟಿಯಾಗಿ ತಮ್ಮ ಹೆಣ್ಣು ಮಕ್ಕಳನ್ನು ಉನ್ನತ ವ್ಯಾಸಂಗಕ್ಕೆಂದು ಕಳುಹಿಸುವ ತಂದೆ, ತಾಯಿಗಳಿಗಂತೂ ವಿನಯ ಪೂರ್ವಕವಾಗಿ ಒಂದು ಮಾತನ್ನು

ಹೇಳಲಿಚ್ಛಿಸುತ್ತೇನೆ. ಒಂಟಿಯಾಗಿ ಹೋಗಿ ಆ ದೇಶಗಳಲ್ಲಿ ಓದು ತ್ತಿರುವ ಹೆಣ್ಣು ಮಕ್ಕಳ ಪೈಕಿ ಬಹು ಮಂದಿ ತಮ್ಮ ಚಾರಿತ್ರ್ಯ ವನ್ನು ಉಳಿಸಿಕೊಂಡಿಲ್ಲವೆಂದು ಬಹು ದುಃಖದಿಂದ ತಿಳಿಸಲು ಇಚ್ಛಿಸುತ್ತೇನೆ. ನಮ್ಮ ವಿದ್ಯಾರ್ಥಿನಿಯರಲ್ಲಿ ಅನೇಕರು ಅಲ್ಲಿ ನಡೆದುಕೊಳ್ಳುವ ರೀತಿಯನ್ನು ನೋಡಿದವರಿಗೆ ಅವರುಗಳು ಇಂಡಿಯಾಕ್ಕೆ ವಾಪಸ್ಸು ಬಂದಮೇಲೆ ನಿಜವಾಗಿಯೂ ನಮ್ಮ ಸಮಾಜದ ಉದ್ಧಾರಕ್ಕೆ ಶ್ರಮಿಸಬಲ್ಲರೇ ಎಂಬ ಶಂಕೆ ನಮ್ಮಲ್ಲಿ ಮೂಡಿ ಬರುತ್ತದೆ. ಇಂತಹ ವಾತಾವರಣದಲ್ಲಿ ಇದ್ದು ಇಂಡಿಯಾಕ್ಕೆ ಬಂದ ಮೇಲೆ ನಮ್ಮ ಸಮಾಜದ ಕಟ್ಟಳೆಗಳಿಗೆ ಹೊಂದಿ ಕೊಳ್ಳುವಂತೆ ನಡೆದುಕೊಂಡು ಹೋಗುವುದು ಅವರಿಗೆ ಕಷ್ಟ ವಾಗುತ್ತದೆ. ಆದುದರಿಂದಲೇ ಅನೇಕ ಹೆಣ್ಣು ಮಕ್ಕಳು ಅಲ್ಲಿಯೇ ಉಳಿದುಕೊಳ್ಳಲು ತೀರ್ಮಾನಿಸುತ್ತಾರೆ. ಅಕಸ್ಮಾತ್ ವಾಪಸ್ಸು ಬಂದರೂ ನಮ್ಮ ಸಮಾಜದಲ್ಲಿ ಇರಲು ಇಷ್ಟ ಪಡದೆ ವಾಪಸ್ಸು ಹೋಗಲು ಯತ್ನಿಸುತ್ತಿರುತ್ತಾರೆ.

ಈ ಪುಸ್ತಕದಲ್ಲಿ ನಾನು ಬರೆದಿರುವ ವಿಷಯಗಳಿಂದ ಯಾರ ಮನಸ್ಸಿಗಾದರೂ ನೋವಾಗಿದ್ದರೆ ಕ್ಷಮೆ ಕೋರುತ್ತೇನೆ. ನಮ್ಮ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಮನಸ್ಸು ಮಾಡಿ ಅಮೆರಿಕಾ ದಂತೆ ಉನ್ನತ ಮಟ್ಟದ ವಿದ್ಯಾಭ್ಯಾಸ ಪದ್ಧತಿಯನ್ನು ಬೆಳಸಿ ನಮ್ಮ ದೇಶದ ಅಭಿವೃದ್ಧಿಗೆ ಕಾರಣರಾಗಲೆಂದು ಪ್ರಾರ್ಥಿಸುತ್ತೇನೆ.